
# ಅಖಿಲ ಭಾರತ ಪತ್ರಿಕೆ

## ನವೆಂಬರ್ 2021



# ಸದ್ಭಾವದೊಂದಿಗೆ...

ಬೆಲೆ : 15/-



ಅನಂತಾನಂತದಾ ಕೇಂದ್ರವಿದುವು ಈ ನನ್ನ ಹೃದಯ–ಪದ್ಮ
ನನ್ನ ದೇಹವಿದು ಬಿಂದು ತಾನೀಗ ವ್ಯಾಪ್ತಗೊಳ್ಳಲೆನೆ ಆತ್ಮ

**– ಶ್ರೀ ಅರವಿಂದರ ಕವಿತೆ**

**ಅನು: ಪುಟ್ಟು ಕುಲಕರ್ಣಿ**

**ಫೋಟೊ: ಇಮೇಜಿಂಗ್ ಸಾವಿತ್ರಿ**

**ಅಖಿಲ ಭಾರತ ಪತ್ರಿಕೆ**

**ನವೆಂಬರ್ 2021**

ಸಂಪುಟ: 31 ಸಂಚಿಕೆ: 11



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


# ಪರಿವಿಡಿ

## ಸದ್ಭಾವದೊಂದಿಗೆ...

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಸದ್ಭಾವ ಮತ್ತು ಪ್ರಗತಿ** 7
**ಸದಾಶಯ ಮತ್ತು ಸಾಧನೆ** 8
**ಸೌಹಾರ್ದತೆ ಮತ್ತು ಮಾನವೀಯ ಸಂಬಂಧಗಳು** 11
ಅನು: ಶ್ರೀ ಪುಟ್ಟು ಕುಲಕರ್ಣಿ

**ದಯಾಭಾವ ಮತ್ತು ಸಮುದಾಯ–ಜೀವನ** 12
**ಪ್ರಸನ್ನತೆ ಮತ್ತು ಮಾನವೀಯತೆ** 14
**ಶುಭೇಚ್ಛೆ ಮತ್ತು ಶಿಕ್ಷಣ** 18
ಅನು: ಡಾ॥ ಮಹಾದೇವ ಸಕ್ರಿ

**ಸದುದ್ದೇಶ ಮತ್ತು ಶರೀರ** 20
ಅನು: ನಾಗಜ್ಯೋತಿ ಮಾನ್ವಿ

**ಶುಭೇಚ್ಛೆ, ಮಾರ್ಗದರ್ಶನದ ಇಚ್ಛಾಶಕ್ತಿ** 25
ಅನು: ಪ್ರೊ. ವೀರಭದ್ರಪ್ಪ ಕೆ.

**ಶ್ರೀ ಅರವಿಂದರ 'ಪೂರ್ಣಯೋಗದ ಸ್ವರೂಪ'** 31
ಮೂಲ: ನಲಿನಿಕಾಂತ ಗುಪ್ತಾ
ಕನ್ನಡ: ಸಿಂಪಿ ಲಿಂಗಣ್ಣ

**ಶ್ರೀ ಅರವಿಂದರ 'ವೇದ ರಹಸ್ಯ'** 38
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ "ಋಗ್ವೇದದ ಪ್ರಥಮ ಋಕ್"** 44
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಕವನ 'ಆತ್ಮದ ಅನಂತತೆ'** 54
ಅನು: ಶ್ರೀ ಪುಟ್ಟು ಕುಲಕರ್ಣಿ

**ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು** 55
– ಡಾ॥ ಶಂ.ಬಾ. ಜೋಶಿ

**ಶ್ರೀ ಅರವಿಂದರು–150**
**ಸಾಧಕರು: ಪೂರ್ಣಯೋಗದ ಪಥಿಕ "ಮಧುರಚೆನ್ನರು"** 61
– ಡಾ॥ ಎಸ್.ಕೆ. ಕೊಪ್ಪಾ, ಇಂಡಿ

**ವಾರ್ತಾಪತ್ರ** 66

## ಅತಿಥಿ ಸಂಪಾದಕೀಯ

ನಾವು ನಮ್ಮ ಪೂರ್ಣ ಸಾಮರ್ಥ್ಯದೊಂದಿಗೆ ಆರೋಹಣದಲ್ಲಾಗಲೀ ಅಥವಾ ಪ್ರಗತಿಯತ್ತ ಸಾಗಲು ಅಭೀಪ್ಸೆಯಲ್ಲಿ ಇದ್ದಾಗ, ಅದರಲ್ಲೂ "ಪೂರ್ಣಯೋಗ'ದಲ್ಲಿ ಇರುವ ಸವಾಲಿನ ಪಥದಲ್ಲಿ, ಪ್ರತಿಯೊಂದು ಹಂತದಲ್ಲೂ ಹಲವಾರು ಅವಶ್ಯಕ–ವಾಗಿರುವ – ಪ್ರಾಮಾಣಿಕತೆ, ವಿನಮ್ರತೆ, ಶಾಂತ ಮತ್ತು ಸಮಚಿತ್ತ, ಅಭೀಪ್ಸೆ ಅಥವಾ ಆಕಾಂಕ್ಷೆ, ನಿರಾಕರಣೆ (ಮಮಕಾರ ರಹಿತವಾಗುವಿಕೆ), ಶರಣಾಗತಿ (ಸಮರ್ಪಣೆ) – ಸಂಗತಿಗಳಿವೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದದ್ದು **"ಸದ್ಭಾವನೆ"**. ಹಾಗಾದರೆ ಈ 'ಸದ್ಭಾವ'ದ ಅರ್ಥವಾದರೂ ಏನು? ಇದು ಎಲ್ಲಿ ಲಭ್ಯವಾಗುವದು? ನಮ್ಮ ಸಾಧನಾ ಪಥದಲ್ಲಿ ಮತ್ತು ನಮ್ಮ ಜೀವನದಲ್ಲಿದೆಯೇ? ಇದು ನಮಗೆ ಅತ್ಯಂತ ಪರಿಚಿತವಾಗಿರುವ ಪದವಾಗಿದೆ. ಇದನ್ನು ಅತ್ಯಂತ ಲಘುತರದ ಮನೋಭಾವ–ದಲ್ಲಿಯೇ ಬಳಸೀ ಬಳಸೀ ಆ ಶಬ್ದವನ್ನೇ ಕ್ಲೀಷೆಯ ಹಂತಕ್ಕೆ ತಂದುಕೊಂಡಿದ್ದೇವೆ. ಆದರೆ ಇದು ನಿಜವಾಗಿಯೂ ಅರ್ಥಪೂರಿತವಾಗಿರುವ ತತ್ತ್ವವಾಗಿದೆ. ಅರ್ಥದಲ್ಲಿಯೂ ಸಮರ್ಥವಾಗಿದೆ. ಜೊತೆಗೆ ಕ್ರಿಯಾ ಪರಿವರ್ತನಕಾರಿಯೂ ಆಗಿದೆ. ಇದು ನಮ್ಮ ಮನೋಚೇತನದ ಮೇಲೆಯೇ ಆಧಾರಗೊಂಡಿರುತ್ತದೆ. ಆದರೆ, ನಮ್ಮ ಜಗತ್ತು ಎಂದು ಪರಿಭಾವಿಸಿಕೊಂಡಿರುವ ವಲಯದಲ್ಲಿ ನಾವು ಸಿಲುಕಿಕೊಂಡು, ಅದರಲ್ಲೂ ಈ ಕ್ಷಣವನ್ನು ಪಡೆದುಕೊಳ್ಳಬೇಕೆಂದು ಬಯಸುವ ಎಲ್ಲರೂ, ಈ ರೀತಿಯಲ್ಲಿ ಮಾನವ ಸಂವಹನಗಳ ಜಾಲದೊಳಗೆ ಬಂಧಿಸಲ್ಪಟ್ಟೇ ಉಳಿದುಕೊಂಡಿರುತ್ತೇವೆ. ಈ ರೀತಿಯ ವ್ಯವಹರಣೆಯೇ 'ಅಹಂಕಾರ'ವನ್ನು ರೂಪಿಸುತ್ತದೆ. ಆದರೆ ಈ ವಲಯದಿಂದ ನಾವು ಮುಕ್ತರಾಗಲು ಅವಕಾಶವಿದೆ; ಸಾಧ್ಯವೂ ಇದೆ. ಅದರೊಂದಿಗೆ, ಹೃದಯದ ಕಾಂತಿಪೂರ್ಣತೆಯ ಸ್ಪಂದನದೊಂದಿಗೆ, ಕರುಣೆಯಿಂದ ತುಂಬಿರುವ ಮತ್ತು ಸಾಮರಸ್ಯದ ಭೂಮಿಕೆಯಲ್ಲಿ, ಮತ್ತು ಮುಕ್ತವಾಗಿರುವಲ್ಲಿ, ಅದರೊಡನೆ ಅಂತರ್ಗತಗೊಳ್ಳುವಲ್ಲಿ ಸಾಧ್ಯವಿದೆ. ಇದು ಹೆಚ್ಚು ಪ್ರೋತ್ಸಾಹದಾಯಕವಾಗಿಯೂ ಮತ್ತು ಕೃತಜ್ಞತಾ ಸ್ವಭಾವವನ್ನು ರೂಪಿಸಿಕೊಳ್ಳುವಲ್ಲಿ ಸಹಾಯಕವಾಗಿರುವದರ ಜೊತೆಗೆ ದಿವ್ಯತ್ವದ ಕಡೆಗೆ ಪಯಣಿಸಲು ಸಹಕಾರಿಯಾಗಿರುತ್ತದೆ.

ಈ ರೀತಿಯ 'ಸದ್ಭಾವನೆ'ಯೊಂದಿಗೆ ಇಲ್ಲಿ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಅಭಿವ್ಯಕ್ತಿಗಳನ್ನು ಇಲ್ಲಿ ರೂಪಿಸಲಾಗಿದೆ. ಇವೆರಡನ್ನೂ ನಾವು ಸೂಕ್ತವಾಗಿ ಅರಿತು, ಸ್ಪಂದನಗೊಳ್ಳಲು ಅವರು ಅತ್ಯಪೂರ್ವವಾಗಿರುವ ಸದವಕಾಶವನ್ನು ಒದಗಿಸಿದ್ದಾರೆ. [ಎಐಎಮ್]

*

## ಸಂಪಾದಕೀಯ

### "ಸದ್ಭಾವ"ದ ಆಯಾಮಗಳು

ಆಂಗ್ಲ ಭಾಷೆಯ 'ಗುಡ್‌ವಿಲ್' ಎನ್ನುವದು ಸಹಜಾರ್ಥದಲ್ಲಿ 'ಸದ್ಭಾವ' ಎನ್ನುವ ರೀತಿಯಲ್ಲಿಯೇ ವ್ಯವಹರಿಸಲಾಗುತ್ತಿದ್ದರೂ, ಈ ಶಬ್ದಕ್ಕೆ ಇರುವ ಆಯಾಮಗಳು ಅಸಂಖ್ಯಾತ. ಪ್ರಕೃತಿಯ ವೈವಿಧ್ಯತೆಯಂತೆಯೇ ಇದೂ ಸಹಿತ ವಿವಿಧ ಸ್ವರೂಪದಲ್ಲಿದ್ದಂತೆ ಕಂಡರೂ ಅತ್ಮದ ಮಿಡಿತ ಮಾತ್ರ ಒಂದೇ ಶ್ರುತಿಯಲ್ಲಿ ಇರುತ್ತದೆ. ಪ್ರಜ್ಞಾ ವಿಕಾಸದ ಯಾನದಲ್ಲಿ ಮಾನವನ ಬದುಕು ಹಲವು ಸಂಕೀರ್ಣಮಯ ಪರೀಕ್ಷೆಗಳಲ್ಲಿ ಸಿಲುಕಿಕೊಂಡರೂ, ಅವುಗಳನ್ನು ಯಶಸ್ವಿಯಾಗಿ ಪರಿಹರಿಸಿಕೊಂಡು ಪ್ರಗತಿ ಸಾಧಿಸಿದೆ; ಸಾಧಿಸುತ್ತಿದೆ. ಮನುಕುಲದ ಮೂಲ ಸೃಷ್ಟಿಗೆ ಏನು ಕಾರಣ ಎನ್ನುವ ಪ್ರಶ್ನೆ, ಜಿಜ್ಞಾಸೆಯ ಬೀಜ ಅಂಕುರಗೊಂಡ ದಿನದಿಂದಲೇ ಪ್ರಾರಂಭಗೊಂಡಿದೆ. ಹಲವಾರು ಚಿಂತನಶೀಲ ಯುಗಪುರುಷರ ಮೂಲಕ ಒಂದೊಂದು ಆಯಾಮ ಪಡೆದುಕೊಂಡು 'ಪೂರ್ಣ'ವಾಗುವತ್ತ ಪಯಣ ಮಾಡಿಕೊಂಡೇ ಬಂದಿದೆ. ಈ ಪೂರ್ಣಯೋಗದ ನವೀನ ಮಾರ್ಗವನ್ನು ಶ್ರೀ ಅರವಿಂದರು ತೋರಿ, ಆ ಗಮ್ಯದೆಡೆಗೆ ಮನುಕುಲ ಹೆಜ್ಜೆ ಇಡಬೇಕು ಎನ್ನುವದನ್ನು ಸೂತ್ರ ಸ್ವರೂಪದಲ್ಲಿ ತೋರಿಸಿದ್ದಾರೆ.

'ಸದ್ಭಾವದಲ್ಲಿ' ಪ್ರಗತಿಯ ಬೀಜ ಅಡಗಿದೆ; ಇದನ್ನು 'ಸದಾಶಯ'ದ ಸಾಧನೆಯಲ್ಲಿಯೇ ಅರಳಿಸಿಕೊಳ್ಳಬೇಕು; ವೈವಿಧ್ಯತೆಯಿಂದ ಕೂಡಿರುವ ಈ ಪ್ರಕೃತಿಯಲ್ಲಿ ಮತ್ತು ಈ ಪ್ರಕೃತಿಯ ಒಂದು ಅಂಶವೇ ಆಗಿರುವ "ಜೀವನ"ದಲ್ಲಿ, ಮನುಷ್ಯ ಕೇವಲ ಏಕಮೇವಾದ್ವಿತೀಯ ಜೀವಿಯಲ್ಲ. ಆದರೆ ಆ ಭಾವನೆಯಲ್ಲಿ ಸಂಕುಚಿತಗೊಂಡಿದ್ದಾನೆ. ಪ್ರಕೃತಿಯ ಪ್ರತಿಯೊಂದು ಕಣವೂ ಜೀವದಿಂದ ಸ್ಪಂದಿಸುತ್ತದೆ. ಪರಸ್ಪರ 'ಸೌಹಾರ್ದತೆ'ಯು ಆ ಸ್ಪಂದನಕ್ಕೆ ತೋಷವನ್ನು ತರುತ್ತದೆ. 'ಮಾನವೀಯ ಸಂಬಂಧ'ಗಳು ಎಂದರೆ ಕೇವಲ ಮನುಷ್ಯ ಮನುಷ್ಯರ ಮಧ್ಯದ ವ್ಯವಹಾರಗಳಿಗೆ ಮಾತ್ರ ಅಲ್ಲ. ಅದು ನಿಸರ್ಗದ ಜೊತೆಗೂ ಇರಬೇಕಾಗುತ್ತದೆ. ಆಗ ಮಾತ್ರ ವಿಕಾಸದ ಪಥವು ಸುಗಮವಾಗಿ ಪಯಣ ಮಾಡಲು ಸಹಕರಿಸುತ್ತದೆ.

'ದಯಾ ಭಾವ'ವು ಪ್ರತಿಜೀವಿಯೊಂದಿಗೂ ಇರಬೇಕು. ಇದು ವಿಶ್ವ ಸಾಮರಸ್ಯಕ್ಕೆ ಅತ್ಯಾವಶ್ಯಕವಾಗಿದೆ. ದಯೆ ಎನ್ನುವದು ಕರುಣೆಯ ಸ್ವರೂಪದ ಬಂಧನವಾಗಬಾರದು. ನಿಯತಿಯ ಪ್ರಕಾರವಾಗಿ ಘಟಿಸಿದ ಘಟನೆಯನ್ನು, ಅದರ

ಅಂತರಾಳವನ್ನು ಅರಿಯದೇ ತಕ್ಷಣದ ಪ್ರತಿಕ್ರಿಯೆಯಲ್ಲಿ ಕ್ರಿಯೆಗಿಳಿದಾಗ ಅದು ಕ್ರಮೇಣ ಕ್ರಾಂತಿಯ ಮನೋಭಾವಕ್ಕೆ ಕರೆದೊಯ್ಯುವ ಅಪಾಯವಿರುತ್ತದೆ. ಉತ್ಕ್ರಾಂತಿಯ ಮೂಲಕ ಚಲಿಸುವ ಶಾಂತ ಸ್ವರೂಪದ ಅಲೆಗಳಲ್ಲಿ, ಪಯಣ ಎಷ್ಟೇ ದೂರವಿದ್ದರೂ, ಜಯಿಸಬಹುದಾಗಿದೆ. ಹೀಗಾಗಿ 'ದಯಾ ಭಾವ'ವು ವಿಕಾಸದ ಪಥವನ್ನು, ಮನೋವೈಶಾಲ್ಯತೆಯ ತಂತುವಿನ ಮೂಲಕ ಜೋಡಿಸುತ್ತದೆ. ಇದೇ 'ಸಮುದಾಯ'ದ ಪರಿಕಲ್ಪನೆಗೆ ನಾಂದಿಯಾಗುತ್ತದೆ. ಭೌಗೋಳಿಕವಾಗಿ ಬೆರೆ ಬೇರೆ ಸ್ವರೂಪವಿದ್ದರೂ, ಪಂಚಭೂತಾತ್ಮಕವಾಗಿರುವ ಹಂತದಲ್ಲಿ, ಎಲ್ಲವೂ ಸಮಸ್ಪಂದಿಯಾಗಿರುತ್ತದೆ. ಇದು ವೈಶ್ವಿಕ ನಿಯತಿಯೂ ಹೌದು. ಸಾಮುದಾಯಿಕವಾಗಿಯೇ ವಿಕಾಸ ಪ್ರಕ್ರಿಯೆಯು ನಡೆದು, ಇಡೀ ಸಮುದಾಯವೇ ಅತಿಮಾನವ ಸ್ವರೂಪಕ್ಕೆ ತಲುಪಬೇಕೆನ್ನುವದು 'ಪೂರ್ಣಯೋಗದ' ಆಂತರ್ಯವಿದೆ. ಹೀಗಾಗಿ ಸಮುದಾಯದ ವೈವಿಧ್ಯಮಯ ಹಂತಗಳಲ್ಲಿ ಸಾಮರಸ್ಯದ ಸ್ವರೂಪದಲ್ಲಿ ಐಕ್ಯತೆಯ ರೂಪಣೆಯತ್ತ ಪ್ರಚಲಿತ ಪಯಣವಿದೆ.

ಈ ರೀತಿಯ ವಾತಾವರಣದಿಂದ 'ಪ್ರಸನ್ನತೆ'ಯ ಉಗಮ ಪ್ರಕೃತಿ ಸಹಜವಾಗಿರುತ್ತದೆ. ಇದೇ ಪ್ರಸನ್ನತೆಯು ಮಾನವೀಯತೆಯ ವಾತಾವರಣವನ್ನು ರೂಪಿಸುತ್ತದೆ. ಇದು ಮುಂದಿನ ಪೀಳಿಗೆಗೆ ಸತತವಾಗಿ ಲಭ್ಯಗೊಳ್ಳುವಂತೆ, ಅಂತರ್ಝರಿಯಾಗಿ ಸದಾ ಸಂರಕ್ಷಿಸುವಂತೆ 'ಶುಭೇಚ್ಚೆ'ಗಳನ್ನೇ ಕಲಿಕಾ ವಿಧಾನಗಳನ್ನಾಗಿಸಿ ಶಿಕ್ಷಣದ ನೀತಿಗಳು ಸಹಜ ಉಸಿರಾಗುತ್ತವೆ. ಶಿಕ್ಷಣ ಎನ್ನುವದು ವಿಕಾಸದ ಪಥವಾಗಿದೆ. ವಿಕಾಸದ ಗುರಿ ಪೂರ್ಣತ್ವವನ್ನು ಪಡೆಯುವದಾದಲ್ಲಿ, ಪಥವೂ ಪೂರ್ಣತ್ವದ ಅಂಶವಾಗಿಯೇ ಇರಬೇಕು. ಅದಕ್ಕಾಗಿ ಯಾವಾಗಲೂ 'ಶುಭೇಚ್ಛೆ'ಗಳನ್ನೆ ಹೊಂದಿರಬೇಕೆಂದು ಶಿಕ್ಷಣ ವ್ಯವಸ್ಥೆಗಳು ರೂಪಿತಗೊಳ್ಳುತ್ತವೆ. ಇದು 'ಸದುದ್ದೇಶ'ವೂ ಆಗಿದೆ. ಇಂತಹ ಉದ್ದೇಶದ ಅನುಷ್ಠಾನಕ್ಕಾಗಿ, ಪೂರ್ಣತ್ವದ ಅನುಭಾವವನ್ನು ಹೊಂದುವದರ ಸಲುವಾಗಿಯೇ ರೂಪಿಸಲ್ಪಟ್ಟಿರುವ ಈ 'ಶರೀರ' ವ್ಯವಸ್ಥೆಯು ಆಗ ಸುವ್ಯವಸ್ಥಿತವಾಗಿಯೆ ಸಹಕರಿಸುತ್ತದೆ. ಈ ಶರೀರವು ಕೇವಲ 'ಯಾಂತ್ರಿಕ ಸ್ವರೂಪ'ದಲ್ಲಿ ಸೃಷ್ಟಿಸಲ್ಪಟ್ಟಿಲ್ಲ. ವಿಶ್ವದ ರಹಸ್ಯಗಳನ್ನೆಲ್ಲವನ್ನೂ ಅರಿಯಬಲ್ಲ, ಅವುಗಳೊಡನೆ ಸ್ಪಂದಿಸಬಲ್ಲ ಹಾಗೂ ಅವುಗಳೊಡನೆ ಸಮ್ಮಿಲಗೊಳ್ಳಬಲ್ಲ ಸರ್ವ ಸಾಮರ್ಥ್ಯವೂ ಈ ಶರೀರಿಕ್ಕೆ ಸಿಗುವದು, 'ಸದುದೇಶ'ದಿಂದ ಉಸಿರಾಟ ನಡೆಸಿದಾಗ ಮಾತ್ರ. ಹೀಗಾಗಿಯೇ ಈ "ಶುಭೇಚ್ಛೆ"ಯು ಮಾರ್ಗದರ್ಶನದ ಇಚ್ಛಾಶಕ್ತಿಯೂ ಅಗಿದೆ.

ಇದಕ್ಕಾಗಿ, ಈಗಾಗಲೇ ರೂಪಿತಗೊಂಡಿರುವ ಎಲ್ಲಾ 'ದೃಷ್ಟಿಕೋನಗಳ' ಸೂಕ್ತವಾದ ಸಂಯೋಗದ ಅವಶ್ಯಕತೆ ಇದೆ. ಇಲ್ಲಿಯವರೆಗೂ ಚಿಂತನಾ ವ್ಯವಸ್ಥೆಯಲ್ಲಿ ರೂಪಿತಗೊಂಡು, ಅನುಷ್ಠಾನಗೊಂಡು, ಹಲವಾರು ಜಿಜ್ಞಾಸೆಗಳ ಮುಖಾಂತರ ನವನವೀನ ಆಯಾಮಗಳನ್ನು ಪಡೆದುಕೊಂಡು ಬಂದಿರುವ 'ವಿಕಾಸ ಪಥದ' ಎಲ್ಲ ಮಾರ್ಗಗಳೂ ಇದೀಗ ಒಂದು ನಿಗದಿತ ಹಂತದೆಡೆ ತಲುಪುವ ಅವಧಿ ಇದಾಗಿದೆ. ಇದನ್ನೇ 'ಪೂರ್ಣಯೋಗ'ವೆಂದು ಶ್ರೀ ಅರವಿಂದರು ದೃಷ್ಟಾರ ವಾಣಿಯಲ್ಲಿ ರೂಪಿಸಿದ್ದಾರೆ.

ಪೂರ್ಣಯೋಗಕ್ಕೆ ಅತ್ಯಾವಶ್ಯಕವಾಗಿರುವ ಈ "ಗುಡ್–ವಿಲ್" ಎನ್ನುವದು ಈ ರೀತಿಯಲ್ಲಿ "ಸದ್ಭಾವವಾಗಿ, ಸದಾಶಯವಾಗಿ, ಸೌಹಾರ್ದತೆ, ದಯಾಭಾವ, ಪ್ರಸನ್ನತೆ, ಶುಭೇಚ್ಛೆ...." ಎಂದೆಲ್ಲಾ ಆಯಾಮಗಳಲ್ಲಿ ರೂಪಣೆಗೊಂಡು, ಮಾನವ ಕುಲಕ್ಕೆ ಮಾರ್ಗದರ್ಶಿ ಸೂತ್ರದ ಸ್ವರೂಪದಲ್ಲಿ ಇರುತ್ತದೆ.

ಈ ಸಂಚಿಕೆಯಲ್ಲಿ ಈ ಎಲ್ಲ ಆಯಾಮಗಳ ಸಂಕ್ಷಿಪ್ತ ವಿವರಗಳನ್ನು ರೂಪಿಸಲು ಯತ್ನಿಸಲಾಗಿದೆ. ಸಾಧನಾ ಪಥದಲ್ಲಿ ಸಾಗಿ, ಅನುಷ್ಠಾನಗೊಳಿಸಿಕೊಂಡ ವ್ಯಕ್ತಿಗಳ ಪರಿಚಯದ ಸಲುವಾಗಿ – ಕನ್ನಡ ನಾಡಿನಲ್ಲಿ ಈ ರೀತಿಯಲ್ಲಿ ಮಾರ್ಗದರ್ಶಿಯಾಗಿರುವ 'ಮಧುರಚೆನ್ನರ' ವಿವರಗಳನ್ನು ಕಾಣಬಹುದು. [ಪಿಪಿಕೆ]

## ಸದ್ಭಾವ ಮತ್ತು ಪ್ರಗತಿ



**ಸ್ಥೈರ್ಯಪೂರ್ಣ ಸದ್ಭಾವ**

ತದನಂತರದಲ್ಲಿ ಇಲ್ಲಿ ಖಚಿತವಾಗಿಯೂ ಪ್ರಗತಿಯ ಸಲುವಾಗಿ ಅಭೀಪ್ಸೆಯೂ ಇರಲೇಬೇಕಾಗುತ್ತದೆ: ಇದು ಕೇವಲ ಆ ವ್ಯಕ್ತಿ ಏನು ಇದ್ದಾನೆ, ಹೇಗೆ ಇದ್ದಾನೆ, ಅವನು ಏನು ಮಾಡುತ್ತಾನೆ ಅಥವಾ ಅವನು ಏನನ್ನು ಅರಿತುಕೊಂಡಿದ್ದಾನೆ ಅಥವಾ ಚಿಂತನವನ್ನು ನಡೆಸುತ್ತಾನೆಯೋ ಎನ್ನುವದಷ್ಟೇ ಅಲ್ಲ: ಆದರೆ ಇದಕ್ಕೂ ಅಧಿಕ ಪ್ರಮಾಣದ ಅರಿವನ್ನು ಪಡೆದುಕೊಳ್ಳಲು, ಇದಕ್ಕಿಂತಲೂ ಅತ್ಯುತ್ತಮವಾದುದನ್ನು ಹೊಂದಲು, ಮತ್ತೂ ಕಾಂತಿಮಯ ಜ್ಯೋತಿಯ ಪ್ರಕಾಶವನ್ನು ಕಾಣಲು, ಅವಕಾಶ ವ್ಯಾಪ್ತದ ಚೇತನವನ್ನು ಪಡೆದುಕೊಳ್ಳಲು, ಸತ್ಯದ ಮೂಲಸ್ವರೂಪದೊಂದಿಗೆ ಇರುವ ವೈಶ್ವಾತ್ಮಕವಾಗಿರುವ ಸದ್ಗುಣವನ್ನು ಹೊಂದುವ ಸಲುವಾಗಿ ಅಭೀಪ್ಸೆಯನ್ನು ರೂಪಿಸಿಕೊಳ್ಳಬೇಕಾಗಿದೆ. ಇವೆಲ್ಲಕ್ಕಿಂತಲೂ ಮಿಗಿಲಾಗಿ, ಎಂದಿಗೂ ಪತನಗೊಳ್ಳದಂತಿರುವ 'ಸದ್ಭಾವ'ವನ್ನು ಹೊಂದಬೇಕಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/205)**

# ಸದ್ಭಾವ ಮತ್ತು ಪ್ರಗತಿ

**– ಅನುವಾದ: ಪುಟ್ಟು ಕುಲಕರ್ಣಿ**

ಸರ್ವಸ್ವವೂ ಆಗಮಿಸುತ್ತದೆ, ಹೌದು ಖಚಿತವಾಗಿ ಆಗಮಿಸುತ್ತದೆ. ನಿಮ್ಮ ಸುತ್ತಲೂ ಈ ಎಲ್ಲ ವಸ್ತು–ವಿಷಯಗಳನ್ನು ಸುವ್ಯಸ್ಥಿತಗೊಳಿಸುತ್ತಿರುವ, ಪರಿಪೂರ್ಣವಾಗಿರುವ ಹಾಗೂ ನಿರ್ವಿಕಲ್ಪ ಚೇತನದ ಆವರಣವೇ ಇದ್ದರೂ, ನೀವು ನಿಮ್ಮದೇ ಆದ ಅಜ್ಞಾನದ ವಾತಾವರಣದಲ್ಲಿಯೇ ಇರುವದರಿಂದ ಅದನ್ನು ಗುರುತಿಸಲು ಅಸಮರ್ಥರಾಗುತ್ತೀರಿ. ಅಥವಾ ಅವು ತಮ್ಮ ಸ್ವಸ್ವರೂಪದೊಳಗೆ ತೋರುತ್ತಿರುವದನ್ನು ಗುರುತಿಸಲು ಆ ಸಂದರ್ಭಗಳಲ್ಲಿ ವಿರೋಧವನ್ನು ತೋರುತ್ತೀರಿ. ಒಮ್ಮೊಮ್ಮೆ ಆಪಾದನೆಯನ್ನೂ ಸಹಿತ ಮಾಡಬಹುದು, ಅಥವಾ ಅವುಗಳನ್ನು ಬದಲಿಸಲೂ ಯತ್ನಿಸಬಹುದು; ಆದರೆ, ಕೆಲ ಅವಧಿಯ ನಂತರದಲ್ಲಿ, ಯಾವಾಗ ನೀವು ಪ್ರಜ್ಞಾವಂತರಾಗುತ್ತೀರೋ, ಮತ್ತು ನಿಮ್ಮ ಹಾಗೂ ಆ ಸಂದರ್ಭಗಳ ಮಧ್ಯದಲ್ಲಿ ಕೆಲವೊಂದಿಷ್ಟು ಅಂತರ ಉಳಿದುಕೊಂಡಿರುತ್ತದೆಯೋ, ಹಾಗಿದ್ದರೂ ಪರವಾ ಇಲ್ಲ, ಅಲ್ಲಿರುವದು ನೀವು ನಿಜವಾಗಿಯೂ ಅಪೇಕ್ಷಿಸುವ ಅಂದರೆ ಪ್ರಗತಿಯ ಸಲುವಾಗಿ ಇರುವ ಆಶಯವೇ ಆಗಿರುತ್ತದೆ. ಜೊತೆಗೆ, ಇದು ಇದೇ ಇಚ್ಛೆಯೂ ಆಗಿದೆ, ಒಂದು ಪರಮೋಚ್ಚ ಸದ್ಭಾವನೆಯೂ ಆಗಿದೆ, ಏಕೆಂದರೆ ಇವೆಲ್ಲವೂ ನಿಮ್ಮ ಸುತ್ತಲೂ ಸುವ್ಯಸ್ಥಿತಗೊಂಡಿರುವ ಸಂಗತಿಗಳೇ ಆಗಿವೆ ಎನ್ನುವದು ನಿಮಗೆ ತಿಳಿದಿರಬೇಕಾದ ವಿಷಯವಾಗಿದೆ. ಒಂದು ವೇಳೆ ನೀವು ಇದನ್ನು ಸ್ವೀಕರಿಸದೇ ವಿರೋಧಿಸದರೂ ಮತ್ತು ಆಪಾದಿಸಿದರೂ ಸಹಿತ, ಅದೂ ನಿಗದಿತಗೊಂಡಂತೆಯೇ ಖಚಿತವಾಗಿ ಪರಿಣಾಮಕಾರಿಯಾಗಿಯೇ ಕ್ರಿಯೆಗೊಳ್ಳುತ್ತಿರುವ ಕ್ಷಣಗಳನ್ನು ಹೊಂದಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/176**

ಯಾವಾಗ ನೀವು ಸಂಪೂರ್ಣವಾಗಿ ಸದ್ಭಾವದಿಂದಲೇ ಕೂಡಿರುತ್ತೀರೋ, ಯಾವಾಗ ನಿಮಗೇ ಏನೂ ತಿಳಿದಿಲ್ಲ ಎನ್ನುವದನ್ನು ನೀವು ತಿಳಿದುಕೊಳ್ಳುತ್ತೀರೋ, ಮತ್ತು ಪ್ರತಿಯೊಂದನ್ನೂ ಕಲಿಯಬೇಕಾಗಿದೆ ಎನ್ನುವದನ್ನು ಅರಿತುಕೊಂಡಿರುತ್ತೀರೋ, ಆ ಕ್ಷಣದಿಂದಲೇ ನೀವು ಕೊಂಚ ಕೊಂಚವಾಗಿ ನಮ್ರವಾಗುತ್ತ ಪ್ರಗತಿಯತ್ತ ಸಾಗುತ್ತೀರಿ. ಜೊತೆಗೆ ಯಾವಾಗ ಆ ಬಲವು ನಿಮ್ಮ ಮೇಲೆ ಒತ್ತಡವನ್ನು ರೂಪಿಸುತ್ತದೆಯೋ ಆಗ ನೀವು 'ಉತ್ತರಿಸಲು ಸಮರ್ಥ'ರಾಗುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/300**

ಚೇತನದ ಪ್ರಗತಿಗಾಗಿ ಇಲ್ಲಿ ಮತ್ತೊಂದು ರೀತಿಯ ಅನುಷ್ಠಾನ ವಿಧಾನವಿದೆ. ಯಾವುದೆ ವಿಷಯಕ್ಕೂ ಎಲ್ಲಿಯವರೆಗೂ ವಿರೋಧವು ಇರುತ್ತದೆಯೋ, ಅಥವಾ ಆ ರೀತಿಯಲ್ಲಿ ನಿರ್ಣಯವನ್ನು ಕೈಕೊಂಡಲ್ಲಿ, ಅಥವಾ ಆ ಸ್ವರೂಪದಲ್ಲಿ ಕ್ರಿಯೆಗಿಳಿದಲ್ಲಿ, ಅಂತಹ ಸಂಧರ್ಭದಲ್ಲಿ ಅವನು ಎಂದಿಗೂ ತನ್ನದೇ ಆಗಿರುವ ದೃಷ್ಟಿಕೋನಕ್ಕೆ ಅಥವಾ ಪರಿಲ್ಪನೆಗೆ ಎಂದಿಗೂ ಸಮೀಪವಾಗಿರುವದಿಲ್ಲ. ಇದಕ್ಕೆ ಪರ್ಯಾಯವಾಗಿ, ಒಂದು ವೇಳೆ ಓರ್ವ ವ್ಯಕ್ತಿಯು ಮತ್ತೊಬ್ಬರ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಎಂದಾದಲ್ಲಿ, ಅಂದರೆ ಮತ್ತೊಬ್ಬನನ್ನು ತನ್ನ ಸ್ಥಾನದಲ್ಲಿ ಕಾಣಲು ಯತ್ನಿಸಿದಲ್ಲಿ, ಅದರಲ್ಲೂ ಯಾವುದೇ ಸ್ವರೂಪದ ಜಗಳ ಮತ್ತು ಹೋರಾಟಗಳನ್ನು ಮಾಡುವದಕ್ಕಿಂತ, ಅಲ್ಲಿ ಇಬ್ಬರಿಗೂ ತೃಪ್ತಿದಾಯಕವಾಗಿರುವ ಹಾಗೆ ಅನುಕೂಲಿತವಾಗಿರುವ ಹಾಗೆ ರೂಪುಗೊಳ್ಳ–ಬಹುದಾದ ಪರಿಹಾರಗಳನ್ನು ಅರಸಬೇಕು. ಇದೇ ಪ್ರತಿಯೊಬ್ಬ ಜೀವಿಗೂ ಇರಬೇಕಾಗಿರುವ **ಸದಾಶಯವಾಗಿದೆ.**

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/6**

## ಸದಾಶಯ ಮತ್ತು ಸಾಧನೆ

**– ಅನುವಾದ: ಪುಟ್ಟು ಕುಲಕರ್ಣಿ**

ಯಾವಾಗ ನೀವು ಪ್ರಾರಂಭ ಮಾಡುತ್ತೀರೋ, ನೀವು ಖಂಡಿತವಾಗಿಯೂ ಗುರಿಯ ತನಕವೂ ಮುಂದುವರೆಯಲೇಬೇಕು. ಆದರೆ, ಕೆಲವೊಮ್ಮೊಮ್ಮೆ, ಕೇವಲ ಉತ್ಸಾಹ ತುಂಬಿದವರಾಗಿ ಆಗಮಿಸುವವರಿಗೆ ನಾನು ಹೇಳುವದಿಷ್ಟೇ, ಇನ್ನೂ ಸ್ವಲ್ಪ ಯೋಚಿಸಿರಿ, ಇದೊಂದು ಸುಲಭಾತಿಸುಲಭದ ಪಥವಲ್ಲ, ನೀವು ಅದಕ್ಕಾಗಿ ತಾಳ್ಮೆಯಿಂದಲೇ ಕಾಯಬೇಕಾಗುತ್ತದೆ, ಸುದೀರ್ಘ ಅವಧಿಯವರೆಗೂ ಇರಬಹುದು, ಅದಕ್ಕಾಗಿ ನಿಮಗೆ ಸಹನೆ ಅತ್ಯಾವಶ್ಯವಾಗಿದೆ. ನಿಮಗೆ ಅವಿರತವಾಗಿರುವ ಪ್ರಯತ್ನಶೀಲತೆ ಮತ್ತು ಸಹಿಷ್ಣುತನವೂ ಅತ್ಯಾವಶ್ಯವಾಗಿ ಬೇಕಾಗುತ್ತದೆ ಅಲ್ಲದೆ ಇದರ ಜೊತೆಗೆ ಎಂದಿಗೂ ಹಿಂದೆಗೆಯದ ಹಾಗಿರುವ ಸದ್ಭಾವವೂ ಇರಬೇಕಾಗುತ್ತದೆ. ಒಂದು ವೇಳೆ ನೀವು ಈ ವಿಷಯಗಳಲ್ಲಿ ಸಾಮರ್ಥ್ಯವನ್ನು ಪಡೆದುಕೊಂಡಿದ್ದೀರಿ ಎಂದಾದಲ್ಲಿ, ನಿಮ್ಮ ಪ್ರಯಾಣವನ್ನು ಪ್ರಾರಂಭಿಸಿ. ಆದರೆ ಒಮ್ಮೆ ನಿಮ್ಮ ಪ್ರಯಾಣ ಪ್ರಾರಂಭವಾಯಿತು ಎಂದಾದಲ್ಲಿ, ಅದು ಮಂಗಳಮಯವೇ

ಆಗಿ ಸಮಾಪನಗೊಳ್ಳುತ್ತದೆ. ಅಲ್ಲಿ ತಿರುಗಿ ಹೋಗುವಂತಹ ಯಾವುದೇ ಘಟನೆಯೂ ಇರುವದಿಲ್ಲ. ನೀವು ಅದರ ಅಂತಿಮ ಬಿಂದುವಿನವರೆಗೂ ತಲುಪಿರುತ್ತಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/441**

> **ಡಾ॥ ಬೇಕರ್‌ಲಾಲ್:** ಪ್ರತಿಯೊಬ್ಬರಲ್ಲಿಯೂ ನಾವು ದೇವರನ್ನು ಹೇಗೆ ಕಾಣಬೇಕು, ಎಲ್ಲರನ್ನೂ ಪ್ರೀತಿಸುತ್ತಾ ಎಲ್ಲರಿಗೂ ಕಲ್ಯಾಣವಾಗಲಿ ಎನ್ನುವದನ್ನು ಹೇಗೆ ಸಾಧಿಸಿಕೊಳ್ಳುವದು?

**ಶ್ರೀ ಅರವಿಂದರು:** ಮೊದಲ ಹಂತದಲ್ಲಿಯೇ ಸರ್ವರಿಗೂ ಕಲ್ಯಾಣಮಯವಾಗಿರ–ಬೇಕೆಂಬ ಇಚ್ಛೆಯಿಂದಲೇ ಪ್ರಾರಂಭಿಸಬೇಕು. ತಮ್ಮನ್ನು ತಾವೇ ಆ ದಿವ್ಯತ್ವದೊಡನೆ ಸ್ಪಂದಿಸಲು ಏಕಾಗ್ರತೆಯನ್ನು ಸಾಧಿಸಿಕೊಳ್ಳಬೇಕು, ಇನ್ನಿತರರಲ್ಲಿಯೂ ದೇವರನ್ನು ಕಾಣಲು ಪ್ರಯತ್ನಿಸಿ, ನಿಮ್ಮ ಆತ್ಮಿಕ–ವ್ಯವಸ್ಥೆಯ ಮೇಲೆ ನಿಯಂತ್ರಣವನ್ನು ಹೊಂದಲು ಪ್ರಯತ್ನಿಸಬೇಕು. ಎಲ್ಲ ಪ್ರಾಣಿಕ ಮತ್ತು ಮಾನಸಿಕ ಪ್ರಚೋದನೆಗಳನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳಬೇಕು. ಈ ಆಧಾರದ ಮೇಲೆಯೇ ಸಾಕ್ಷಾತ್ಕಾರದ ಕಡೆಗೆ ಪ್ರತಿಯೊಬ್ಬನೂ ಚಲಿಸಬೇಕಾಗಿದೆ. ಚಿಂತನಗಳೆಲ್ಲವೂ ಅನುಭವಗಳಾಗುವಂತೆ ಇರಬೇಕು. ಯಾವಾಗ ಒಮ್ಮೆ ಸಾಕ್ಷಾತ್ಕಾರ ಸಾಧ್ಯವಾಗುತ್ತದೆಯೋ, ಆಗ ಸರ್ವಸ್ವವೂ ಸುಲಭವಾಗುತ್ತದೆ. ಆದರೆ ಆಗಲೂ ಸಹಿತ, ಇದೇ ಸ್ಥಿರತೆಯಲ್ಲಿಯೇ ಸುಲಭವಾಗುತ್ತದೆ. ಯಾವಾಗ ಇದು ಗತಿಶೀಲ (ಕ್ರಿಯಾತ್ಮಕ) ಅಭಿವ್ಯಕ್ತಿಯಾಗುತ್ತದೆಯೋ ಆಗ ಮಾತ್ರ ಕಠಿಣವೆನಿಸಬಹುದು. ಈ ರೀತಿಯಲ್ಲಿ, ಯಾವಾಗ ಓರ್ವ ವ್ಯಕ್ತಿಯು ನಿರ್ದಯಿ ಅಥವಾ ಪಶು ಸ್ವಭಾವದಲ್ಲಿ ವರ್ತಿಸತೊಡಗಿದಲ್ಲಿ, ಆಗ ಅವನಿಗೆ ಅವನಲ್ಲಿಯೇ ದೇವನನ್ನು ಕಾಣಲು ಸಾಧ್ಯವಾಗುವದಿಲ್ಲ. ಯಾವಾಗ ಅವನು ಬಾಹ್ಯ ಪ್ರಭಾವಗಳ ಪ್ರಭಾವದಿಂದ ತಪ್ಪಿಸಕೊಳ್ಳುತ್ತಾನೆಯೋ, ಆಗ ಮಾತ್ರ ಅವನ ರಕ್ಷಣೆಗೆ ದೈವತ್ವವು ಸದಾ ಇರುವದನ್ನು ಕಾಣುತ್ತಾನೆ.

**– ಶ್ರೀ ಅರವಿಂದರು, ಶ್ರೀ ಅರವಿಂದರೊಡನೆ ಸಂವಾದ, ಸಂ. 1, ನಿರೋದಬರನ್**

ಇಲ್ಲಿ ಸಾಧಕನಿಗೆ ಎರಡು ರೀತಿಯ ದೃಷ್ಟಿಕೋನಗಳಿವೆ – ಸರ್ವ ವಿಷಯಗಳಲ್ಲಿ ಅವುಗಳ ಆತ್ಮೀಯತೆಯ ಯಾವುದೇ ಪ್ರಮಾಣದಲ್ಲಿದ್ದರೂ ಸಹಿತ ಸಮಾನತೆಯ ಗುಣಧರ್ಮದಲ್ಲಿ ಕಾಣುವದು ಅಥವಾ ಆತಿಥ್ಯಪೂರ್ಣವಾಗಿ ಇಲ್ಲವೇ ಸರ್ವೇಸಾಮಾನ್ಯವಾದ ಸದಾಶಯದಲ್ಲಿ ಕಾಣುವದಾಗಿದೆ.

ನಾನು ಇಲ್ಲಿ ನೀವು ತೀವ್ರವಾಗಿರುವ ವಿರಕ್ತಿಭಾವವನ್ನು ಹೊಂದಬೇಕೆಂದು ಹೇಳುತ್ತಿಲ್ಲ ಅಥವಾ ನಿಮ್ಮ ಸ್ವಭಾವವನ್ನು ಸಂಪೂರ್ಣವಾಗಿ ನೀವೇ ನಿಯಂತ್ರಿಸಿಕೊಳ್ಳುವಂತೆ ಮತ್ತು ಆ ಭಾವದಿಂದ ಮೇಲೇರುವಂತೆಯೂ ಹೇಳುತ್ತಿಲ್ಲ. ಈ ಎಲ್ಲ ವಿಷಯಗಳನ್ನೂ ಬದಿಗಿರಿಸಿ. ಆಗ ನಿಮಲ್ಲಿಯೇ ಇರುವ ಶಾಂತಿಯನ್ನು ಕಾಣಲು ಸಾಧ್ಯವಾಗುವದು ಮತ್ತು ದಿವ್ಯತೆಯನ್ನು ಅನುಭವಿಸುವದು ಸಾಧ್ಯವಾಗುವದು. ಇವೇ ಇಲ್ಲಿ ಮುಖ್ಯ ವಿಷಯಗಳಾಗಿವೆ. ಇಲ್ಲಿರುವ ಸಂಘರ್ಷಗಳು ಅಹಂಕಾರದ ಹೊರಹೊಮ್ಮುವಿಕೆಯ ಚಿಲುಮೆಗಳಾಗಿವೆ. ನಿಮ್ಮ ಲಕ್ಷ್ಯವನ್ನು ಅಂದರೆ ನಿಮ್ಮನ್ನೇ ನೀವು ಒಂದೇ ಗುರಿಯತ್ತ ತಿರುಗಿಸಿಕೊಳ್ಳಿ. ಆದರೆ ಉಳಿದ ವಿಷಯಗಳಿಗೆ ಸದಾ ಈ ಸದಾಶಯವನ್ನೇ ಆಸರಿಸಿಕೊಳ್ಳಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 31/313**

ಇನ್ನಿತರರೊಂದಿಗೆ ಅಸಮಾನತೆಯ ಮನೋಭಾವದಲ್ಲಿ, ಮೆಚ್ಚಿಕೊಳ್ಳುವ ಅಥವಾ ತಿರಸ್ಕರಿಸುವ ಸ್ವಭಾವಗಳು ಮಾನವನ ಪ್ರಾಣಿಕ ಸ್ವಭಾವದಲ್ಲಿಯೇ ಅಂಶಾಂಶ–ಗಳಾಗಿಯೇ ರೂಪಗೊಂಡಿವೆ. ಈ ರೀತಿಯಾಗಲು ಕಾರಣವೆಂದರೆ, ಕೆಲವರು ತಮ್ಮದೇ ಪ್ರಾಣಿಕ ಸ್ವಭಾವದಲ್ಲಿಯೇ ಸಾಮರಸ್ಯಗೊಂಡಿರುತ್ತಾರೆ ಆದರೆ ಇನ್ನಿತರರು ಹಾಗಿರುವದಿಲ್ಲ. ಅದರಲ್ಲೂ ಇಲ್ಲಿ ಪ್ರಾಣಿಕ ಸ್ವರೂಪದಲ್ಲಿಯೇ ಇರುವ ಅಹಂಕಾರವೂ ಸಹಿತ, ತನಗೆ ಧಕ್ಕೆ ಬರುವ ಸಂದರ್ಭಗಳಲ್ಲೆಲ್ಲ ಅಥವಾ ಅಸಂತೋಷಗೊಳ್ಳುವ ಸಂಧರ್ಭಗಳಲ್ಲಿ ಅಥವಾ ಘಟನೆಗಳು ತನ್ನ ಆಶಯಕ್ಕೆ ತಕ್ಕ ಹಾಗೆ ನಡೆಯುತ್ತಿಲ್ಲ ಎನ್ನುವ ಸಂಧರ್ಭಗಳಲ್ಲಿ ಅಸಂತುಷ್ಟಗೊಳ್ಳುತ್ತದೆ. ಮತ್ತೂ ಕೆಲವೊಮ್ಮೆ ಜನರು ತನ್ನ ಇಚ್ಛೆಯನುಗುಣವಾಗಿ ನಡೆದುಕೊಳ್ಳುತ್ತಿಲ್ಲ ಎಂದುಕೊಂಡು ಅಥವಾ ತನ್ನ ಚಿಂತನದ ಪ್ರಕಾರ ನಡೆಯುತ್ತಿಲ್ಲ ಎಂದುಕೊಂಡು ಅಸಂತೋಷಗೊಳ್ಳುತ್ತದೆ.

ಇಂತಹ ಆತ್ಮದ ಸ್ಥಾನದಲ್ಲಿಯೇ ಅದರ ಮೇಲೆಯೇ ಅಲ್ಲೊಂದು ಅಧ್ಯಾತ್ಮದ ಪ್ರಶಾಂತತೆ ಇರುತ್ತದೆ; ಸಮಾನತೆ ಇರುತ್ತದೆ; ಒಂದು ಸದಾಶಯವೂ ಇರುತ್ತದೆ. ಒಂದು ಹಂತದಲ್ಲಿ ಇದು ದಿವ್ಯತ್ವವನ್ನು ಹೊರತುಪಡಿಸಿ ಉಳಿದೆಲ್ಲ ವಿಷಯಕ್ಕೆ ಉದಾಸೀನ ಭಾವದಲ್ಲಿದ್ದಂತೆ ಕಾಣುತ್ತದೆ. ಆದರೆ ಆತ್ಮಿಕ ಸ್ವರೂಪದಲ್ಲಿ ಅಲ್ಲಿ ಸರ್ವ ವಿಷಯಕ್ಕೂ ದಯಾಳುತನವಿರುತ್ತದೆ, ಅಥವಾ ಆಧಾರಭೂತವಾಗಿರುವ ಪ್ರೇಮವಿರುತ್ತದೆ. ಆದರೆ ಇಲ್ಲಿ ಒಂದು ವಿಷಯಕ್ಕೆ ವಿಶೇಷವಾದ ಸಂಬಂಧಗಳಿರುತ್ತವೆ. ಆದರೆ ಈ ಪ್ರಾಣಿಕವು ಮಾತ್ರ ಸದಾ ಅಸಮಾನತೆ ಇಲ್ಲವೇ

ಮೆಚ್ಚುಗೆಯ ಅಥವಾ ತಿರಸ್ಕರಿಸುವ ಹಂತಗಳಲ್ಲಿಯೇ ಉಳಿದಿರುತ್ತದೆ. ಸಾಧನೆಯ ಮೂಲಕ ಈ ಪ್ರಾಣಿಕ ಸ್ವಭಾವವನ್ನು ಶಾಂತಗೊಳಿಸಬಹುದಾಗಿದೆ. ಇದು ಅಲ್ಲಿಯೇ ಇರುವ ಆತ್ಮದಿಂದಲೇ ಸದಾಶಯವನ್ನು ಪ್ರಶಾಂತತೆಯನ್ನೂ ಮತ್ತು ಸರ್ವ ವಸ್ತುಗಳನ್ನು ಸಮಾನ ಮನೋಭಾವದಲ್ಲಿ ಕಾಣುವ ಹಾಗೂ ಆತ್ಮದ ಪ್ರಕೃತಿ ಸಹಜವಾದ ದಯಾಳುತನವನ್ನು ಅಥವಾ ಪ್ರೇಮವನ್ನು ಖಂಡಿತವಾಗಿ ಪಡೆದುಕೊಳ್ಳಬೇಕಾಗುತ್ತದೆ. ಇದು ಖಂಡಿತವಾಗಿಯೂ ಸಾಧಿಸುತ್ತದೆ. ಆದರೆ ಇದಕ್ಕೆ ಸಮಯ ಬೇಕಾಗುತ್ತದೆ. ನಿಮ್ಮಲ್ಲಿರುವ ಕೋಪ, ಅಸಹನೆ, ತಿರಸ್ಕಾರಗಳನ್ನು ಆಂತರಂಗಿಕವಿರಲಿ ಅಥವಾ ಬಾಹ್ಯ ಸ್ವಭಾದಲ್ಲಿರಲಿ, ಮೊದಲು ಅವುಗಳಿಂದ ಹೊರಬರಬೇಕಾಗುತ್ತದೆ. ಒಂದು ವೇಳೆ ಘಟನೆಗಳು ತಪ್ಪಾಗಿ ಘಟಿಸಿದಲ್ಲಿ, ಇಲ್ಲವೇ ತಪ್ಪಾಗಿಯೇ ರೂಪಿಸಲ್ಪಟ್ಟಲ್ಲಿ, ಆಗ ನೀವು ಹೇಳಬೇಕಾಗಿರುವದಿಷ್ಟೇ, "ಇದೆಲ್ಲವನ್ನೂ ಶ್ರೀಮಾತೆ ಬಲ್ಲಳು". ಈ ರೀತಿಯಲ್ಲಿಯೇ ಶಾಂತವಾಗಿ ನೀವು ನಿಮ್ಮ ಪಥದಲ್ಲಿ ಮುಂದುವರೆಯುತ್ತಾ ಇರಬೇಕು. ಇದರಿಂದ ಎಂದಿಗೂ ನಿಮ್ಮನ್ನು ದೂರ ಮಾಡಿಕೊಳ್ಳಬಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 31/312**

## ಸೌಹಾರ್ದತೆ ಮತ್ತು ಮಾನವೀಯ ಸಂಬಂಧಗಳು

**– ಅನುವಾದ: ಪುಟ್ಟು ಕುಲಕರ್ಣಿ**

ಪ್ರತಿಯೊಬ್ಬನೂ ಅವನದೇ ವ್ಯಕ್ತಿತ್ವದ ಕಾರಣದಿಂದಾಗಿ ರೂಪುಗೊಳ್ಳುವ ಸ್ಪಂದನದ ಮೂಲಕವಾಗಿಯೇ ಒಂದು ವಾತಾವರಣವನ್ನು ಅವನ ಸುತ್ತಲೂ ಸೃಷ್ಟಿಸುತ್ತಾ ಇರುತ್ತಾನೆ. ಇಲ್ಲಿ ಅವನ ಮನೋಭಾವನೆಗಳು, ಅವನ ಚಿಂತನಾ ಸ್ವರೂಪಗಳು, ಅವನ ಅನುಭವಗಳು, ಜೊತೆಗೆ ಅವನ ಕ್ರಿಯಾಶೀಲತೆಯೂ ಇದಕ್ಕೆ ಕಾರಣವಾಗಿರುತ್ತವೆ. ಇವೆಲ್ಲವೂ ವಾತಾವರಣದ ಸ್ವರೂಪದಲ್ಲಿ, ಉಳಿದವರ ಮೇಲೆಯೂ ಪ್ರಭಾವ ಬೀರುತ್ತವೆ. ಇಲ್ಲಿ ರೂಪಿತಗೊಳ್ಳುವ ಸ್ಪಂದನಗಳು ಸಾಂಕ್ರಾಮಿಕ ಸ್ವರೂಪದಲ್ಲಿಯೇ ಇರುತ್ತವೆ. ಇದನ್ನು ಸರಳವಾಗಿ ಹೇಳುವದಾದಲ್ಲಿ, ಈ ಸ್ಪಂದನಗಳನ್ನು ಅತ್ಯಂತ ತೀವ್ರವಾಗಿಯೇ ಸ್ವೀಕರಿಸಲು ಆಯ್ದುಕೊಳ್ಳಲ್ಪಡುತ್ತವೆ. ಒಂದು ವೇಳೆ ಆ ಸ್ಪಂದನಗಳು ತೀವ್ರ ರೀತಿಯಲ್ಲಿ ಇದ್ದರಂತೂ ಹಾಗೂ ಸಮರ್ಥವಾಗಿದ್ದರಂತೂ, ತಕ್ಷಣದಲ್ಲಿಯೇ ಸ್ಪಂದಿತಗೊಂಡ ವ್ಯಕ್ತಿಯೂ ಅದರಿಂದ 'ಸಾಂಕ್ರಾಮಿತನಾದಂತೆ' – ಪ್ರಭಾವಿತನಾಗುತ್ತಾನೆ. ಹೀಗಾಗಿ ಯಾರು ತಮ್ಮ

ಸುತ್ತಲೂ ಈ ಸೌಹಾರ್ದತೆ ಮತ್ತು ಶಾಂತಿಯ ವಾತಾವರಣವನ್ನು ಸೃಷ್ಟಿಸಿಕೊಂಡಿರುತ್ತಾರೋ, ಅವರು ಖಂಡಿತವಾಗಿಯೂ ಉಳಿದವರೆಲ್ಲರ ಮೇಲೂ ಪ್ರಭಾವವನ್ನು ಬೀರುತ್ತಿರುತ್ತಾರೆ. ಈ ಮೂಲಕ ಅವರ ಶಾಂತಿ ಹಾಗೂ ಸೌಹಾರ್ದತೆಯ ಕಿಂಚಿತ್ ಅಂಶವನ್ನು ಅವರೊಡನೆ ಹಂಚಿಕೊಳ್ಳುತ್ತಿರುತ್ತಾರೆ. ಇದೇ ರೀತಿಯಲ್ಲಿಯೇ ಉಪೇಕ್ಷಾ ಭಾವ, ತಿರಸ್ಕಾರ, ಕಿರಿಕಿರಿಯ ಸ್ವಭಾವ ಹಾಗೂ ಕೋಪದ ವಾತಾವರಣವಿದ್ದಾಗಲೂ ಇಂತಹದೆ ಸ್ಪಂದನಗಳು ತೀವ್ರ ಸ್ವರೂಪದಲ್ಲಿಯೇ ಮತ್ತೊಬ್ಬರ ಮೇಲೆ ಪ್ರಭಾವ ಬೀರುತ್ತಾ ಇರುತ್ತವೆ. ಇವೆಲ್ಲ ಘಟನೆಗಳು ವಿವರ ವಿವರವಾಗಿಯೇ ನಮಗೆ ಲಭ್ಯವಾಗುತ್ತಿವೆ. ಆದಾಗ್ಯೂ, ಇದೇ ಕೇವಲ ವಿವರಣೆ ಮಾತ್ರ ಆಗಿರುವದಿಲ್ಲ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/32**

ಪ್ರತಿಯೋರ್ವನೂ ತನ್ನ ಹೃದಯದಲ್ಲಿ ಪ್ರಶಾಂತತೆಯನ್ನು ಹಾಗೂ ಸಮತೆಯನ್ನು ಸದಾ ಹೊಂದಿದ್ದು, ಅದನ್ನೇ ಎಲ್ಲ ಕಡೆಗೂ ಧಾರೆಗೊಳಿಸುವಂತೆ, ಸದಾ ಪ್ರೇಮದುಂಬಿದ ಭಾವದಲ್ಲಿ ಸದಾಶಯವನ್ನು ಹೊಂದಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/186**

## ದಯಾಭಾವ ಮತ್ತು ಸಮುದಾಯ–ಜೀವನ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಉತ್ತಮ ಕಾರ್ಯಕ್ಕೆ ಸಹಯೋಗ ಹಾಗೂ ಪರಸ್ಪರ ಸದ್ಭಾವನೆಗಳು ಅತ್ಯಗತ್ಯವಾಗಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/312**

ನಾನು ಎರಡು ಷರತ್ತುಗಳನ್ನು ಹಾಕುವವಳಿದ್ದೇನೆ. ಪ್ರಗತಿಯನ್ನು ಬಯಸುವುದು ನಿಜವಾಗಿಯೂ ಒಂದು ಸಾಧಾರಣವಾದ ಷರತ್ತಾಗಿದೆ. ಪ್ರಗತಿಯನ್ನು ಸಾಧಿಸಲು, ಅದನ್ನು ತಿಳಿಯಲು ಎಲ್ಲವನ್ನೂ ಇನ್ನೂ ಮಾಡಬೇಕಾಗಿದೆ, ಎಲ್ಲವನ್ನೂ ಇನ್ನೂ

ಜಯಿಸಬೇಕಾಗಿದೆ. ಎರಡನೆಯ ಷರತ್ತು: ನಿವೆಲ್ಲರೂ ಒಂದು ಗುಂಪಿನಲ್ಲಿ ಇರುವುದರಿಂದ, ತನಗಾಗಿ ಅಲ್ಲದ ಯಾವುದೋ ಒಂದು ಚಟುವಟಿಕೆ, ಯಾವುದೋ ಒಂದು ಕೆಲಸ, ಮತ್ತು ಎಲ್ಲಕ್ಕಿಂತ ಮಿಗಿಲಾಗಿ ನಿಮ್ಮೆಲ್ಲರಿಗೂ ಸದ್ಭಾವನೆಯ ಒಂದು ಅಭಿವ್ಯಕ್ತಿಯಾದಂಥ ಏನನ್ನಾದರೂ ಮಾಡುವುದಾಗಿದೆ, ಅಲ್ಲವೇ? ನೀವು ಬ್ರಹ್ಮಾಂಡದ ಕೇಂದ್ರದಲ್ಲಿದ್ದಂತೆ ಮತ್ತು ಇಡೀ ವಿಶ್ವವು ನಿಮ್ಮ ಸುತ್ತ ಸುತ್ತಬೇಕೆಂಬಂತೆ, ನೀವು ಕೇವಲ ನಿಮಗಾಗಿ ಮಾತ್ರ ಬದುಕುತ್ತಿಲ್ಲವೆಂದು ಸುಮ್ಮನೆ ತೋರಿಸಲಿಕ್ಕಾಗಿ ಏನನ್ನಾದರೂ ಮಾಡುವುದಾಗಿದೆ. ಬಹುಪಾಲು ಜನರಿಗೆ ಅದು ಹೀಗೆ ತೋರುತ್ತದೆ ಮತ್ತು ಅವರು ಅದನ್ನು ಇನ್ನೂ ಸಹ ತಿಳಿದುಕೊಂಡಿಲ್ಲ. ಸ್ವಯಂಪ್ರೇರಿತವಾಗಿ, ಒಬ್ಬನು ತನ್ನನ್ನು ತಾನು ಬ್ರಹ್ಮಾಂಡದ ಮಧ್ಯದಲ್ಲಿ ಇರಿಸಿಕೊಳ್ಳುತ್ತಾನೆ ಮತ್ತು ಎಲ್ಲವೂ ತನಗೆ ತಾನೇ, ಹಾಗೆಯೆ ಬರಬೇಕೆಂದು ಬಯಸುತ್ತಾನೆ ಎಂದು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ಆದರೆ ಇಡೀ ಅಸ್ತಿತ್ವವನ್ನು ಗುರುತಿಸುವ ಪ್ರಯತ್ನವನ್ನು ನಾವು ಮಾಡಬೇಕು, ಅಷ್ಟೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/315–316**

ಆದರೆ ಆಧ್ಯಾತ್ಮಿಕ ದೃಷ್ಟಿಕೋನದಿಂದ, ನಿಜವಾದ ಸದ್ಭಾವನೆಯಿಂದ ಎಲ್ಲ ಅಭಿಪ್ರಾಯಗಳನ್ನು ಹೆಚ್ಚು ಸಮಗ್ರ ಮತ್ತು ನೈಜ ಪರಿಹಾರದಲ್ಲಿ ಸಮನ್ವಯ–ಗೊಳಿಸಬಹುದು ಎಂದು ನನಗೆ ತಿಳಿದಿದೆ. ಅರೋವಿಲ್ಲೆಯ ಕೆಲಸಗಾರರಿಂದ ನಾನು ನಿರೀಕ್ಷಿಸುವುದು ಇದನ್ನೇ. ಕೆಲವರು ಇನ್ನೊಬ್ಬರಿಗೆ ಬಿಟ್ಟು ಕೊಡುತ್ತಾರೆ ಎಂದಲ್ಲ, ಆದರೆ ಅದಕ್ಕೆ ವ್ಯತಿರಿಕ್ತವಾಗಿ, ಒಂದು ಹೆಚ್ಚು ವ್ಯಾಪಕವಾದ ಹಾಗೂ ಪರಿಪೂರ್ಣವಾದ ಫಲಿತಾಂಶವನ್ನು ಪಡೆಯಲು ಎಲ್ಲರೂ ತಮ್ಮ ಪ್ರಯತ್ನಗಳನ್ನು ಕ್ರೋಢೀಕರಿಸಬೇಕಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/214**

ಆಶ್ರಮವಾಸಿಗಳು ತಾವು ಎಂದಿಗೂ ಜೀರ್ಣಿಸಿಕೊಳ್ಳುವುದಕ್ಕಿಂತ ಹೆಚ್ಚಿನದನ್ನು ತಿನ್ನುವುದರಲ್ಲಿ ಮತ್ತು ತಾವು ಎಂದಿಗೂ ತಿನ್ನುವುದಕ್ಕಿಂತ ಹೆಚ್ಚಿಗೆ ಕೇಳುವುದರಲ್ಲಿ ತಮ್ಮ ಸದ್ಭಾವನೆಯನ್ನು ಹಾಗೂ ಸಹಯೋಗವನ್ನು ತೋರಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/267**

ಅರೋವಿಲ್ಲೆಯಲ್ಲಿ ಇರಲು ಮತ್ತು ಅಲ್ಲಿ ಕೆಲಸ ಮಾಡಲು ಬಯಸುವವರು ಅಂತರ್ನಿರ್ಮಿತ ಸದ್ಭಾವನೆಯನ್ನು, ಸತ್ಯವನ್ನು ತಿಳಿದುಕೊಳ್ಳುವ ಮತ್ತು ಅದಕ್ಕೆ ಸಮರ್ಪಿಸಿಕೊಳ್ಳುವ ಒಂದು ನಿರಂತರ ಅಭೀಪ್ಸೆಯನ್ನು, ಕೆಲಸದ ಅಗತ್ಯತೆಗಳನ್ನು ಎದುರಿಸಲು ಮತ್ತು ಮೂಲ ಸತ್ಯದೆಡೆಗೆ ಮುನ್ನಡೆಯಲು ಬೇಕಾದ ಒಂದು ಅಪರೂಪವಾದ ಶ್ರದ್ಧೆಯನ್ನು ಹೊಂದಿರಲೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/200**

(ಶ್ರೀ ಅರವಿಂದೋ ಆಶ್ರಮದ ಉದ್ಯೋಗಿಗಳಿಗೆ)
ಈ ಪರಿಪೂರ್ಣವಾದ ಸ್ಥಳದಲ್ಲಿರಬೇಕಾದರೆ, ಆ ಸ್ಥಳಕ್ಕೆ ಪ್ರವೇಶ ಪಡೆಯಲು ಬೇಕಾದಂಥ ಅವಶ್ಯಕವಾದ ಷರತ್ತುಗಳು: ಉತ್ತಮ ಚಾರಿತ್ರ್ಯ, ಉತ್ತಮ ನಡತೆ, ಪ್ರಾಮಾಣಿಕತೆ, ನಿಯತ ಹಾಗೂ ಸಮರ್ಥ ಕೆಲಸ ಮತ್ತು ಸಾಮಾನ್ಯವಾದ ಸದ್ಭಾವನೆ ಎಂದು ಬೇರೆಯಾಗಿ ಹೇಳಬೇಕಾಗಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/176**

## ಪ್ರಸನ್ನತೆ ಮತ್ತು ಮಾನವೀಯತೆ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಒಬ್ಬ ವ್ಯಕ್ತಿಯು ತನ್ನ ಆಧ್ಯಾತ್ಮ ಬಲದಿಂದ ಏನನ್ನು ಸಾಧಿಸಬಲ್ಲನೋ, ಅದನ್ನು ಸದಾಶಯದ ಚಿಂತನೆಯಲ್ಲಿ ಒಗ್ಗೂಡಿದ ಒದು ಗುಂಪಿನಿಂದ ಸಾಧಿಸಬಹುದು:

ಕಾಲ್ಡಿಯನ್ ದೀಕ್ಷೆ:
(ಕಾಲ್ಡಿಯನ್ – ಕಾಲ್ಡಿಯಾದಲ್ಲಿ ಇದ್ದ ಪ್ರಾಚೀನ ಜನರ ಒಬ್ಬ ಸದಸ್ಯ)

"ನೀವು ಸದಾಚಾರದಲ್ಲಿ ಒಗ್ಗೂಡಿದಾಗ, ಒಂದಾದಾಗ, ನೀವು ಅನಿರ್ವಚನೀಯವಾದುದನ್ನು ವ್ಯಕ್ತಪಡಿಸುವಿರಿ."

ಗುಂಪುಗಳು, ವ್ಯಕ್ತಿಗಳಂತೆಯೇ ಒಂದೇ ನಿಯಮಗಳಿಗೆ ಒಳಪಟ್ಟಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/114**

ಆದರೆ ಮನುಕುಲದ ಬಾಹ್ಯ ಒಗ್ಗಟ್ಟು ಮನುಷ್ಯನ ಸದ್ಭಾವನೆ(ಪ್ರಸನ್ನತೆ) ಮತ್ತು ಪ್ರಾಮಾಣಿಕತೆಯನ್ನು ಅವಲಂಬಿಸಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/66**

ಎಲ್ಲರಿಗೂ ಒಳ್ಳೆಯತನ ಮತ್ತು ಎಲ್ಲರಿಂದ ಒಳ್ಳೆಯತನವು ಶಾಂತಿ ಮತ್ತು ಸಾಮರಸ್ಯದ ಆಧಾರವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/243**

ನಾನು ಇದನ್ನು ಮುಖ್ಯವಾಗಿ ಹೇಳಿದ್ದು, ಆಲೋಚನೆಯು ನೇರ ಮತ್ತು ರಚನಾತ್ಮಕವಾಗಿರುವಂಥ, ಅತ್ಯಂತ ಸಕ್ರಿಯ ಹಾಗೂ ಕ್ರಿಯಾತ್ಮಕವಾಗಿರುವಂಥ ಕ್ರಿಯಾಶೀಲ ಪುರಷರಿಗಾಗಿ. ಅವರು ಕ್ರಿಯೆಗೆ ಅಗತ್ಯವಾದ ಸರಳ ರೀತಿಯಲ್ಲಿ ವಿಷಯಗಳನ್ನು ನೋಡುತ್ತಾರೆ; ಒಂದು ವಿಷಯವನ್ನು ಹೀಗೆಯೇ ಮಾಡಬೇಕೆಂಬುದನ್ನು ಅವರು ನೋಡಬಹುದು. ಸಮಾನವಾಗಿ ಕ್ರಿಯಾತ್ಮಕವಾಗಿರುವ ಒಂದು ಆಲೋಚನೆಯನ್ನು ಹೊಂದಿದಂಥ ವ್ಯಕ್ತಿಯು ಹೀಗೆ ಹೇಳಬಹುದು – "ಇಲ್ಲ, ಇದನ್ನು ಹೀಗೆ ಮಾಡು." ಆದ್ದರಿಂದ ಅವರು ಜಗಳವಾಡುತ್ತಾರೆ ಮತ್ತು ಅವರು ಒಂದು ಒಪ್ಪಂದವನ್ನು ತಲುಪಲು ಸಾಧ್ಯವಾಗುವುದಿಲ್ಲ. ಆದರೆ, ಒಂದು ನಿಮಿಷ ಮೌನವಾಗಿದ್ದು ಶಾಂತವಾಗಿ ವಿಷಯದತ್ತ ನೋಡಬಹುದು. ಮತ್ತೊಬ್ಬ ವ್ಯಕ್ತಿಯು ಕೆಟ್ಟ ಭಾವನೆಯನ್ನು ತೋರ್ಪಡಿಸುತ್ತಿಲ್ಲ, ಅವನ ದೃಷ್ಟಿಕೋನವು ಸತ್ಯವಾಗಿರಬಹುದು ಅಥವಾ ಭಾಗಶಃ ಸತ್ಯವಾಗಿರಬಹುದು. ಅವನು ಹಾಗೆ ಯಾಕೆ ಯೋಚಿಸುತ್ತಿದ್ದಾನೆ ಎಂದು ಕಂಡುಹಿಡಿಯುವುದು ಪ್ರಶ್ನೆಯಾಗಿದೆ. ಆದುದರಿಂದ ಅದರ ಬಗ್ಗೆ ನೀವು ಯೋಚಿಸುವುದನ್ನು ನಿಲ್ಲಿಸಿರಿ ಮತ್ತು ಇನ್ನೊಬ್ಬರ ದೃಷ್ಟಿಕೋನದೊಂದಿಗೆ ನಿಮ್ಮನ್ನು ನೀವು ತಾದಾತ್ಮ್ಯಗೊಳಿಸಿಕೊಳ್ಳಲು, ಅವನ ಸ್ಥಾನದಲ್ಲಿ ನಿಮ್ಮನ್ನು ನೀವು ಕಲ್ಪಿಸಿಕೊಳ್ಳಲು ಪ್ರಯತ್ನಿಸಿರಿ ಮತ್ತು "ಅವನು ಹಾಗೆ ಮಾಡುತ್ತಿರುವುದಕ್ಕೆ ಅವನಲ್ಲಿ ಕಾರಣವಿರಬಹುದು ಹಾಗೂ ನನ್ನ ಯೋಚನೆಗಿಂತ ಅವನ ಯೋಚನೆ ಉತ್ತಮವಾಗಿರಬಹುದು" ಎಂದು ನಿಮ್ಮಷ್ಟಕ್ಕೆ ನೀವು ಹೇಳಿಕೊಳ್ಳಿರಿ. ಈ ರೀತಿಯಾಗಿ ಉಭಯ ಸಂಬಂಧಗಳನ್ನು ತೃಪ್ತಿಗೊಳಿಸುವಂಥ ಪರಿಹಾರವನ್ನು ನೀವು ಕಂಡುಹಿಡಿಯಲೇಬೇಕು. ಪ್ರಾಪಂಚಿಕ ವಿಷಯಗಳೊಂದಿಗೆ ವ್ಯವಹರಿಸುವಾಗ

ಇದು ತುಂಬಾ ಮಹತ್ವದ್ದಾಗಿದೆ. ಸ್ವಾಭಾವಿಕವಾಗಿ, ಪ್ರತಿಯೊಬ್ಬನೂ ತನ್ನ ಸ್ವಂತ ದೃಷ್ಟಿಕೋನವನ್ನು ನೋಡುತ್ತಾನೆ ಮತ್ತು ಅದು ಯಾವಾಗಲೂ ಸ್ವಾರ್ಥಪರ–ವಾಗಿರುತ್ತದೆ. ಇನ್ನೊಬ್ಬರ ದೃಷ್ಟಿಕೋನವು ನಿಮಗೆ "ಹಾನಿಕಾರಕ"ವಾಗಬಹುದೆಂದು ನೀವು ಮತ್ತೊಂದು ದೃಷ್ಟಿಕೋನವನ್ನು ಒಪ್ಪಿಕೊಳ್ಳುವುದು ತುಂಬಾ ಕಠಿಣವಾದ ಕೆಲಸ. ಇದೊಂದು, ರಾಷ್ಟ್ರಗಳು ಕಳವಳಗೊಳ್ಳುವಂಥ ಸ್ಪಷ್ಟ ಸತ್ಯವಾಗಿದೆ. ರಾಷ್ಟ್ರಗಳು ಪ್ರಾಮಾಣಿಕವಾದ ವಿಷಯಗಳ ಬಗ್ಗೆ ನಿರಂತರವಾಗಿ ಚರ್ಚೆ ಮಾಡುವ ಬದಲು ಮತ್ತು ತಮ್ಮ ಸ್ವ–ಹಿತಾಸಕ್ತಿಗಳನ್ನು ಸಮರ್ಥಿಸಿಕೊಳ್ಳುವ ಮತ್ತು ತಮ್ಮ ಸ್ವಯಂ ದೃಷ್ಟಿಕೋನವನ್ನು ಮಾತ್ರ ನೋಡುವ ಬದಲು (ಅಂದರೆ, ತಮ್ಮ ರಾಷ್ಟ್ರ ವ್ಯಕ್ತಿತ್ವದ ದೃಷ್ಟಿಕೋನ), ಪ್ರತಿಯೊಂದು ರಾಷ್ಟ್ರಕ್ಕೆ ಈ ಭೂಮಿಯ ಮೇಲಿರಲು ಹಕ್ಕಿದೆ ಮತ್ತು ಈ ಹಕ್ಕಿನಿಂದ ವಂಚಿತರನ್ನಾಗಿ ಮಾಡುವ ವಿಷಯ ಅಲ್ಲವೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕಿತ್ತು, ಎಲ್ಲರನ್ನೂ ತೃಪ್ತಿಪಡಿಸುವ ಒಂದು ಹೊಂದಾಣಿಕೆಯ ಸೂತ್ರವನ್ನು ಕಂಡುಹಿಡಿಯಬೇಕಿತ್ತು. ಯಾವಾಗಲೂ ಒಂದು ಪರಿಹಾರ ಇದ್ದೇ ಇರುತ್ತದೆ, ಆದರೆ ಒಂದು ಷರತ್ತಿನ ಮೇಲೆ, ಪರಿಹಾರವನ್ನು ಕಂಡುಹಿಡಿಯುದಕ್ಕಲ್ಲ ಆದರೆ ಅದನ್ನು ಅನುಷ್ಠಾನಗೊಳಿಸಲು: ವ್ಯಕ್ತಿಗಳು ಮತ್ತು ರಾಷ್ಟ್ರಗಳು ಸದ್ಭಾವನೆಯನ್ನು ಹೊಂದಿರಲೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/313–314**

ಸದ್ಭಾವನೆಯ ಸ್ಪಂದನದಿಂದ ನಾವು ಜಗತ್ತಿಗೆ ಸಹಾಯವನ್ನು ಮಾಡಬಹುದೆ?

ಶುಭೇಚ್ಛೆಗಳಿಂದ ನಾವು ಬಹಳಷ್ಟು ವಿಷಯಗಳನ್ನು ಬದಲಿಸಬಹುದು, ಆದರೆ ಅದು ಅತ್ಯಂತ ಶುದ್ಧವಾದ ಮತ್ತು ಕಲುಷಿತಗೊಳ್ಳದ ಸದ್ಭಾವನೆಯಾಗಿರಬೇಕು. ಒಂದು ಭಾವನೆ, ಒಂದು ಪರಿಪೂರ್ಣವಾದ ಶುದ್ಧವಾದ ಹಾಗೂ ಸತ್ಯವಾದ ಪ್ರಾರ್ಥನೆಯನ್ನು ಪ್ರಪಂಚದಲ್ಲಿ ಕಳಿಸಿದ್ದೇ ಆದರೆ ಅದು ತನ್ನ ಕಾರ್ಯವನ್ನು ಮಾಡುವುದು ಅತ್ಯಂತ ಸ್ಪಷ್ಟ. ಈ ಪರಿಪೂರ್ಣ ಹಾಗೂ ಸತ್ಯವಾದ ಭಾವನೆಯು ಮಾನವನ ಮೆದುಳಿನಲ್ಲಿ ಹಾದುಹೋದಾಗ ಎಲ್ಲಿರುತ್ತದೆ? ಅಲ್ಲಿ ಹಿಂಬಡ್ತಿಗಳಿರುತ್ತವೆ. ಆಂತರಿಕ ಪ್ರಜ್ಞೆಯ ಮತ್ತು ಜ್ಞಾನದ ಪ್ರಯತ್ನದ ಮುಖಾಂತರ ನಿನ್ನಲ್ಲಿಯ ಬಯಕೆಯನ್ನು ನಿಜವಾಗಿಯೂ ಜಯಿಸಬಹುದಾದರೆ (ಅಂದರೆ, ಅದನ್ನು ವಿಸರ್ಜಿಸಿದರೆ ಮತ್ತು ತೆಗೆದು ಹಾಕಿದರೆ) ಮತ್ತು ಆಂತರಿಕ ಸದಾಶಯದ ಮುಖಾಂತರ, ಪ್ರಜ್ಞೆಯ, ಬೆಳಕಿನ, ಜ್ಞಾನದ ಮುಖಾಂತರ ಬಯಕೆಯನ್ನು ಮಾಯ ಮಾಡು. ನಿನಗೆ

ಸಾಧ್ಯವಾದರೆ, ನಿನ್ನ ಬಯಕೆಯನ್ನು ತೃಪ್ತಿಪಡಿಸಿದ್ದರಿಂದ ಸಿಗುವ ಆನಂದಕ್ಕಿಂತ ನೂರು ಪಟ್ಟು ಸಂತೋಷವನ್ನು ಅನುಭವಿಸುವಿ. ಆಗ ಅದು ಅದ್ಭುತವಾದ ಪರಿಣಾಮವನ್ನು ಉಂಟುಮಾಡುತ್ತದೆ. ನೀನು ಎಣಿಸದ ಒಂದು ಪರೋಕ್ಷ ಪರಿಣಾಮವನ್ನು ಅದು ಜಗತ್ತಿನ ಮೇಲೆ ಬೀರುತ್ತದೆ. ಅದು ಮುಂದೆ ಹಬ್ಬುತ್ತದೆ. ನೀನು ಸೃಷ್ಟಿಸಿದ ಸ್ಪಂದನಗಳು ಹಬ್ಬುತ್ತ ಹೋಗುತ್ತವೆ. ಹಿಮದುಂಡೆಯಂತೆ ಇವು ಬೃಹತ್ತಾಗಿ ಬೆಳೆಯುತ್ತವೆ. ಎಷ್ಟೇ ಅಲ್ಪವಾದಂಥ ಜಯವನ್ನು ನಿನ್ನ ಚಾರಿತ್ರ್ಯದಲ್ಲಿ ಗೆದ್ದರೆ, ಅದು ಇಡೀ ಪ್ರಪಂಚದಲ್ಲಿ ಸಂಪಾದಿಸಬಹುದಾದ ಜಯವಾಗಿರುತ್ತದೆ. ಅದು, ಇದೀಗ ನಾನು ಅಂದುಕೊಂಡಂತೆ; ಆಂತರಿಕ ಚಾರಿತ್ರ್ಯವನ್ನು ಬದಲಾಯಿಸದೆ ಬಾಹ್ಯವಾಗಿ ಮಾಡಿದ ಎಲ್ಲ ವಿಷಯಗಳು – ಆಸ್ಪತ್ರೆಗಳು, ಶಾಲೆಗಳು ಮುಂತಾದವುಗಳನ್ನು ಮಾಡಿದ್ದು ಪ್ರತಿಷ್ಠೆಗಾಗಿ, ಶ್ರೇಷ್ಠನಾಗಬೇಕೆಂಬ ಭಾವನೆಯೊಂದಿಗೆ. ಅದೇ ಅವಧಿಯಲ್ಲಿ ಗಮನಿಸದ ಈ ಚಿಕ್ಕ ವಿಷಯಗಳು ದೊಡ್ಡ ಜಯವನ್ನು ಸಂಪಾದಿಸುತ್ತವೆ (ಪರಿಣಾಮಗಳು ಗೌಪ್ಯವಾಗಿರುತ್ತವೆ). ನಿನ್ನಲ್ಲಿರುವ ದೋಷಪೂರಿತ ಮತ್ತು ಸತ್ಯಕ್ಕೆ ವಿರುದ್ಧವಾದ ಪ್ರತಿಯೊಂದು ಚಲನೆಯು ದಿವ್ಯ ಜೀವನದ ನಿರಾಕರಣೆಯಾಗಿದೆ. ನಿನ್ನ ಚಿಕ್ಕ ಪ್ರಯತ್ನಗಳು (ಅವುಗಳನ್ನು ತಿಳಿದ ತೃಪ್ತಿಯೂ ಸಹ ನಿನಗಿಲ್ಲ) ಅಗಾಧ ಪರಿಣಾಮಗಳನ್ನು ಹೊಂದಿರುತ್ತವೆ. ಆದರೆ, ಇದು ನಿಜವಾದ ಮತ್ತು ವ್ಯಕ್ತಿ ಸಂಬಂಧವಲ್ಲದ ಹಾಗೂ ಸಾಮಾನ್ಯ ಪರಿಣಾಮವನ್ನು ಹೊಂದಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/19**

ನಿನ್ನಲ್ಲಿರುವ ವೈಯಕ್ತಿಕ ಮತ್ತು ಸಾಮೂಹಿಕ ದೋಷಗಳ ಬಗ್ಗೆ ನಿನಗೆ ಗೊತ್ತು ಮತ್ತು ಸ್ಪಷ್ಟವಾಗಿ ಇರಲೇಬೇಕಾದ ಸದ್ಭಾವನೆಯ ಹೊರತಾಗಿಯೂ ನಾವು ಸಾಮಾನ್ಯವಾದ ಭಾವನೆಗಳಿಂದ ಹೊರಬಂದಾಗ ಜಗತ್ತು ನಾವು ಭಾವಿಸಿದಂತೆ ಆಗಲು, ಜಗತ್ತಿಗಾಗಿ ನಾವು ಮಾಡುವುದು ಇನ್ನೂ ಸಾಕಷ್ಟಿದೆ ಎಂದು ಗೊತ್ತಿದೆ. ಸಾಮರಸ್ಯದ, ಶಾಂತಿಯ, ವಿಮೋಚನೆಯ, ವಿಶಾಲ ಮನಸ್ಸಿನ, ಸದ್ಭಾವನೆಯ, ನಿಸ್ವಾರ್ಥದ, ನಿರ್ಲಿಪ್ತವಾದ ಒಂದು ಜಗತ್ತು ಉನ್ನತ ಮಾದರಿಗೆ, ಆತ್ಮವಿಸ್ಮೃತಿಗೆ ಮೀಸಲಿಡಬೇಕು.... ಈ ರೀತಿಯ ಹೆಚ್ಚು ಸಂಗತಿಗಳು ನಿನಗೆ ಬೇಕು, ಆ ರೀತಿ ಇನ್ನೂ ಬಹಳಷ್ಟಿವೆ. ನೀನು ಪಂಥಾಭಿಮಾನಿಯಾಗಿರದೆ, ಕೊಂಚ ಶ್ರೇಷ್ಠವಾದ ಕಲ್ಪನೆಗಳನ್ನು, ವಿಶಾಲವಾದ ವಿವೇಚನೆಯನ್ನು ಹೊಂದಲು ಚಿಕ್ಕದಾಗಿ ಪ್ರಾರಂಭಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/185**

# ಶುಭೇಚ್ಛೆ ಮತ್ತು ಶಿಕ್ಷಣ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಸರಿಯಾದ ಮಾರ್ಗದಲ್ಲಿರುವುದು ಒಂದು ಬಹಳೇ ಕಠಿಣವಾದ ಕಲೆ. ಅತಿ ಚಿಕ್ಕವರಿದ್ದಾಗ ಅದನ್ನು ಕಲಿಯಲು ಪ್ರಾರಂಭಿಸದೆ ಹೋದಲ್ಲಿ ಮತ್ತು ಪ್ರಯತ್ನವನ್ನು ಮಾಡದೆ ಹೋದಲ್ಲಿ ನಮಗೆ ಅದನ್ನು ಅರಿತುಕೊಳ್ಳಲು ಎಂದಿಗೂ ಆಗುವುದಿಲ್ಲ. ಕೇವಲ ನಮ್ಮ ದೇಹವನ್ನು ಉತ್ತಮ ಆರೋಗ್ಯದಲ್ಲಿ, ನಮ್ಮ ಸ್ಥಿರ ಮನಸ್ಸು ಹಾಗೂ ಸದ್ಭಾವನೆಯನ್ನು ನಮ್ಮ ಹೃದಯದಲ್ಲಿ ಇಟ್ಟುಕೊಳ್ಳುವ ಕಲೆ – ಯೋಗ್ಯವಾಗಿರಲು ಬಿಡಲಿಕ್ಕೆ ಬಾರದಂಥ ವಿಷಯಗಳು – ಸಮಾಧಾನದಲ್ಲಿ ಎಂದು ನಾನು ಹೇಳುವುದಿಲ್ಲ, ಗಮನಾರ್ಹವಾಗಿ ಎಂದು ನಾನು ಹೇಳುವುದಿಲ್ಲ, ಯೋಗ್ಯ ರೀತಿಯಲ್ಲಿ ಎಂದು ನಾನು ಹೇಳುತ್ತೇನೆ. ಇದನ್ನು ತಮ್ಮ ಮಕ್ಕಳಿಗೆ ಕಲಿಸುವವರು ಬಹಳಷ್ಟು ಇರುವರೆಂದು ನಾನು ಅಂದುಕೊಳ್ಳುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/152**

ಕ್ರಮಬದ್ಧ ಹಾಗೂ ಸಾಮೂಹಿಕ ವ್ಯವಸ್ಥೆಯಲ್ಲಿ, ಪರಸ್ಪರ ಸದಾಶಯದ ಮೇಲೆ ಆಧಾರಿತ ಸಹಯೋಗದಲ್ಲಿ, ಈಗ ತನ್ನನ್ನು ತಾನು ನೋವಿನ ಅವ್ಯವಸ್ಥೆಯಲ್ಲಿ ಕಂಡುಕೊಳ್ಳುವ ಮನುಷ್ಯನನ್ನು ಮೇಲೆತ್ತುವ ಸಾಧ್ಯತೆ ಏನಾದರೂ ಇದೆಯೆ. ಈ ಉದ್ದೇಶದಿಂದ ಮತ್ತು ಈ ಚೇತನದಲ್ಲಿ ಮಾನವರ ಎಲ್ಲ ಸಮಸ್ಯೆಗಳನ್ನು ವಿಶ್ವವಿದ್ಯಾಲಯದ ಕೇಂದ್ರದಲ್ಲಿ ಅಭ್ಯಸಿಸಲಾಗುವುದು; ಮತ್ತು ಶ್ರೀ ಅರವಿಂದರು ತಮ್ಮ ಬರವಣಿಗೆಗಳಲ್ಲಿ ಬಹಿರಂಗಗೊಳಿಸಿದ ಅತಿಮಾನಸ ಜ್ಞಾನದ ಬೆಳಕಿನಲ್ಲಿ ಸಮಸ್ಯೆಗಳಿಗೆ ಸಮಾಧಾನವನ್ನು ಕೊಡಲಾಗುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/42**

ಈ ಪ್ರಯತ್ನವು ಪ್ರತಿಯೊಬ್ಬ ವ್ಯಕ್ತಿಯ ಇರುವಿಕೆಯ ಆಧಾರವಾಗಿರಬೇಕು, ವಿಶೇಷವಾಗಿ ನಿಮ್ಮಲ್ಲಿ ಜವಾಬ್ದಾರಿಯುತ ಸ್ಥಾನಗಳಲ್ಲಿರುವವರು ಮತ್ತು ಇನ್ನೊಬ್ಬರ ಕಾಳಜಿ ಮಾಡುವವರು. ನಾಯಕರು ಯಾವಾಗಲೂ ಒಂದು ಮಾದರಿಯನ್ನು ಸ್ಥಾಪಿಸಬೇಕು, ನಾಯಕರು ತಮ್ಮ ಆರೈಕೆಯಲ್ಲಿ ಇರುವವರಿಂದ ಸದ್ಗುಣಗಳನ್ನು ಬಯಸುವುದಾದರೆ ಅವುಗಳನ್ನು ಆಚರಿಸಬೇಕು; ಅವರು ವಿವೇಚನೆ

ಉಳ್ಳವರಾಗಿರಬೇಕು, ಸಹನಶೀಲರಾಗಿರಬೇಕು, ಸಹಿಸಿಕೊಳ್ಳುವವ–ರಾಗಿರಬೇಕು, ಸಹಾನುಭೂತಿ ಹಾಗೂ ಸ್ನೇಹಮಯ ಸದಾಶಯವನ್ನು ಹೊಂದಿರಬೇಕು, ತಮಗಾಗಿ ಸ್ನೇಹಿತರನ್ನು ಅಹಂಭಾವದಿಂದ ಪಡೆಯದೆ, ಔದಾರ್ಯದಿಂದ ಪಡೆದುಕೊಳ್ಳಬೇಕು ಮತ್ತು ಇನ್ನೊಬ್ಬರನ್ನು ಅರಿತು ಸಹಾಯಮಾಡುವವರಾಗಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/164**

ಎಲ್ಲಕ್ಕಿಂತ ಮಿಗಿಲಾಗಿ, ಅವರಿಗಾಗಿ ಒಂದು ಉತ್ತಮ ಉದಾಹರಣೆಯನ್ನು ಸ್ಥಾಪಿಸಿರಿ.... ಅವರೇನಾಗಬೇಕೆಂದು ಬಯಸುವಿರೋ ಅದು ನೀವಾಗಿ. ಅವರಿಗೆ ನಿಷ್ಪಕ್ಷಪಾತದ, ಸಹನೆಯ, ಸ್ವಯಂ–ನಿಯಂತ್ರಣದ, ನಿರಂತರ ಉತ್ತಮ ಸದ್ಭಾವನೆಯ, ನಮ್ಮ ಅಲ್ಪವಾದ ವೈಯಕ್ತಿಕ ದ್ವೇಷಗಳ ಗೆಲುವಿನ, ಒಂದು ಬಗೆಯ ನಿರಂತರ ಸದಾಶಯದ, ಇನ್ನೊಬ್ಬರ ತೊಂದರೆಗಳನ್ನು ಅರಿತುಕೊಳ್ಳವಿಕೆಯ ಉದಾಹರಣೆಯನ್ನು ನೀಡಿರಿ; ಮಕ್ಕಳನ್ನು ಭಯದಿಂದ ಮುಕ್ತ ಮಾಡುವಂಥ ಆ ಸಮಾನತೆಯ ಮನಸ್ಥಿತಿಯ ಉದಾಹರಣೆ ಕೊಡಿ. ಮಕ್ಕಳನ್ನು ಕಪಟಿಗಳನ್ನಾಗಿ ಹಾಗೂ ಕುಟಿಲಗಳನ್ನಾಗಿ ಮಾಡುವುದು ಏನೆಂದರೆ, ಶಿಕ್ಷೆಗೊಳಗಾಗುವ ಭಯ. ಅವರಲ್ಲಿ ಸುರಕ್ಷತೆಯ ಭಾವ ಬಂದರೆ, ಅವರು ಏನನ್ನೂ ಮರೆಮಾಚುವುದಿಲ್ಲ, ಆಗ ಅವರು ಪ್ರಾಮಾಣಿಕರಾಗಲು, ನಿಷ್ಠೆವುಳ್ಳವರಾಗಲು ನೀವು ಸಹಾಯ ಮಾಡಬಹುದು. ಎಲ್ಲವುಗಳಲ್ಲಿ ಅತ್ಯಂತ ಮಹತ್ವದಾವುದೆಂದರೆ, ಉತ್ತಮ ಉದಾಹರಣೆಯನ್ನು ಸ್ಥಾಪಿಸುವುದು (ಉತ್ತಮ ಮಾದರಿಯಾಗುವುದು). ಎಲ್ಲ ಸನ್ನಿವೇಷಗಳಲ್ಲಿ ಸ್ಥಿರವಾದ ಹಾಸ್ಯ ಮನೋಭಾವವನ್ನು ಹೊಂದಿರುವ ಬಗ್ಗೆ, ಈ ಸ್ವ–ವಿವರಣೆಯ ಬಗ್ಗೆ ಶ್ರೀ ಅರವಿಂದರು ಹೇಳುತ್ತಾರೆ: ತಮ್ಮ ಸ್ವಂತ ಅಲ್ಪ ತೊಂದರೆಗಳನ್ನು ಇನ್ನೊಬ್ಬರ ಮೇಲೆ ಎಸೆಯುವುದನ್ನು ಹೇಳುವುದಿಲ್ಲ: ನಾವು ದಣಿದಾಗ, ತೊಂದರೆಯಲ್ಲಿದ್ದಾಗ, ತಾಳ್ಮೆಗೆಡಬಾರದು, ದುಃಖಿತರಾಗಬಾರದು. ಇದು, ಸಾಕ್ಷಾತ್ಕಾರದ ಮಾರ್ಗದ ಒಂದು ಹಂತವಾದ ಪರಿಪೂರ್ಣತೆಯನ್ನು ಹಾಗೂ ಸ್ವ–ನಿಯಂತ್ರಣವನ್ನು ಬೇಡುತ್ತದೆ. ನಿಜವಾದ ನಾಯಕನಾಗಲು ಬೇಕಾದ ಷರತ್ತುಗಳನ್ನು ತೃಪ್ತಿಪಡಿಸಿದರೆ (ಮಕ್ಕಳ ಚಿಕ್ಕ ಗುಂಪಿನ ನಾಯಕನಾದರೂ ಸಹ) ಯೋಗದ ಸಾಧನೆಗೆ ಬೇಕಾದ ಶಿಸ್ತಿನಲ್ಲಿ ಆಗಲೇ ನೀವು ಬಹಳ ಮುಂದುವರೆದಿರುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/81**

ನಾನು ಕೇಳುವುದೇನೆಂದರೆ, ಒಳ್ಳೆಯದನ್ನು ಮಾಡುವ ಸಂಕಲ್ಪ, ಪ್ರಗತಿಗಾಗಿ ಪ್ರಯತ್ನ ಮತ್ತು ಜೀವನದಲ್ಲಿ ಸಾಮಾನ್ಯ ಮನುಷ್ಯರಿಗಿಂತ ಕೊಂಚ ಉತ್ತಮವಾಗಿರಬೇಕೆಂಬ ಹಂಬಲ. ನೀನು ಅಸಾಧಾರಣವಾದ ಕಾಂತಿಯ ಅರಿವಿನ, ಸಾಮರಸ್ಯದ ಮತ್ತು ಪೂರ್ಣ ಸದಾಶಯದ ಪರಿಸ್ಥಿತಿಗಳಲ್ಲಿ ಬೆಳೆದಿರುವಿ, ಅಭಿವೃದ್ಧಿ ಹೊಂದಿರುವಿ: ಈ ಪರಿಸ್ಥಿತಿಗಳಿಗೆ ಪ್ರತ್ಯುತ್ತರವಾಗಿ, ಈ ಜಗತ್ತಿನಲ್ಲಿ ಈ ಬೆಳಕಿನ, ಈ ಸಾಮರಸ್ಯದ, ಈ ಸದ್ಭಾವನೆಯ ಅಭಿವ್ಯಕ್ತಿಯಾಗಿರಬೇಕು. ಇದು, ಅದಾಗಲೆ ಅತ್ಯಂತ ಉತ್ತಮವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 71/200**

## ಸದುದ್ದೇಶ ಮತ್ತು ಶರೀರ

**– ಅನುವಾದ: ನಾಗಜ್ಯೋತಿ ಮಾನ್ವಿ**

ದೇಹವು ಸದುದ್ದೇಶವನ್ನು ಹೊಂದಿರಲೇಬೇಕು ಎನ್ನುವದು ನಿಜವಾದ ಸಂಗತಿ. ನನ್ನ ಶರೀರದಲ್ಲಿ ಸದುದ್ದೇಶ ಇದೆ ಮತ್ತು ಮಾನಸಿಕ ಸದುದ್ದೇಶಕ್ಕಿಂತ ಪೂರ್ತಿಯಾಗಿ ಬೇರೆಯದೇ ಆಗಿದೆ. ಇದು ನಿಜವಾಗಿಯೂ ಶರೀರದ ಸದುದ್ದೇಶವಾಗಿದೆ. ಇದು ಎಲ್ಲಾ ಅನುಕೂಲತೆಗಳನ್ನು ಸ್ವೀಕರಿಸುತ್ತದೆ. ಆದರೆ ಮನೋಭಾವ ಮುಖ್ಯವೇ ಹೊರತು ಅದರ ಪರಿಣಾಮಗಳಲ್ಲ. (ಅನಾನುಕೂಲತೆಗಳು ಅತ್ಯಾವಶ್ಯವಾಗಿಲ್ಲ ಎನ್ನುವ ಖಚಿತತೆ ನನಗಿದೆ); ಒಟ್ಟಿನಲ್ಲಿ ಇಲ್ಲಿ ಮನೋಭೂಮಿಕೆಯೂ ಮುಖ್ಯ ಸಂಗತಿಯಾಗಿದೆ. ಹೌದು, ಇದು ಹೀಗೆಯೇ ಇರಬೇಕು (ಎಂದು ಕೈಗಳನ್ನು ಪೂರ್ತಿ ತೆರೆದು ತೋರಿಸುತ್ತಾ ಹೇಳುತ್ತಾರೆ). ನಾನು ನಿಜವಾಗಿಯೂ ಇದನ್ನು ಕಂಡಿದ್ದೇನೆ. ಅನೇಕ ಸಂದರ್ಭಗಳಲ್ಲಿ ದೈವತ್ವಕ್ಕೆ ಸಮರ್ಪಿಸಿಕೊಳ್ಳುವದೆಂದರೆ, ದೈವತ್ವದಲ್ಲಿ ವಿಶ್ವಾಸವಿದೆ ಎಂದೇನೂ ಅರ್ಥವಲ್ಲ. ಏಕೆಂದರೆ ನೀವು ದೈವತ್ವಕ್ಕೆ ಸಮರ್ಪಣೆ ಮಾಡುತ್ತೀರಿ, ಆ ಸಂದರ್ಭದಲ್ಲಿ ನೀವು ಹೇಳುವದು, “ನೀನು ನನ್ನನ್ನು ಬಳಲುವಂತೆ ಮಾಡಿದರೂ ಸಹಿತ ನಾನು ಮಾತ್ರ ಸಮರ್ಪಣೆ ಮಾಡುತ್ತಿದ್ದೇನೆ” ಎಂದಲ್ಲವೇ? ಅಂದರೆ ಇದು ಒಂದು ರೀತಿಯಲ್ಲಿ ವಿಶ್ವಾಸದಲ್ಲಿರುವ ಕೊರತೆಯನ್ನು ತೋರಿಸುತ್ತದೆ! ಹೌದು, ಇದು ನಿಜವಾಗಿಯೂ ಮೋಜಿನ ಸಂಗತಿಯಾಗಿ ಕಾಣುತ್ತದೆ. ಸಮರ್ಪಣೆಯು ವಿಶ್ವಾಸವನ್ನು ಸೂಚಿಸುವದಿಲ್ಲ. ವಿಶ್ವಾಸವೇ ಬೇರೆ ಇದೇ ಬೇರೆ ಆಗಿದೆ. ಇದೂ ಒಂದು ರೀತಿಯ ಜ್ಞಾನ ಹೌದು. ಆದರೆ ಇದು ನಿಶ್ಚಿತವಾದ ಅಂದರೆ “ತುಯ್ದಾಟದಲ್ಲಿ ಇರದ” ಜ್ಞಾನವಾಗಿದೆ. ಇದನ್ನು ಯಾವ ಸಂಗತಿಯೂ

ವಿಚಲಿತಗೊಳಿಸುವದಿಲ್ಲ. ಆದರೆ ಬಹುತೇಕವಾಗಿ ಇದನ್ನು ನಮಗೆ ನಾವೆ ತೊಂದರೆದಾಯಕವಾಗಿ ಮತ್ತು ಬಳಲಿಕೆಯ ಸ್ವರೂಪದಲ್ಲಿ ಹಾಗೂ ಕಷ್ಟದಾಯಕವಾಗಿರುವಂತೆ ರೂಪಿಸಿಕೊಳ್ಳುತ್ತೇವೆ. ದೈವೀ ಪ್ರಜ್ಞೆಯಲ್ಲಿ. ಪರಿಪೂರ್ಣವಾದ ಪ್ರಶಾಂತತೆ ಇರುತ್ತದೆ. ಈ ಚಿಕ್ಕ ರೂಪಾಂತರವನ್ನೂ ಸಹಿತ ತರಬೇಕಾದವರು ನಾವೇ ಆಗಿದ್ದೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/282**

ನಿಜವಾಗಿಯೂ ದೈಹಿಕ ಅಸ್ತಿತ್ವವು ಸರಳತೆ ಮತ್ತು ಸದುದ್ದೇಶವನ್ನು ಹೊಂದಿದೆ. (ಯಾವಾಗಲೂ ಜ್ಞಾನಸಮೃದ್ಧತೆಯಿಂದ ಇರುವದಕ್ಕಿಂತ, ಕೊಂಚ ದೂರವಿರುತ್ತದೆ). ಆದರೆ ಇನ್ನೂ ಸರಳತೆ ಮತ್ತೆ ಸದುದ್ದೇಶಗಳು ಪ್ರಾಣಿಕ ಉತ್ಕಟತೆ ಅಥವಾ ಮನದ ಆಡಂಬರಗಳಿಗಿಂತ ಅಂತರಾತ್ಮದೊಂದಿಗೆ ನಿಕಟ ಸಂಬಂಧವನ್ನು ಏರ್ಪಡಿಸುತ್ತವೆ. ಹೀಗಾಗಿ ಮಕ್ಕಳಲ್ಲಿ ಅಂತರಾತ್ಮವು ತನ್ನ ಸಹಜ ಸ್ಥಿತಿಯಲ್ಲಿಯೇ ಇರುತ್ತದೆ. ಏಕೆಂದರೆ ಅಸ್ತಿತ್ವದಲ್ಲಿ ಮಾನಸಿಕ ಮತ್ತು ಪ್ರಾಣಿಕ ವ್ಯವಸ್ಥೆಗಳು ಹೆಚ್ಚಾಗಿಯೇ ಅಹಂಕಾರದಿಂದ ಮಿಶ್ರಿತವಾಗಿರುತ್ತವೆ. ಜೊತೆಗೆ ಅನಿಯಂತ್ರಿತ ಸ್ಥಿತಿಯಲ್ಲೂ ಇರುತ್ತವೆ. ಬಾಹ್ಯ ಸಂಪರ್ಕದ ಕ್ರಿಯೆಗೆ ಪ್ರತಿಕ್ರಿಯೆಯಾಗಿ ವರ್ತಿಸಬಾರದು. ಆದರೆ ಪ್ರೀತಿ ಮತ್ತು ಸದ್ಭಾವದ ಚಿರಂತನ ದರ್ಶನದಿಂದ ವರ್ತಿಸಬೇಕು. ಬೇರೆಲ್ಲವೂ ಗೊಂದಲಮಯವಾದ ಮತ್ತು ಮಿಶ್ರಿತ ಫಲಿತಾಂಶಗಳ ಸಂಗ್ರಹವಾಗಿವೆ. ಹೀಗಾಗಿ ಅವು ಅವ್ಯವಸ್ಥೆಯನ್ನೇ ಮುಂದುವರೆಸುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/335**

ಒಂದು ವೇಳೆ ನಿಮಗೆ ಅನಾರೋಗ್ಯವಿದೆ ಎಂದಾದಲ್ಲಿ ಅದು ಪ್ರಗತಿಯಾಗುವ ಉದ್ದೇಶದಿಂದಲೇ ಬಂದಿದೆಯೇ? ಖಂಡಿತವಾಗಿಯೂ ಅಲ್ಲ: ನೈಜವಾಗಿ, ನೀವು ವಿಷಯವನ್ನು ಬದಲಾಯಿಸಿಕೊಳ್ಳಿ. ಮತ್ತೆ ಕೆಲವರು ಹೇಳುತ್ತಿರುವದೇನೆಂದರೆ, ಅವರ ಅಭೀಪ್ಸೆ ಅಪಾರ ಪ್ರಮಾಣದಲ್ಲಿ ಅದರಲ್ಲೂ ನಿರಂತರವಾಗಿದೆ, ಅವರ ಸದುದ್ದೇಶವೂ ಸಂಪೂರ್ಣವಾದ ಸ್ವರೂಪದಲ್ಲಿಯೇ ಇದೆ, ಅಂತಹ ಸಂದರ್ಭದಲ್ಲಿ ಅವರಿಗೆ ಏನೇ ಆದರೂ ಸಹಿತ, ಅವರು ಅದನ್ನು ಪ್ರಗತಿಯ ಮಾರ್ಗದಲ್ಲಿರುವ ಸಣ್ಣ ಪರೀಕ್ಷೆ ಎಂದು ಪರಿಗಣಿಸಿಕೊಂಡು ಮುಂದೆ ಸಾಗುತ್ತಾರೆ. ನನಗೆ ಈ ರೀತಿಯ ಮನೋಭಾವದ ಕೆಲವರು ಪರಿಚಿತರಿದ್ದಾರೆ. ಅವರು ಅನಾರೋಗ್ಯಕ್ಕೆ

ಒಳಗಾದ ಸಂದರ್ಭಗಳಲೆಲ್ಲ, ತಾವು ಪ್ರಗತಿಗೊಳ್ಳುವದರ ಸಲುವಾಗಿಯೇ ದೈವೀ ಕೃಪೆಯ ಸಹಾಯದ ಸಾಕ್ಷಿಯಾಗಿ ಇದು ಬಂದಿದೆ ಎಂದುಕೊಳ್ಳುತ್ತಾರೆ. ಅದರಲ್ಲೂ ತಮ್ಮಷ್ಟಕ್ಕೇ ತಾವೇ ಹೇಳಿಕೊಳ್ಳುತ್ತಾರೆ. ಒಂದು ಹಂತದಲ್ಲಿ ಇದು ಒಳ್ಳೆಯ ಲಕ್ಷಣವಾಗಿದೆ. ನಾನೂ ಸಹಿತ ನನ್ನ ಅನಾರೋಗ್ಯದ ಕಾರಣವನ್ನು ಕಂಡುಕೊಳ್ಳುತ್ತೇನೆ. ಜೊತೆಗೆ ಅವಶ್ಯಕವಿರುವ ಪ್ರಗತಿಯನ್ನೂ ಕಾಣುತ್ತೇನೆ. ಈ ಸ್ವಭಾವದ ಜನರು ನನಗೆ ಗೊತ್ತಿದ್ದಾರೆ. ಅವರು ಯಶಸ್ವಿಯಾಗಿಯೇ ಮುನ್ನಡೆದಿದ್ದಾರೆ. ಇನ್ನೂ ಕೆಲವರು ಇದ್ದಾರೆ, ಈ ವಿಷಯಕ್ಕೆ ತದ್ವಿರುದ್ಧವಾಗಿ ಇಂತಹ ಸಂಧರ್ಭವನ್ನು ಉಪಯೋಗಿಸಿಕೊಳ್ಳುವಲ್ಲಿ ದೂರವೇ ಉಳಿದಿರುತ್ತಾರೆ. ನೆಲಕಚ್ಚಿ ಬೀಳುವದಿದ್ದರೆ ಬೀಳಲಿ ಬಿಡಿ... ಆದರೆ ಅದು ಅವರಿಗೆ ಬಹಳ ಕೆಡುಕಿನ ವಿಷಯವಾಗಿದೆ. ಆದರೆ ಅವರು ಅನಾರೋಗ್ಯದಿಂದ ಇದ್ದಾಗ ನಾನು ಹೋಗಿ ಅವರನ್ನು ನೋಡುತ್ತೇನೆ. ಪರಮಾತ್ಮನು ಉದ್ದೇಶಪೂರ್ವಕವಾಗಿ ಅನಾರೋಗ್ಯವನ್ನು ಕಳುಹಿಸಿದ್ದಾನೆ ಎಂದು ಎಂದಿಗೂ ಯೋಚಿಸಬಾರದು. ಆ ರೀತಿಯಾಗಿದ್ದರೆ ನಿಜವಾಗಿಯೂ ಅವನು ದುಷ್ಟ–ದೇವತೆಯಾಗಿರುತ್ತಾನೆ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/168–169**

ದೇಹವು ತನ್ನಷ್ಟಕ್ಕೆ ತಾನೇ ತನಗೆ ಎಷ್ಟು ಸಾಧ್ಯವೋ ಅಷ್ಟು ಸಹಕರಿಸುತ್ತದೆ. ತಾನೇ ಎಷ್ಟು ಸಾಧ್ಯವೆನ್ನುವದು ಸದ್ಭಾವನೆ ಮತ್ತು ಸಹನೆಯ ಶಕ್ತಿಯೊಂದಿಗೆ ಹಾಗೂ ನೈಜತೆಯಲ್ಲಿ ಮುಂದುವರೆದು, ದೇಹವು ಮತ್ತೆ ತನ್ನ ಮೂಲಸ್ವರೂಪದ ಆರೋಗ್ಯಕ್ಕೆ ಮರಳುತ್ತದೆ. ಆದರೆ ಇದು ಕಾಲಕಾಲಕ್ಕೆ ಸ್ಪರ್ಶವನ್ನು ಪಡೆದುಕೊಂಡು ಕೆಲವೇ ಕ್ಷಣಗಳಲ್ಲಿಯೂ ತನ್ನ ಮೊದಲಿನ ಸ್ಥಿತಿಗೆ ತಲುಪಬಹುದು. ಈ ರೀತಿಯಲ್ಲಿ ಮರಳುವಿಕೆಯಲ್ಲಿ ಮತ್ತೆ ತಾನಿದ್ದ ಮೂಲಸ್ವರೂಪಕ್ಕೇ ಮರಳುವದು ಎಂದರೆ, ಜಿಗುಪ್ಸೆದಾಯಕವಾದ, ವಿಕರ್ಷಿಸುವ ಸ್ವಭಾವದ ಹಾಗೂ ದುರಂತಮಯ ವಾತಾವರಣಕ್ಕೆ ಮರಳಿದಂತೆಯೇ ಇರುತ್ತದೆ. ಇದು ಈ ರೀತಿಯ ಮರಳುವಿಕೆಯೂ ಆಗಿರಬಹುದು. ಅಥವಾ ಆ ರೀತಿಯಲ್ಲಿ ಇದ್ದಂತೆ ಭಾಸವಾಗುವದು. ಆದರೆ ಇದು ಹೆಚ್ಚು ಅಸಾಧ್ಯವೂ ಆಗಿದೆ. ಈ ರೀತಿಯ ಜನರನ್ನೂ ನಾನು ನೋಡಿದ್ದೇನೆ. ಇದು ಈಗಲೂ ಕಾಣುತ್ತಿದೆ.... ಆದರೆ, ಇನ್ನೂ ಇಲ್ಲಿ ನಿರಾಶವಾದಿತ್ವ, ಅಂದರೆ ಅವನತಿ ನಿರೀಕ್ಷಿಸುವ ಅಥವಾ ಮಹಾದುರಂತವನ್ನು ನಿರೀಕ್ಷಿಸುವ ಸಾವಿರಾರು ವರ್ಷಗಳ ಕೆಟ್ಟ ರೂಢಿಗಳ ಭಾರವೂ ಇರುತ್ತದೆ.

ನೈಜತೆಯಲ್ಲಿ ನೋಡಿದರೆ, ಈ ಎಲ್ಲಾ ವಿಷಯಗಳು ಮತ್ತೂ ಪರಿಶುದ್ಧಗೊಳಿಸುವದರ ಸಲುವಾಗಿ, ಸ್ಪಷ್ಟಗೊಳಿಸುವದರ ಸಲುವಾಗಿ ಇರುತ್ತವೆ. ಇವುಗಳನ್ನು ಇಂತಹ ವಾತಾವರಣದಿಂದ ದೂರ ಎಸೆಯುವದು ಎಷ್ಟು ಕಷ್ಟಕರವಾದುದು. ಒಟ್ಟಾರೆಯಾಗಿ ಇದು ನಮ್ಮ ಹೃದಯದಲ್ಲಿ–ಅಂತರಂಗದಲ್ಲಿ ಸಹಜವಾದುದು ಎನ್ನುವಂತೆ ಕಾಣುತ್ತದೆ. ಆದರೆ ಇದು ಅತಿ ದೊಡ್ಡ ಅಡೆ–ತಡೆಯೂ ಆಗಿದೆ. ಈ ರೀತಿಯ ಭಾವನೆಯು ಅವನತಿಯತ್ತಲೇ ಒಯ್ಯುವದಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/73**

ಸಹಜವಾಗಿ ಬಾಹ್ಯದಲ್ಲಿರುವ ದೈಹಿಕ–ಪ್ರಜ್ಞೆ ಮತ್ತು ಅಂತರಾತ್ಮನ ಪ್ರಜ್ಞೆಗೆ ಸತತವಾಗಿ ಸಂಪರ್ಕ ಏರ್ಪಡಿಸಿಕೊಳ್ಳುವದು ಬಹುತೇಕವಾಗಿ ಕಷ್ಟದಾಯಕವಾದ ಸಂಗತಿ. ಓಹ್!, ದೈಹಿಕ ಪ್ರಜ್ಞೆಯು ಬಹಳಷ್ಟು ಸದುದ್ದೇಶವನ್ನು ಹೊಂದಿದೆ; ಇದು ಬಹಳ ನಿಯಮಿತವಾಗಿಯೂ ಇದೆ. ಇದು ಸತತ ಪ್ರಯತ್ನಶೀಲವಾಗಿರುತ್ತದೆ. ಆದರೆ ಬಹಳ ನಿಧಾನ ಮತ್ತು ಭಾರವಾಗಿರುತ್ತದೆ. ಬಹಳ ಸಮಯವನ್ನು ಅಪೇಕ್ಷಿಸುತ್ತದೆ. ಹೀಗಾಗಿ ಇದನ್ನು ಚಲಿಸುವಂತೆ ಮಾಡುವದೂ ಸಹಿತ ಕಷ್ಟಕರವಾಗಿದೆ. ದಣಿವಿನ ಪ್ರಶ್ನೆ ಇರದೇ ಹೋದರರೂ ಪ್ರಯತ್ನಶೀಲತೆ ಇರುವದಿಲ್ಲ. ಸುಮ್ಮನೇ ತನ್ನ ಮಾರ್ಗದಲ್ಲಿ ಸಾಗುತ್ತಿರುತ್ತದೆ. ಬಾಹ್ಯ ಪ್ರಶ್ನೆಯನ್ನು ಅಂತರಾತ್ಮನ ಪ್ರಜ್ಞೆಯೊಂದಿಗೆ ಸಂಪರ್ಕಿಸಲು ಇದು ನೂರಾರು ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಆದರೆ ಇಲ್ಲಿ ಕೆಲವೊಂದು ಕಾರಣದಿಂದ ಪ್ರಾಣವೂ ಭಾಗಿಯಾಗಿರುತ್ತದೆ. ಹೀಗಾಗಿ ಇಲ್ಲಿ ಒಂದು ಉತ್ಕಟತೆಯು ರೂಪುಗೊಳ್ಳುತ್ತದೆ. ಇದು ಸಂಪರ್ಕವನ್ನು ಬಯಸುತ್ತದೆ. (ಯಾವಾಗಲೂ ಆಧ್ಯಾತ್ಮಿಕ ಕಾರಣಕ್ಕೇ ಎಂದು ಹೇಳಲು ಬರುವದಿಲ್ಲ. ಕೆಲವೊಮ್ಮೆ ಬೇರೆ ಕಾರಣಕ್ಕೂ ಇರಬಹುದು). ಆದರೆ ಒಟ್ಟಿನಲ್ಲಿ ಇದು ಸಂಪರ್ಕವನ್ನು ಬಯಸುತ್ತದೆ. ತನ್ನೆಲ್ಲಾ ಶಕ್ತಿ, ಸಾಮರ್ಥ್ಯಗಳಿಂದ, ತನ್ನ ಎಲ್ಲ ಉತ್ಕಟತೆ ಮತ್ತು ಉತ್ಸಾಹದಿಂದ ಇದನ್ನು ಬಯಸುತ್ತದೆ. ಇಲ್ಲಿ ಇದನ್ನು ಮೂರು ತಿಂಗಳಲ್ಲಿ ಈ ಸಂಪರ್ಕವನ್ನು ಸಾಧಿಸಲಾಯಿತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/257–258**

ಜಡ ಸ್ವಭಾವದ ಯೋಗವು ಅತ್ಯಂತ ಕಷ್ಟಕಾರವಾದುದು ಎಂದು ನಾನು ಫ್ರಾನ್ಸಿನಲ್ಲಿ ಇದ್ದಾಗಲೇ ಶ್ರೀ ಅರವಿಂದರು ನನಗೆ ಸ್ಪಷ್ಟಪಡಿಸಿದ್ದರು. ಇನ್ನುಳಿದ ಯೋಗಗಳಲ್ಲಿ ಪಥವು ಸ್ಪಷ್ಟವಾಗಿರುತ್ತದೆ. ಅದು ನಿಮಗೂ ಗೊತ್ತಿರುತ್ತದೆ. ನೀವು ಎಲ್ಲಿಗೆ ಹೋಗಬೇಕೆಂದು, ಹೇಗೆ ಮುಂದುವರೆಯಬೇಕೆಂದು, ಅದಕ್ಕಾಗಿ ನೀವು ಏನು ಮಾಡಬೇಕು ಎನ್ನುವದನ್ನು ಸ್ಪಷ್ಟವಾಗಿಯೇ ತಿಳಿಸುತ್ತಿದೆ. ಆದರೆ ಈ ಜಡದ–ಯೋಗವನ್ನು ಇಲ್ಲಿಯವರೆಗೂ ಯಾರೂ ಅನುಷ್ಠಾನಿಸಿಲ್ಲ. ಇಲ್ಲಿಯವರೆಗೂ ಇದು ಆಗಿಲ್ಲ. ಆದ್ದರಿಂದಲೇ ಪ್ರತೀ ಕ್ಷಣದಲ್ಲಿಯೂ ಪ್ರತಿಯೊಂದನ್ನೂ ಇದಕ್ಕಾಗಿ ಸಂಶೋಧಿಸಬೇಕಾಗುತ್ತದೆ.

ವಿಶೇಷವಾಗಿ ಶ್ರೀ ಅರವಿಂದರು ಸೂಕ್ಷ್ಮ ಭೌತಿಕದಲ್ಲಿ ಸ್ಥಾಪನೆಯಾದಾಗಿನಿಂದ ಖಂಡಿತವಾಗಿಯೂ ಈಗ ವಿಷಯಗಳು ಉತ್ತಮಗೊಳ್ಳುತ್ತಿವೆ. ಬಹುತೇಕವಾಗಿ ಜಡದ ಸೂಕ್ಷ್ಮ ಭೌತಿಕದಲ್ಲಿ ಇನ್ನೂ ಬಹಳಷ್ಟು ಪ್ರಶ್ನಾರ್ಥಕ ಚಿಹ್ನೆಗಳಿವೆ. ದೇಹವು ಇದನ್ನೆಲ್ಲವನ್ನೂ ಒಮ್ಮೊಮ್ಮೆ ಅರ್ಥ ಮಾಡಿಕೊಳ್ಳುತ್ತದೆ, ಅದೇ ರೀತಿಯಲ್ಲಿಯೇ ಮರೆತೂ ಬಿಡುತ್ತದೆ. ವೈರಿಯ ಪ್ರತಿರೋಧವು ದೊಡ್ಡ ವಿಷಯವೇನಲ್ಲ. ಎಷ್ಟೇ ಆದರೂ ಅದು ಹೊರಗಿನಿಂದ ಬರುತ್ತದೆ ಎನ್ನುವದು ನನಗೆ ಗೊತ್ತಿದ್ದ ವಿಷಯವಾಗಿರುತ್ತದೆ. ಆದರೆ ಇದು ಅಸುರೀ ಸ್ವಭಾವದಲ್ಲಿದೆ. ಅದಕ್ಕೆ ಏನು ಅವಶ್ಯಕವಿದೆಯೋ ಅದನ್ನು ನಾನು ಮಾಡುತ್ತೇನೆ. ಆದರೆಲ್ಲಾ ತೊಂದರೆಗಳು ದೈನಂದಿನ ಭೌತಿಕ ಜೀವನದ ಚಿಕ್ಕ ಚಿಕ್ಕ ಘಟನೆಗಳಲ್ಲಿ, ತಕ್ಷಣದಲ್ಲಿಯೇ ಈ ದೈಹಿಕ–ಸ್ವಭಾವಕ್ಕೆ ಅರ್ಥವಾಗುವದಿಲ್ಲ. ಏಕೆಂದರೆ ಇದಕ್ಕೆ ಮರೆವಿನ ಸ್ವಭಾವವಿರುತ್ತದೆ. ಆದರೆ ಇದು ಸಂತೋಷದಿಂದಲೂ ಇರುತ್ತದೆ. ಕೆಲಸ ಮಾಡಲು ಪ್ರೀತಿಯ ಸ್ವಭಾವವನ್ನು ಹೊಂದಿರುತ್ತದೆ. ಈ ಪ್ರೀತಿಯ ಸಲುವಾಗಿಯೇ ಅದು ರೂಪವನ್ನೂ ತಾಳಿರುತ್ತದೆ. ದೇಹದ ಅಸ್ತಿತ್ವವಿರುವದು ತನ್ನನ್ನು ಬದಲಾವಣೆಗೆ ಒಳಪಡಿಸಿಕೊಂಡು, ರೂಪಾಂತರಗೊಳಿಸಿಕೊಳ್ಳುವದಕ್ಕಾಗಿ. ಈ ರೂಪಾಂತರಣಕ್ಕೆ ಈ ದೇಹವು ಒಂದು ವಿಧೇಯ ಉಪಕರಣವಾಗಿದ್ದುಕೊಂಡು ಸದುದ್ದೇಶದಿಂದ ತುಂಬಿರುತ್ತದೆ!

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನವರಿ 28, 1960**

# ಶುಭೇಚ್ಛೆ, ಮಾರ್ಗದರ್ಶನದ ಇಚ್ಛಾಶಕ್ತಿ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

ಅಶಿಸ್ತನ್ನು ನಿಯಂತ್ರಿಸುವವರೆಗೆ ಮತ್ತು ಅದನ್ನು ಬಲವಂತವಾಗಿ ಬದಲಾಯಿಸುವವರೆಗೆ ಸದ್ಭಾವನೆಯುಳ್ಳ ಭಾಗ ಬೆಳೆಯಲೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/84**

ಅಜ್ಞಾನ ಇರುವುದರಿಂದ ನೀವು ತಪ್ಪನ್ನು ಮಾಡುವಿರಿ. ಏಕೆಂದರೆ ಅದು ನಿಮಗೆ ತಪ್ಪೆಂದು ಗೊತ್ತಿರುವುದಿಲ್ಲ. ಆದರೆ ಸ್ಪಷ್ಟವಾಗಿ ನಿಮಗೆ ಅದು ತಪ್ಪೆಂದು ತಿಳಿದಾಗ, ಯಾವಾಗ ಅಜ್ಞಾನ ಹೋಗಿರುತ್ತದೆಯೋ ಮತ್ತು ನಿಮ್ಮಲ್ಲಿ ಸದ್ಭಾವ ಇದ್ದಾಗ ನೀವು ಮತ್ತೆ ಇಂತಹ ತಪ್ಪು ಮಾಡುವುದಿಲ್ಲ ಮತ್ತು ಯಾವ ಸ್ಥಿತಿಯಲ್ಲಿ ತಪ್ಪು ಮಾಡುತ್ತಿದ್ದರೋ ಅದರಿಂದ ಹೊರಗೆ ಬರುತ್ತೀರಿ. ಆದರೆ ನಿಮಗದು ತಪ್ಪೆಂದು ಗೊತ್ತಿದ್ದು, ಅದನ್ನು ಮಾಡಿದರೆ ನಿಮ್ಮಲ್ಲಿ ಏನೋ ವಿಕೃತಿ ಇದೆಯೆಂದು ಅರ್ಥ. ಆ ಕಾರಣ ಬೇಕಂತಲೇ ಗೊಂದಲದ ಪರ ಅಥವಾ ಕೆಟ್ಟ ಭಾವದೆಡೆಗೆ ಅಥವಾ ದೈವೀ ವಿರೋಧಿ ಶಕ್ತಿಯ ಕೂಡ ನೀವು ಉಳಿಯುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/306**

ಇದೊಂದು ದೊಡ್ಡ ಅಡಚಣೆ. ಸೂಕ್ಷ್ಮವಾಗಿ ತಪ್ಪಿಸಿಕೊಳ್ಳಬೇಕು. ಯಾವಾಗ ಅಸಂತೃಪ್ತಿಯ ಸಣ್ಣ ಕುರುಹು ಇದೆಯೋ, ಅಸಮಾಧಾನ ಇದೆಯೋ ಆಗ ಪ್ರಾಣಕ್ಕೆ ಈ ರೀತಿಯಾಗಿ ಮಾತನಾಡಬೇಕು, "ಓ ನನ್ನ ಗೆಳೆಯ, ನೀನು ಸಮಾಧಾನವಾಗಿರು, ನಿನಗೆ ಏನು ಕೇಳುತ್ತಾರೆಯೋ ಅದನ್ನಷ್ಟೇ ಮಾಡು, ಇಲ್ಲವೆಂದರೆ ನನ್ನೊಟ್ಟಿಗೆ ವ್ಯವಹಾರ ಮಾಡಬೇಕಾಗಬಹುದು ಮತ್ತು ಬೇರೆಯವರು ಇನ್ನೂ ಉತ್ಸಾಹಶೀಲರಾಗಿ ಈಗಲೇ ಎಲ್ಲವನ್ನು ತಕ್ಷಣವೇ ಮಾಡಬೇಕು ಎಂದು ಹೇಳುತ್ತಾರೆ". ನಿಮ್ಮ ಉತ್ತರ ಸ್ವಲ್ಪ ಸಮಾಧಾನವಾಗಿರಲಿ; ನಿನ್ನ ಶಕ್ತಿ ಅಪಾರ, ಅದನ್ನು ಐದು ನಿಮಿಷದಲ್ಲಿ ವ್ಯಯಿಸಬಾರದು, ನಮಗೆ ಬಹಳ ಸಮಯದವರೆಗೆ ಅದು ಬೇಕು, ಜಾಗರೂಕವಾಗಿ ಉಳಿಸಿಕೋ ಮತ್ತು ಬೇಕಿದ್ದಾಗ ನಾನು ನಿನ್ನ ಸದಾಶಯವನ್ನು ಸ್ಮರಿಸುತ್ತೇನೆ, ನೀನು ಪಾಲಿಸುತ್ತಿಯಾ, ನೀನು ಆಕ್ಷೇಪಿಸುವುದಿಲ್ಲ, ನೀನು ಪ್ರತಿಭಟಿಸುವುದಿಲ್ಲ, ನೀನು ದಂಗೆ ಏಳುವುದಿಲ್ಲ, ನೀನು

ಹೌದು ಹೌದು ಎನ್ನುತ್ತೀಯ, ನೀನು ಕೇಳಿದಾಗ ಸ್ವಲ್ಪ ತ್ಯಾಗ ಮಾಡುತ್ತೀಯ ಆಗ ನೀನು ತುಂಬು ಹೃದಯದಿಂದ ಹೇಳಿದೆ "ಹೌದು" ಎಂದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/249**

ಒಂದು ಸಹಜವಾದ ಕ್ರಿಯೆ, ಬೇರೆ ಏನು ಮಾಡಲು ಆಗದೇ ಇದ್ದಾಗ ಮಾಡಿದ್ದು, ಮತ್ತು ಸದ್ಭಾವನೆಯಿಂದ ಅರ್ಪಿಸಿದ್ದರೆ, ಅದೊಂದೇ ನಿಜವಾದ ಮೌಲ್ಯವನ್ನು ಹೊಂದಿದ್ದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/318**

ಯಾರು ಬಹಳ ಜಾಗರೂಕರಾಗಿದ್ದಾರೋ ಮತ್ತು ಬಹಳ ಪ್ರಾಮಾಣಿಕರೋ ಅವರಿಗೆ ಒಂದು ಸೂಚನೆ ಬರುತ್ತದೆ. ಒಂದು ಅಂತರಂಗದ ಅಂದರೆ ಗ್ರಹಿಸುವ ಸೂಚನೆ. ಯಾರು ಯಾವುದನ್ನು ಕಾರ್ಯಗತ ಮಾಡುತ್ತಿದ್ದಾರೆಯೋ ಅದರ ಸೂಚನೆ ಅಥವಾ ಯಾವ ಕ್ರಿಯೆ ಮಾಡುತ್ತಿದ್ದಾರೋ ಅದರದ್ದು. ನಿಜವಾಗಿ ಯಾರಲ್ಲಿ ಎಲ್ಲವೂ ಸದ್ಭಾವನೆಯಿಂದ ಕೂಡಿದೆಯೋ, ಅದೇನೆಂದರೆ ಸರ್ವ ಪ್ರಾಮಾಣಿಕತನದಿಂದ, ಅವನ ಸತ್ತೆಯ ಎಲ್ಲಾ ಭಾಗಗಳು ಪ್ರಜ್ಞಾಪೂರ್ಣವಾಗಿ, ಸರಿಯಾದದ್ದನ್ನು ಸರಿಯಾದ ಮಾರ್ಗದಲ್ಲಿ ಮಾಡಬೇಕೆಂದು ಬಯಸುತ್ತಾನೆಯೋ, ಆಗ ಅಲ್ಲಿ ಯಾವಾಗಲೂ ಒಂದು ಸೂಚನೆ ಇದ್ದೇ ಇರುತ್ತದೆ; ಬೇರೆ ಯಾವುದೋ ಒಂದು ಕಾರಣದಿಂದ ಅಥವಾ ಬೇರೆ ಯಾರು ಹೆಚ್ಚು ಕಡಿಮೆ ಅಪಾಯಕಾರಿ ಕ್ರಿಯೆ ಮಾಡಿದರೆ, ಅಂತಹವರಿಗೆ ಏನೋ ಒಂದು ಅಸ್ವಸ್ಥತೆಯ ಸೂಚನೆ ಬೆನ್ನುಹುರಿಯಲ್ಲಿ ಕಾಣಿಸುತ್ತದೆ; ಆ ಅಸ್ವಸ್ಥತೆ ಹಿಂಸಾತ್ಮಕವಲ್ಲ, ಅದರಲ್ಲಿ ನಾಟಕೀಯವಾಗಿ ಒಪ್ಪಲೇಬೇಕೆಂಬ ಒತ್ತಾಯವಿಲ್ಲ, ಆದರೆ ಯಾರು ಎಚ್ಚರವಾಗಿರುವರೋ ಅವರಿಗೆ ಅರ್ಥವಾಗುತ್ತದೆ – ಏನೋ ಒಂದು ತರಹದ ವಿಷಾದ, ಒಂದು ತರಹದ ಅಸಮ್ಮತಿ. ಎಷ್ಟರಮಟ್ಟಿಗೆ ಎಂದರೆ ಒಂದು ತರಹ ಸಹಯೋಗಕ್ಕೆ ನಿರಾಕರಣೆ. ಆದರೆ ನಾ ಬಲವಾಗಿ ಹೇಳಬೇಕೆಂದರೆ ಹಿಂಸೆ ಇಲ್ಲದೆ ಕ್ರೂರವಾದ ಸ್ವಯಂ ಪ್ರತಿಪಾದನೆ ಇಲ್ಲಿದೆ; ಯಾವುದೇ ಗದ್ದಲವಿಲ್ಲದೆ, ಯಾರಿಗೂ ನೋವುಂಟು ಮಾಡದೆ; ಹೆಚ್ಚೆಂದರೆ ಅದು ಸ್ವಲ್ಪ ಅಸ್ವಸ್ಥತೆ ಮತ್ತು ನೀವು ಅದನ್ನು ಉಪೇಕ್ಷಿಸಿದರೆ, ನೀವು ಯಾವುದೇ ಗಮನ ಕೊಡದಿದ್ದರೆ, ಯಾವುದೇ ಮಹತ್ವ ಕೊಡದಿದ್ದರೆ ಸ್ವಲ್ಪ ಸಮಯದ ನಂತರ ಅದು ಸಂಪೂರ್ಣವಾಗಿ ಕರಗಿಹೋಗುತ್ತದೆ ಮತ್ತು ಮತ್ತೆಂದೂ ಅದು ಇರುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/31–32**

ಇದಕ್ಕೆ ಪ್ರತಿಯಾಗಿ – ಎರಡು ವಿಷಯಗಳಲ್ಲಿ, ಒಂದು – ನಿಮ್ಮಲ್ಲಿ ಪ್ರಜ್ಞೆ ಇಲ್ಲದಿದ್ದಾಗ ಮಾತ್ರ, ನೀವು ಮೇಲರಿಮೆಯವರು ಎಂದು ಆಲೋಚನೆ ಮಾಡಲು ಸಾಧ್ಯ. ಯಾವ ಕ್ಷಣ ನೀವು ನಿಜವಾದ ಪ್ರಜ್ಞೆಯುಳ್ಳವರಾಗುತ್ತಿರೋ ಆವಾಗ ಸಂಪೂರ್ಣವಾಗಿ ಈ ಮೇಲರಿಮೆಯವರು ಮತ್ತು ಕೀಳರಿಮೆಯವರು ಎನ್ನುವ ಅನಿಸಿಕೆ ಕಳೆದುಹೋಗುತ್ತದೆ. ಹಾಗಾಗಿ ಎರಡು ಸಂದರ್ಭಗಳಲ್ಲಿ ನೀವು ಮೇಲಿರಿಮೆಯವರು ಎಂದುಕೊಳ್ಳಬಾರದು – ಅದೊಂದು ತರಹದ ಸಣ್ಣತನ ಮತ್ತು ನೀಚತನ – ಆದರೆ ಸಂಪೂರ್ಣವಾಗಿ ಸದ್ಭಾವನೆಯಿಂದ ಮತ್ತು ಕರುಣೆಯಿಂದ ಸಂವೇದಿಸುವುದು ಮತ್ತು ಜನ ಏನು ಹೇಳುತ್ತಾರೆ, ಏನು ಹೇಳುವುದಿಲ್ಲ ಎಂಬುದನ್ನು ಉಪೇಕ್ಷಿಸಿ. ಆದರೆ ಸಭ್ಯರಾಗಿರಿ, ಅಸಭ್ಯರಾಗಿರುವುದಕ್ಕಿಂತ ಸಭ್ಯರಾಗಿರುವುದು ಒಳ್ಳೆಯದು. ನೀವು ಒಳ್ಳೆಯ ಶಕ್ತಿಗಳೊಂದಿಗೆ ಸಾಮರಸ್ಯದಿಂದಿದ್ದರೆ ಕೆಟ್ಟ ಮತ್ತು ಹಾಳು ಮಾಡುವ ಶಕ್ತಿಗಳೊಂದಿಗೆ ಹೋರಾಡಬಹುದು. ಇದು ಬಿಟ್ಟರೆ ಬೇರೆ ಉದ್ದೇಶವಿಲ್ಲ. ನಾವು ಸಾಮರಸ್ಯವನ್ನು ಬಯಸುತ್ತೇವೆ ಮತ್ತು ಹಾಗೆ ಇರುವುದು ಒಳ್ಳೆಯದು. ಮುಖ್ಯವಾಗಿ ಇವೆಲ್ಲವುಗಳನ್ನು ಮೀರಿ ಇರಬೇಕು ಮತ್ತು ದೈವದೊಂದಿಗಿನ ಸಂಬಂಧಕ್ಕೆ ಮಾತ್ರ ಆಸಕ್ತಿಯಿಂದ ಇರಬೇಕು. ನಿಮ್ಮಿಂದ ಅವನು ಏನು ಬಯಸುತ್ತಾನೆ, ನೀವು ಅವನಿಗಾಗಿ ಏನು ಮಾಡಬಹುದು. ಇದೊಂದೇ ವಿಷಯ ಬಹಳ ಮಹತ್ವದ್ದು. ಮಿಕ್ಕಿದ್ದೆಲ್ಲ ಅಷ್ಟೇನೂ ಮುಖ್ಯವಾದುದಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/388–389**

ನಿನ್ನೆಯೋ ಅಥವಾ ಮೊನ್ನೆಯೋ ಪವಿತ್ರ ಪತ್ರಗಳನ್ನು ವಿಂಗಡಿಸುತ್ತಿದ್ದಾಗ, ನಾನು ಯಾರಿಗೋ ಇಂಗ್ಲಿಷ್‌ನಲ್ಲಿ ಬರೆದ ಪತ್ರ ದೊರಕಿತು; "ಹೌದು ಒಳ್ಳೆಯ ಸಂಕಲ್ಪವು ಎಲ್ಲಾ ವಸ್ತುಗಳಲ್ಲಿ ಅಡಗಿದ್ದು ತನ್ನಷ್ಟಕ್ಕೆ ತಾನು ಪ್ರಕಟಗೊಳ್ಳುತ್ತದೆ. ಅದು ಸದ್ಭಾವನೆಯನ್ನು ತನ್ನ ಪ್ರಜ್ಞೆಯಲ್ಲಿ ತೆಗೆದುಕೊಂಡು ಹೋಗುತ್ತದೆ. ಇದು ಭವಿಷ್ಯತ್ತಿಗಾಗಿ ಇರುವ ರಚನಾತ್ಮಕ ಹಾದಿ." ನಾನು ಇದರಲ್ಲಿ ಬಹಳ ಆಸಕ್ತಿದಾಯಕವಾಗಿರುವದನ್ನು ಕಂಡೆನು (ಅದು ವರ್ಷಗಳ ಹಿಂದೆ ಬರೆದಿದ್ದು ಮತ್ತು ಬರೆದಿದ್ದನ್ನು ಪವಿತ್ರ ಹೇಳಿದನು: ಪ್ರತ್ಯೇಕವಾಗಿ ಹಾಳೆಯ ರೂಪದಲ್ಲಿ ಕಡತದಲ್ಲಿತ್ತು) ಮತ್ತು ಅದು ನನಗೆ ಏನು ಹೇಳಬಯಸಿತ್ತು ಅಂದರೆ, "ನೋಡು ಇದಕ್ಕಿಂತ ಮೊದಲು ಸಹಿತ ಹೀಗೆ ಮಾತನಾಡಿದ್ದಿಯೋ" ಏಕೆಂದರೆ ಸದಾಶಯವೇ ಸಾಮರಸ್ಯ(ಸಹಜವಾಗಿ ಮಾನಸಿಕ ಸ್ಥರದಲ್ಲಿ)ವಾಗಿ. ಮಾನಸಿಕವಾಗಿ ಅದು

ಒಳ್ಳೆಯ ಸಂಕಲ್ಪವಾಗಿ, ಎಲ್ಲವನ್ನು ಒಳ್ಳೆಯದಾಗಿ ಮಾಡುತ್ತದೆ. ನನಗೆ ಇದರಲ್ಲಿ ಒಂದು ಖಚಿತವಾದ ಆಸಕ್ತಿ ಕಂಡೆನು.

ಮತ್ತು ವಾಪಸ್ ಬಂದದ್ದು ಒಳ್ಳೆಯದಾಯಿತು; ಅದೊಂದು ರೂಪ ಎಲ್ಲರಿಗೂ ಕೈಗೆಟಕುವ ರೀತಿಯಲ್ಲಿದೆ, ಯಾವುದನ್ನು ಅವರು ತಿಳಿದುಕೊಳ್ಳುವರು – ನೀವು ಯಾವುದು ಅತಿಶೋಕ್ತಿಯಾದುದನ್ನು ಕೇಳುತ್ತಿಲ್ಲ ಎನ್ನುವದನ್ನು ತಿಳಿಯಿರಿ: ನೀವು ಸದಾಶಯವನ್ನು ಕೇಳಿದರೆ ಮತ್ತು ನಾನು ಇದನ್ನು ಕಂಡುಕೊಂಡಾಗ, ನನ್ನೊಳಗೆ ನಾನು ನಕ್ಕೆ ಮತ್ತು ಅದೊಂದು ಉಲ್ಲಾಸದ ಅಂಶವಾಗಿತ್ತು. ನಾನು ಹೇಳಿದೆ "ಒಳ್ಳೆಯದು ನಾನು ಉಲ್ಲಾಸದ ಬಗ್ಗೆ ಕೂಡ ಈ ರೀತಿ ಬರೆಯಬಹುದು! ನಾನು ಹೇಳಬಹುದಿತ್ತು, ಉಲ್ಲಾಸವಾಗಿರಿ ಮತ್ತು ಎಲ್ಲೆಡೆ ಉಲ್ಲಾಸ ಕಾಣುವಿರಿ". – ನಾವು ಬಹಳಷ್ಟು ಹೇಳಬಹುದು (ಶ್ರೀಮಾತೆಯವರು ತಮ್ಮ ಕೈಗಳನ್ನು ನಿಧಾನವಾಗಿ ತಿರುಗಿಸುತ್ತಾ ಹಲವು ಮುಖಗಳು ಇರುವುದನ್ನು ಸೂಚಿಸುವರು). ನನಗೆ ಅದು ಯಾವಾಗಲೂ ವರ್ಣಪಟಲದ ಬಗ್ಗೆ ಆಲೋಚನೆ ಮಾಡುವಂತೆ ಮಾಡುತ್ತದೆ ಅದರಲ್ಲಿನ ವರ್ಣಗಳ ವ್ಯವಸ್ಥೆ ಏನನ್ನೋ ವ್ಯಕ್ತಮಾಡುತ್ತದೆ, ಯಾವಾಗ ಅದು ವ್ಯಕ್ತವಾಗುತ್ತದೋ.... ಮುದುಡುತ್ತದೆ, ಸಣ್ಣದಾಗುತ್ತದೆ, ಸಾಮಾನ್ಯ ಕರಣಗೊಂಡಿದೆ ಮತ್ತು ಕೊನೆಯದಾಗಿ ಎಲ್ಲರಿಗೂ ಕೈಗೆಟುಕುತ್ತದೆ ಆದರೆ ಅಲ್ಲೊಂದು ವಿಷಯವಿದೆ; ಒಂದು ತರಹದ ವೈರುಧ್ಯವು ಭೂಮಿಯ ಮೇಲೆ ಕ್ಷಣದಲ್ಲಿ ನಡೆಯುತ್ತದೆ, ಈ ಒಂದು ಅದ್ಭುತವಾದ ದೈವೀ ಕೃಪೆ ಯಾವಾಗಲೂ ಸಹಾಯ ಮಾಡುತ್ತದೆ ಯಾವಾಗಲೂ ಉತ್ತಮಪಡಿಸಲು ಒತ್ತಡ ಹಾಕುತ್ತದೆ: "ಈಗ ಬಾ ಉಲ್ಲಾಸದಿಂದಿರು, ಈಗ ಬಾ, ಒಳ್ಳೆಯ ಭಾವವಿರಲಿ, ಈಗ ಬಾ ಪಡೆದುಕೋ, ಹೌದು, ಅಂತರಂಗದ ಸಂತೃಪ್ತಿಯ ಸಾಮರಸ್ಯ ನಿರೀಕ್ಷೆಯ ಬಗೆಗೆ ನಂಬಿಕೆ ಹೊಂದಿರಿ. ಭಿನ್ನಮಾಡುವ ಕಂಪನಗಳನ್ನು ಒಪ್ಪಬೇಡಿರಿ – ಯಾವ ಕಂಪನ ಕುಗ್ಗಿಸುತ್ತದೆಯೋ ಕೆಳಸ್ತರಕ್ಕೆ ಎಳೆಯುತ್ತದೆಯೋ ಮತ್ತು ವಿನಾಶದ ಕಡೆಗೆ ಒಯ್ಯುತ್ತದೆಯೋ ಅದರ ಕುರಿತು ಯೋಚಿಸಬೇಡಿ."

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 3, 1967**

ಸರಳವಾಗಿರುವುದು ಬಹಳ ಒಳ್ಳೆಯದು, ಸರಳವಾಗಿ ಸದಾಭಿಷಯ–ವಾಗಿರುವುದು, ಎಷ್ಟು ಒಳ್ಳೆಯದು ಮಾಡಲು ಆಗುವುದು ಅಷ್ಟು ಮಾಡುವುದು ಮತ್ತು ಅದನ್ನೂ ಒಳ್ಳೆಯ ಸಾಧ್ಯತೆಯೊಂದಿಗೆ ಮಾಡಬೇಕು; ಏನೋ ಒಂದು

ಗಣನೀಯವಾದುದನ್ನು ರಚಿಸುವಿರಿ, ಆದರೆ ಬೆಳವಣಿಗೆಗಾಗಿ ಹಂಬಲಿಸಿರಿ. ಬೆಳಕಿಗಾಗಿ (ಜ್ಞಾನಕ್ಕಾಗಿ) ಸಮಾಧಾನಯುತವಾದ ಸದಭಿಲಾಷೆಯ ಸಲುವಾಗಿ ಮತ್ತು ನೀನು ಏನಾಗಬೇಕೆಂದು ಅದಕ್ಕೆ ಗೊತ್ತಿದೆ, ಹೀಗಾಗಿ ಅದೇ ನೀನೇನಾಗಬೇಕೆಂದು ನಿರ್ಧರಿಸಲಿ ಮತ್ತು ನೀನು ಏನು ಮಾಡಬೇಕೆಂದು ಅದು ನಿರ್ಧರಿಸಲಿ, ಆಗ ಯಾವ ಚಿಂತೆಯು ಇಲ್ಲ ಮತ್ತು ಪರಿಪೂರ್ಣವಾದ ಸಂತೋಷ ಇರುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/248**

ನಿಜ ಮಹತಿ, ದಯಾಶೀಲತೆ ಮತ್ತು ಸದಾಶಯದಲ್ಲಿರುತ್ತದೆ ಮತ್ತು ಆದುದರಿಂದ ಯಾವ ರೀತಿ ಇರಬೇಕೆಂದು ತಿಳಿದುಕೊಳ್ಳುವುದು ಕಷ್ಟಕರ. ಏಕೆಂದರೆ ನೀವು ಆಲೋಚನೆಯಲ್ಲಿ ಯಥಾಸ್ಥಿತಿಯಲ್ಲಿ ಇರುತ್ತೀರಿ. ನೀವು ಅಭೀಪ್ಸೆಯಲ್ಲಿ ಕೂಡ ಯಥಾಸ್ಥಿತಿಯಲ್ಲಿ ಇರುತ್ತೀರಿ. ಸಾಮಾನ್ಯವಾದ ಸದಾಶಯ ಇದೇ ಆಗಿದೆ. ದೈವಕ್ಕೆ ಶರಣದಾಗಲೂ ಕೂಡ ಅದು ಒಂದೇ ರೀತಿಯಾಗಿ ಯಥಾಸ್ಥಿತಿಯಾಗಿ ಇರುವುದು. ಅದು ಇಲ್ಲಿ (ಶ್ರೀಮಾತೆ ತಮ್ಮ ದೇಹವನ್ನು ಮುಟ್ಟುತ್ತಾರೆ) ಇದು ಸಂಪೂರ್ಣ ವ್ಯತ್ಯಾಸ ಮಾಡುತ್ತದೆ. ಬಹಳಷ್ಟು ಜನರಲ್ಲಿ ಇದರ ವಿರುದ್ಧವಾದುದು ಮನಸ್ಸು ಮತ್ತು ಪ್ರಾಣ ದೃಢವಾಗಿರುತ್ತದೆ, ಆದರೆ ಅದು ಬಹಳ ಸ್ಪಷ್ಟವಾಗಿ.... ಆದರೆ ನಾನು ಮಾತನಾಡುವುದು ಕೇವಲ ಭೌತಿಕದ್ದು. ಕೆಲವೊಬ್ಬ ಜನರು ಮಾತನಾಡುತ್ತಾರೆ ಮತ್ತು ಆಲೋಚಿಸುತ್ತಾರೆ "ಅದು ಹೇಗೆ? ನನ್ನಲ್ಲಿ ಅಂತಹ ಸಧ್ಭಾವ ಇದೆ, ಒಳ್ಳೆಯ ಕೆಲಸಗಳನ್ನು ಮಾಡಲು ಆಸೆ ಇದೆ, ಮತ್ತು ಆ ಮೇಲೆ ಏನು ನಡೆಯೋದಿಲ್ಲ ಎಲ್ಲಾ ಗದ್ದಲ – ಏಕೆ? ನಾನು ಬಹಳ ಒಳ್ಳೆಯವನು(?) ಮತ್ತು ಅದಕ್ಕಾಗಿ ವಿಷಯಗಳು ಸ್ಪಂದಿಸುತ್ತಿಲ್ಲ". ಅಥವಾ ಕೆಲವರು ಹೇಳುತ್ತಾರೆ ಓಹ್ ನಾನು ಶರಣಾಗತಿಯಾಗಿದ್ದೇನೆ ನನ್ನಲ್ಲಿ ಬಹಳ ಒಳ್ಳೆಯ ಸದಾಶಯವಿದೆ, ನಾನು ಶಾಂತ ಮತ್ತು ಮೌನವಾಗಿರುವುದನ್ನು ಕಲಿಯಬೇಕು. ಯಾವಾಗ ನಿಮಗೆ ಸಮಸ್ಯೆಯನ್ನು ಬಿಡಿಸುವುದು ಇದ್ದಾಗ, ಎಲ್ಲ ಸಾಧ್ಯತೆಗಳನ್ನು ತಲೆಯಲ್ಲಿ ಹಾಕಿಕೊಂಡು ಬಿಡುವ ಬದಲು, ಎಲ್ಲಾ ಪರಿಣಾಮಗಳನ್ನು ಎಲ್ಲಾ ಸಾಧ್ಯತೆಗಳನ್ನು ಮಾಡಬೇಕು ಅಥವಾ ಮಾಡಬಾರದು. ನೀವು ಶಾಂತವಾಗಿ ಸದಾಶಯದ ಅಭಿಪ್ಸೆಯಿಂದ ಇದ್ದರೆ, ಸಾಧ್ಯವಾದರೆ ಸದಾಶಯದ ಅವಶ್ಯಕತೆ ಇದ್ದರೆ, ಪರಿಹಾರ ತುಂಬಾ ವೇಗವಾಗಿ ಬರುತ್ತದೆ ಮತ್ತು ಶಾಂತವಾಗಿರುವುದರಿಂದ ಅದನ್ನು ನೀವು ಕೇಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/422**

ಎಲ್ಲೆಲ್ಲಿ ಪ್ರಾಮಾಣಿಕತೆ ಮತ್ತು ಸದಾಶಯ ಇರುತ್ತದೆಯೋ ಅಲ್ಲಿ ದೈವದ ಸಹಾಯ ಕೂಡ ಇರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/86**

ಸದಾಶಯ ಮತ್ತು ಅಭಿಪ್ಸೆಗನುಗುಣವಾಗಿ ಗ್ರಹಿಸುವುದು ಇರಲೇಬೇಕು (ಆದರೆ ಎರಡು ತುಂಬಾ ಒಂದೇ ರೀತಿಯವು) ಒಂದು ಒಂದನ್ನು ಬಯಸಿದರೆ, ಮತ್ತೊಂದು ಇನ್ನೊಂದನ್ನು. ಜನಗಳು ಬಹಳ ತೃಪ್ತಿ ಮತ್ತು ತುಂಬಾ ಸಂತೃಪ್ತಿ ಇದ್ದವರು ಇದ್ದರೆ ಮತ್ತು.... (ಇದೊಂದು ಆಸಕ್ತಿದಾಯಕ ಉದಾಹರಣೆ) ಮತ್ತು ಈ ಜೀವನದಲ್ಲಿ ಯಾರಿಗೆ ಸಾಮರಸ್ಯ ಸರಿಯಾಗಿದೆಯೋ (ಸ್ವಲ್ಪ ಜನರಿಗೆ ಜೀವನದಲ್ಲಿ ಸಾಮರಸ್ಯವನ್ನೂ ಅರಿತವರಿಗೆ ಎಲ್ಲದರಲ್ಲಿಯೂ ಸಾಮರಸ್ಯ ತೋರುವುದು ತುಂಬಾ ಹಿತಕರ. ಅವರು ಏನೇ ಮಾಡಿದರು ಗೆಲ್ಲುತ್ತಾರೆ ಏನೆಲ್ಲ ಘಟಿಸುತ್ತಾ ಅವರಿಗೆ....) ನನಗೆ ಅನಿಸಿದೆ ಹಾಗೆ, ಬಹಳ ಜನರಿಗೆ ಅದು ಅರಿತುಕೊಳ್ಳುವಂತಾಗಬೇಕು ಎಂದರೆ ತುಂಬಾ ದೂರ ಕ್ರಮಿಸಬೇಕು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 13 ನವಂಬರ್, 1965**

ಯಾರಲ್ಲಿ ಸರ್ವ ನಮ್ರತೆ ಇದೆಯೋ, ಅವನು ಎಲ್ಲವನ್ನೂ ಸದಾಶಯದೊಂದಿಗೆ ಸ್ವೀಕರಿಸುತ್ತಾನೆ, ವಿನಯದಿಂದ ಒಪ್ಪಿಕೊಳ್ಳುತ್ತಾನೆ. ಅವನಿಗಿಂತ ಮಿಗಿಲಾದದ್ದು ಇದೆಯೆಂದು, ಅವನ ಚಿಕ್ಕ ಪರಿದಿಯಾಚೆಗೆ ಅದು ಕೆಲಸ ಮಾಡಿಸಿಕೊಳ್ಳುತ್ತದೆ. ಯಾರೊಬ್ಬರೂ ಊಹಿಸಿರದ ರೀತಿಯಲ್ಲಿ ವಿರಳವಾಗಿ ಅವರು ಕಾಣುತ್ತಾರೆ ಅಥವಾ ಸಾಕ್ಷಿಯಾಗುತ್ತಾರೆ. ನಮ್ಮ ಭೂಮಿಯ ಮೇಲಿನ ಜೀವನದ, ಅಸ್ತಿತ್ವದ ಏನೋ ಒಂದು ಭಾಗದಲ್ಲಿ ಇದು ಪವಾಡದ ರೀತಿ ಈಡೇರಿಸುತ್ತದೆ.... ಅದಕ್ಕಾಗಿ ನಮ್ಮನ್ನು ನಾವು ಸಮರ್ಪಿಸಿಕೊಳ್ಳಬೇಕು. ಸದಾಶಯದೊಂದಿಗೆ ಪರಮಾತ್ಮನು ಒಂದು ಉನ್ನತವಾದ ನಿಯಮದೊಂದಿಗೆ ಕೆಲಸ ಮಾಡುತ್ತಿದ್ದಾನೆಂದು, ಪ್ರಜ್ಞೆಯೊಂದಿಗೆ ಗುರುತಿಸಿಕೊಳ್ಳುವುದು, ಮತ್ತು ಒಂದು ಶಬ್ದದ ಮೂಲಕ ಕೃತಜ್ಞತೆಯನ್ನು ಅರ್ಪಿಸಬೇಕು, ಅದಕ್ಕಿಂತ ಹೆಚ್ಚಿನದೇನು ಇಲ್ಲ.

(ಮೋನಾ ಸರ್ಕಾರರೊಂದಿಗೆ
ಶ್ರೀಮತಿ ಸಂವಾದದಲ್ಲಿ, ಸುಪ್ರೀಂನಲ್ಲಿ ಪ್ರಕಟ)

# ಶ್ರೀ ಅರವಿಂದರ
# "ಪೂರ್ಣಯೋಗದ ಸ್ವರೂಪ"

**ಮೂಲ: ನಲಿನಿಕಾಂತ ಗುಪ್ತಾ**
**ಕನ್ನಡ: ಸಿಂಪಿ ಲಿಂಗಣ್ಣ**

**[ಶ್ರೀ ಅರವಿಂದರು "ಪೂರ್ಣಯೋಗದ" ಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡು, ತಮ್ಮ 'ವೇದ ಸಮನ್ವಯ'ದಲ್ಲಿ ವಿವರ ವಿವರವಾಗಿ ರೂಪಿಸಿದ್ದಾರೆ. ನವಂಬರ 26 ಶ್ರೀ ಅರವಿಂದರಿಗೆ ಸಾಕ್ಷಾತ್ಕಾರ (ಸಿದ್ಧಿ) ದೊರಕಿದ ದಿನ. ಈ ಹಿನ್ನೆಲೆಯಲ್ಲಿ, ಪೂರ್ಣಯೋಗದ ಕುರಿತು, ನಲಿನೀಕಾಂತ ಗುಪ್ತಾ ಅವರು ಬರೆದ "ಪೂರ್ಣಯೋಗ" ಎನ್ನುವ ಮೂಲ ಗ್ರಂಥವನ್ನು, ಶ್ರೀ ಸಿಂಪಿ ಲಿಂಗಣ್ಣನವರು ಕನ್ನಡಕ್ಕೆ ಅನುವಾದಿಸಿದ್ದು 1953ರಲ್ಲಿ. ಮತ್ತೆ 2010ರಲ್ಲಿ ಇದು ಎರಡನೇ ಮುದ್ರಣವನ್ನು ಕಂಡಿದೆ. ಶ್ರೀ ಅರವಿಂದರ 150ನೇ ವರ್ಷದ ಜನ್ಮ ದಿನಾಚರಣೆಯ ವರ್ಷದಲ್ಲಿ, 'ಪೂರ್ಣಯೋಗ'ದ ಬಗೆಗೆ ಒಟ್ಟಂದದ ಸ್ವರೂಪದಲ್ಲಿ ಈ ಲೇಖನವನ್ನು ರೂಪಿಸಲಾಗಿದೆ. – (ಸಂ)]**

"ಪೂರ್ಣಯೋಗ"ದ ಕುರಿತು ಮೊದಲ ಮಾತು ಎಂದಾದಲ್ಲಿ, ಎಲ್ಲಿಂದ ನಾವು ಆರಂಭಿಸುವದು? ನಾವು ಯಾವ ಭಾವದಿಂದ ಹಾಗೂ ಶ್ರದ್ಧೆಯಿಂದ ಪ್ರಕೃತಿಯನ್ನು ನೋಡುತ್ತೇವೆಯೋ ಅದರಲ್ಲಿಯೇ ಉತ್ತರವೂ ಇದೆ. ಈ ಮೊದಲೇ ಹೇಳಿರುವದೇನೆಂದರೆ, ಪುರುಷನು ತನ್ನ ಶಕ್ತಿಯ ಮುಖಾಂತರವಾಗಿ ಮಾಡಿಕೊಂಡ ತನ್ನ ಆತ್ಮವಿಕಾಸ ಹಾಗೂ ಆತ್ಮಚರಿತಾರ್ಥತತೆಯೇ ಪ್ರಕೃತಿಯಾಗಿದೆ. ಆದರೆ ಕಾರ್ಯತಃ ಪ್ರಕೃತಿಗೆ ಎರಡು ಗತಿಗಳಿರುತ್ತವೆ; ಎರಡು ರೀತಿಯ ಆಟಗಳಿದ್ದಂತೆ. ಒಂದು ಗತಿಯೆಂದರೆ **"ನಿತ್ಯ ನೈಮಿತ್ತಿಕ"**. ಇನ್ನೊಂದು ಅದರ ನಿಗೂಢವಾದ **"ದಿವ್ಯಮೂರ್ತಿ"**. ಒಂದು ಮೇಲಿನ ಸ್ತರದ್ದು; ಇನ್ನೊಂದು ಕೆಳಗಿನ ಸ್ತರದ್ದು. ಸಾಧಾರಣವಾಗಿ ನಾವು ಹೇಗೆ ಜೀವಿಸುತ್ತೇವೆ ಎಂದು ಪ್ರಶ್ನಿಸಿಕೊಂಡರೆ ಇಲ್ಲಿ ಮಾರ್ಗ ಕಾಣಿಸುತ್ತದೆ. ಅಹಂಕಾರಕ್ಕೆ ವಶೀಭೂತರಾಗಿರುವ ಅಜ್ಞಾನ, ಅಶಕ್ತಿ, ದುಃಖ ಮೊದಲಾದವುಗಳ ಕೈಗೊಂಬೆಯಾಗಿ ಜೀವಿಸುವದೇ ಪ್ರಕೃತಿಯ ಕೆಳಗಿನ ಸ್ತರದ ಆಟವಾಗಿದೆ, ಇದನ್ನೇ **ಪ್ರಾಕೃತಜೀವನ**ವೆನ್ನಲಾಗುತ್ತಿದೆ. ಆದರೆ ಅಹಂಕಾರವನ್ನು ದಾಟಿ ಹೋಗಿ, ಕ್ಷುದ್ರತೆ ಮತ್ತು ಭೇದ–ಬುದ್ಧಿಯನ್ನು ಅತಿಕ್ರಮಿಸಿ ಸಾಗಿ, ಯಾವಾಗ ನಾವು ಜ್ಞಾನ–ಭಕ್ತಿ–ಆನಂದಗಳಲ್ಲಿ ಏರಿಹೋಗುವೆವೋ, ಆವಾಗ ನಮಗೆ **"ಪ್ರಕೃತಿಯ ಪರಾಮೂರ್ತಿ"**ಯು ಪ್ರಾಪ್ತವಾಗುತ್ತದೆ, ಇದರ ಮೇಲೆಯೇ

**‘ದಿವ್ಯ ಜೀವನ’**ವು ಪ್ರತಿಷ್ಠಿತವಾಗಿರುತ್ತದೆ. ಇಂತಹ ಕೆಳಗಿನ ಸ್ತರದಿಂದ ಆರೋಹಣಗೊಳ್ಳುವದೇ **“ಯೋಗ”**ವಾಗುತ್ತದೆ.

ಇದೂ ಸಹಿತ ಎರರಡು ವಿಧದಲ್ಲಿ ಅನುಷ್ಠಾನಿಸಲಾಗುವದು. (1) ನಾವು ಕೆಳಗಿನಿಂದ ಒಮ್ಮೆಲೇ ಮೇಲೇರಿ ಹೋಗಬಹುದು; ಪ್ರಕೃತಿಯ ಅಪರಾಕ್ರಿಯೆಯನ್ನು ಸಂಪೂರ್ಣವಾಗಿ ತ್ಯಜಿಸಿ ಬೇರೆಡೆಗೆ ಹೋಗಬಹುದಾಗಿದೆ. ಇಲ್ಲವೇ (2) ಕೆಳಗಿರುವ ಇಹವನ್ನು ಪರಿವರ್ತಿತಗೊಳಿಸಿ ಪರಿಶುದ್ಧಗೊಳಿಸಿ ಅದನ್ನೂ ಉಚ್ಚತಮವಾದ ಸ್ತರದಲ್ಲಿ ಅಮೂರ್ತದೊಳಗೆ ಏರಿಸಬಹುದು. ನಮ್ಮ ಗುರಿಯು ಯಾವುದೇ ರೀತಿಯಲ್ಲಿದ್ದರೂ, ನಮ್ಮ ಸ್ಥಿತಿ ಮಾತ್ರವೋ ಈ ಕೆಳಗಿನ ಸ್ತರದಲ್ಲಿಯೇ ಇರುತ್ತದೆ. ಆದ್ದರಿಂದಲೇ ಅದನ್ನು ಆಶ್ರಯಿಸಿಕೊಂಡೇ ನಾವು ಮೇಲಿನ ಸ್ತರವನ್ನು ಪಡೆಯಬೇಕಾಗುವದು. ಸಾಧಾರಣವಾಗಿ ಎಲ್ಲ ಯೋಗಗಳ ಗುರಿಯೇನೆಂದರೆ – ಈ ಆಧಾರವನ್ನು (ಮೃಣ್ಮಯವನ್ನು) ತ್ಯಜಿಸುವದೇ ಆಗಿದೆ; ಅಂತೆಯೇ ಅವುಗಳ ಮಾರ್ಗವು ಪ್ರಾಕೃತ ಪ್ರೇರಣೆಗಳಲ್ಲಿ ಒಂದೆರರಡು ವಿಶೇಷ ಪ್ರವೃತ್ತಿಗಳನ್ನು ಆಶ್ರಯಿಸಿ ಹಾಗೂ ಇದೆಲ್ಲವನ್ನೂ ಮರೆತು ಅವುಗಳ ಸಹಾಯದಿಂದಲೇ, ಕೊನೆಯಲ್ಲಿ ಅತ್ಯುಚ್ಚ ಸ್ತರದಲ್ಲಿ ಪರಮೇಶ್ವರನೊಡನೆ ಒಂದಾಗುವದಾಗಿದೆ.

ಆದರೆ **ಪೂರ್ಣಯೋಗಿಯು** ಅಭೀಪ್ಸೆ ಪಡುವದು ಬೇರೆ ವಸ್ತುವನ್ನು. ಅವನು ಪ್ರಾಕೃತದಲ್ಲಿ ಪ್ರತಿಷ್ಠಿತನಾಗಿದ್ದು ಅದರೊಳಗೆ ಅತಿ–ಪ್ರಾಕೃತಿಕ (ಅಲೌಕಿಕದ) ದಿವ್ಯ–ಲೀಲೆಯನ್ನು ಪ್ರಸ್ಫುಟಿತಗೊಳಿಸಬೇಕೆನ್ನುತ್ತಾನೆ. ಏಕೆಂದರೆ, **ಪ್ರಕೃತಿಯ ಪ್ರಾಕೃತ ಲೀಲೆಯೊಳಗೆ ಪುರುಷನ, ಪರಮೇಶ್ವರನ ನಿಗೂಢ ಪ್ರೇರಣೆಯೇ ಪ್ರಸ್ಫುಟಿತವಾಗುತ್ತದೆ. ಅಂತರ್ಯಾಮಿಯ ಪೂರ್ಣ ವಿಕಾಸವೇ, ಪೂರ್ಣ ಚರಿತಾರ್ಥತತೆಯೇ ಪೂರ್ಣ ಸತ್ಯವಾಗಿದೆ. ಅದರಲ್ಲಿಯೇ ಪ್ರಕೃತಿಯ ಪೂರ್ಣ ಸಾರ್ಥಕತೆಯಿದೆ.** ಈ ಕಾರಣದಿಂದಲೇ ಪೂರ್ಣಯೋಗಿಯು ಜೀವನದ ಯಾವುದೇ ವಿಷಯಕ್ಕೆ ಖಂಡಿತವಾಗಿ ಇಲ್ಲವೆ ವಿಶೇಷ ಪ್ರಕರಣದೊಳಗೆ ತನ್ನನ್ನು ಕಟ್ಟಿಹಾಕಿಕೊಳ್ಳುವದಿಲ್ಲ. ಅವನ ಇಡೀ ಜೀವನವೇ ಯೋಗವಾಗುತ್ತದೆ. ಜೀವನದ ಸರ್ವ ವೈಚಿತ್ರ್ಯಗಳನ್ನೂ ಸರ್ವ ಜಟಿಲತೆಗಳನ್ನೂ ಸಣ್ಣ ದೊಡ್ಡಕಾರ್ಯ ಕಲಾಪಗಳು ಎಷ್ಟಿದ್ದರೂ ಅವೆಲ್ಲವನ್ನೂ ಯೋಗದೊಳಗೇ ಒಳಪಡಿಸಿಕೊಳ್ಳ–ಬೇಕಾಗುವದು. ಸಾಧಾರಣ ಜೀವನದಲ್ಲಿ ಪ್ರಕೃತಿಯು ಅಖಂಡವಾಗಿ ತನ್ನ ಪೂರ್ಣ ಕ್ರಿಯೆಯೊಡನೆ ನಮ್ಮೊಳಗೆ ಆಟವಾಡುತ್ತದೆ. ಆದ್ದರಿಂದ “ಪೂರ್ಣಯೋಗದ ಸಾಧಕನು” ಸಿದ್ಧ ಜೀವನದಲ್ಲಿ ಪ್ರಕೃತಿಯ

ಪೂರ್ಣ–ಅಖಂಡ ಲೀಲೆಯನ್ನು ಪ್ರಾಪ್ತ ಮಾಡಿಕೊಳ್ಳಬೇಕೆನ್ನುತ್ತಾನೆ. ಭೇದವಿಷ್ಟೇ – ಸಾಧಾರಣ ಜೀವನದಲ್ಲಿ ಪ್ರಕೃತಿಯ ಸ್ಥೂಲಗತಿಗಳು ನಮಗೆ ಆಧಾರವಾಗುತ್ತವೆ; ಹಾಗೂ ಯೋಗಯುಕ್ತ ಜೀವನದಲ್ಲಿ ನಾವು ದಿವ್ಯ ಪ್ರಕೃತಿಯ ಆಧಾರವಾಗುವೆವು. ನಮ್ಮ ಸಮಗ್ರ ಸತ್ತೆಗಳನ್ನೂ ಪರಿವರ್ತನಗೊಳಿಸಿ ಭಾಗವತ ಸತ್ತೆಯ ವ್ಯಂಜನದೊಳಗೆ ಪ್ರಸ್ತಾಪಿತಗೊಳಿಸಬೇಕಾಗುತ್ತದೆ.

ಇದಕ್ಕೆ ಉಪಾಯವೆಂದರೆ, ನಮ್ಮ ಸಮಸ್ತ ಸತ್ತೆಗಳನ್ನು ಪ್ರಜ್ಞಾಪೂರ್ವಕವಾಗಿಯೇ **"ಭಾಗವತಸತ್ತೆ"**ಯೊಡನೆ ಸಮ್ಮಿಲಿತಗೊಳಿಸಬೇಕು. ಪರಮೇಶ್ವರನನ್ನು ಕೆಳಗೆ ಕರೆದು, ಈ ಪಾರ್ಥಿವ ಸ್ತರದಲ್ಲಿ ಪ್ರತಿಷ್ಠಿತಗೊಳಿಸಬೇಕು. ಅವನ ಪ್ರಭಾವದಿಂದ ನಮ್ಮ ಪ್ರಕೃತಿಯನ್ನು ಅವನ ಪ್ರಕೃತಿಯಂತೆಯೇ ಮಾಡಬೇಕು. ಒಂದು ಬಗೆಯಿಂದ ಪರಮೇಶ್ವರನೇ ನಮ್ಮ ಸಾಧನದ ಸಾಧಕನು; ನಮ್ಮ ಅಂತರಸ್ಥಿತ ಪುರುಷನು; ನಮ್ಮ ಯೋಗದ ನಿಯಂತೃವೂ ಹೌದು. ಅವನೇ ನಮ್ಮ ವೈಯಕ್ತಿಕ ಸತ್ತಯೆನ್ನು ಆಶ್ರಯಿಸಿ, ಅದನ್ನು ಯಂತ್ರದಂತೆ ನಡೆಸಿ, ತನ್ನ ದಿವ್ಯಮೂರ್ತಿಯನ್ನು ಪ್ರಕಟಗೊಳಿಸುವನು. ಏಕೆಂದರೆ ನಾವು ಮೊದಲೇ ಹೇಳಿರುವಂತೆ, ನಾವು ನಮ್ಮ ಜೀವನ. ನಮ್ಮ ಸತ್ತೆಯೆಂದರೆ ಒಂದು ಭಾವನೆ ಇಲ್ಲವೇ ತಪಃಶಕ್ತಿಯ ಅಭಿವ್ಯಂಜನ ಮಾತ್ರ ಆಗಿದೆ. ಯಾವುದು ನಮ್ಮ ಅಂತಃಸ್ಥಿತ ದಿವ್ಯ ಪ್ರಕೃತಿಯಿದೆಯೋ, ಅಖಂಡ ಸ್ವರೂಪದಲ್ಲಿ ನಾವು ಯಾವ ವಸ್ತುವಾಗಿದ್ದೇವೆಯೋ ಅದು, ಅದೇ ಭಾವದಲ್ಲಿಯೇ ಅದೇ ತಪಃಶಕ್ತಿಯಲ್ಲಿ ನಿಹಿತವಾಗಿರುತ್ತದೆ. ನಾವು ಆ ತಪಃಶಕ್ತಿಯನ್ನು ಜಾಗ್ರತಗೊಳಿಸಿಕೊಂಡರೆ, ಆಗ ನಮ್ಮ ಭಾವವನ್ನು ಚೇತನವನ್ನು ಅವ್ಯರ್ಥವೂ ಅಖಂಡವೂ ಆದ ರೂಪದಲ್ಲಿ ಪ್ರಸಾರಿತಗೊಳಿಸಿ ನಮ್ಮ ಈಗಿನ ಪ್ರಕೃತಿಯನ್ನು ಪರಿವರ್ತಿತಗೊಳಿಸಿಕೊಳ್ಳಲು ಸಾಧ್ಯವಾಗುವದು. ಹಾಗು ನಮ್ಮ ದಿವ್ಯ–ಅಖಂಡ ಪ್ರಕೃತಿಯನ್ನು ಅದರೊಳಗೆ ಪ್ರತಿಷ್ಠಿತಗೊಳಿಸಲಬಲ್ಲೆವು. ಯಾವುದು ಇನ್ನೂ ಖಂಡಿತವಿದೆಯೋ, ಯಾವುದು ಇನ್ನೂ ತಮಸಾವೃತವಾಗಿದೆಯೋ, ಅದರೊಳಗೆ ದಿವ್ಯವಾದುದು, ಸರ್ವಜ್ಞವಾದುದು, ಸರ್ವಕೃತುವಾದುದು ಅವತರಣಗೊಳ್ಳುವದು. ಹಾಗೂ ಅದೇ ವಸ್ತುವು ಕ್ರಮವಾಗಿ ನಿತ್ಯ ನೈಮಿತ್ತಿಕ ಸಮಸ್ತ ಪ್ರಕೃತಿಯನ್ನು ಶುದ್ಧವೂ, ಜ್ಞಾನೋದ್ಭಾಸಿತವೂ, ಶಕ್ತಿಪರಿಪ್ಲುತವೂ ಆಗುವಂತ ಮಾಡುವದು. ಸಮಸ್ತ ಮಾನವೀಯ ಜ್ಞಾನ, ಸಮಸ್ತ ನಶ್ವರ ಕರ್ಮಚೇಷ್ಟೆ ಇವುಗಳ ಸ್ಥಾನದಲ್ಲಿ, ತನ್ನ ದೈವೀ ಲೀಲೆಯನ್ನು ಪ್ರಸ್ಫುಲಿತಗೊಳಿಸುವದು.

**ಪೂರ್ಣಯೋಗದ ಪ್ರಮುಖ ಸಂಗತಿ ಎಂದರೆ, “ಭಾಗವತ ಭಾವವನ್ನೂ (ಸರ್ವಜ್ಞ ಭಾವವನ್ನು) ಪೂರ್ಣ ವಿಜ್ಞಾನ ಶಕ್ತಿಯನ್ನೂ ಪ್ರಕಟಗೊಳಿಸುವದಾಗಿದೆ”.** ಸಾಧನದ ದೃಷ್ಟಿಯಿಂದ ಇದಕ್ಕೆ **ಅಹಂಕಾರ ವಿಸರ್ಜನ** ಎನ್ನುವ ಹೆಸರಿದೆ. ಅಹಂ ಮತ್ತು ಅದರ ಸರ್ವ ಕ್ಷೇತ್ರಗಳನ್ನೂ ಕ್ರಮದಿಂದ ಉತ್ಸರ್ಗಗೊಳಿಸಬೇಕಾಗುವದು. ಎಲ್ಲಿ ಇದನ್ನು ಮಾಡಬೇಕಾಗಿದೆ? ಅಹಂನ ಆಚೆಗಿರುವ ಸದ್ವಸ್ತುವಿನ ಸನ್ನಿಧಿಯಲ್ಲಿ ಮಾಡಬೇಕಿದೆ. ಅದರ ವಿರಾಟವಾದ ಮತ್ತು ದುರ್ಲಕ್ಷ್ಯವಾದ, ಅಂತೆಯೇ ಅವ್ಯರ್ಥವಾದ ಕ್ರಮಪ್ರೇರಣೆಯ ಸನ್ನಿಧಿಯಲ್ಲಿ ಮಾಡಬೇಕಿದೆ. ಈ ಸಾಧನಾ ಮಾರ್ಗವು ಸಹಜವೂ ಅಲ್ಲ, ಸರಳವೂ ಅಲ್ಲ. ಈ ದಾರಿಯಲ್ಲಿ ವಿಪುಲವಾದ ಶ್ರದ್ಧೆಯೂ, ಅಕುಂಠಿತವಾದ ಸಾಹಸವೂ, ಅಚಲವಾದ ಧೈರ್ಯವೂ ಅವಶ್ಯಕವಾಗಿದೆ. ಯಾಕೆಂದರೆ ನಾವು ಇಲ್ಲಿ **ಮೂರು ಮೆಟ್ಟಿಲು**ಗಳನ್ನು ತಲುಪುವೆವೋ, ಆಗ ಮಾತ್ರ ನಮ್ಮ ಸಾಧನವು ಕಂಟಕರಹಿತವೂ, ದ್ರುತಗಾಮಿಯೂ ಆಗುತ್ತದೆ.

**ಮೊದಲನೇ ಮೆಟ್ಟಿಲೆಂದರೆ,** ಅಹಂ ಅನ್ನು ದಿವ್ಯ ಭಾಗವತ ಸತ್ತೆಯ, ಆ ಬೃಹತ್ತಿನ, ಆ ಪೂರ್ಣದ ಸಂಸ್ಪರ್ಶದಲ್ಲಿ ತರುವ ಪ್ರಯತ್ನದ ಫಲಸ್ವರೂಪವಾಗಿಸಿಕೊಳ್ಳುವದು.

**ಎರಡನೇ ಹಂತದಲ್ಲಿ,** ಆ ಬಳಿಕ ನಮ್ಮ ಸಮಸ್ತ ನಿಮ್ನ ಪ್ರಕೃತಿಯನ್ನು ದಿವ್ಯ ಪ್ರೇರಣೆಯ ಸಹಾಯದಿಂದ ಸಾವಕಾಶವಾಗಿ ಹೊಸ ರೂಪದಲ್ಲಿ ನಿರ್ಮಿಸುವದು ಹಾಗೂ ಅದನ್ನು ಸಮುಚ್ಚವಾದ ಭಾಗವತ ಪ್ರಕೃತಿಯಲ್ಲಿ ಪರಿವರ್ತಗೊಳಿಸುವದಾಗಿದೆ.

**ಮೂರನೇ ಮೆಟ್ಟಿಲಲ್ಲಿ,** ಈ ಪರಿವರ್ತನವು ಪೂರ್ಣವಾಗುವಲ್ಲಿ ಇರುತ್ತದೆ.

ಆದರೆ ಈ ದಾರಿಯು ಎಷ್ಟೇ ದುರ್ಗಮವಾಗಿದ್ದರೂ, ಅದರಲ್ಲಿ ನಾವು ನಮ್ಮ ಶಕ್ತಿಯಿಂದ ನಡೆಯುವದಿಲ್ಲ. ನಾವು ಅಹಂಕಾರವನ್ನು ಅಡಿಗಡಿಗೂ ದೂರ ಮಾಡುತ್ತ ಮುಂದುವರೆದಿರುತ್ತೇವೆ. ಆದ ಕಾರಣ ಭಾಗವತ ಶಕ್ತಿಯು ಪರೋಕ್ಷವಾಗಿ, ಪರದೆಯ ಮರೆಯಲ್ಲಿ ಉಳಿದುಕೊಂಡೇ, ನಿರಂತರವಾಗಿ ನಮ್ಮ ದುರ್ಬಲತೆಯನ್ನು ಆಕ್ರಮಿಸುತ್ತಿರುತ್ತದೆ. ಶ್ರದ್ಧೆ, ಸಾಹಸ ಹಾಗೂ ಧೈರ್ಯ ಇವುಗಳ ಅಭಾವವಾದಾಗ, ಅದೇ ನಮ್ಮನ್ನು ಹಿಡಿದುಕೊಂಡು ರಕ್ಷಿಸುತ್ತಿರುತ್ತದೆ. ಅದೇ ಶಕ್ತಿಯು ಕುರುಡನಿಗೆ ದೃಷ್ಟಿಯನ್ನು ಕೊಡುತ್ತದೆ. ಕುಂಟನಿಂದ ಬೆಟ್ಟವನ್ನು ಜಿಗಿಸುತ್ತದೆ. ಆ ಸಮಯಕ್ಕೆ ಬುದ್ಧಿಯು ಒಂದು ವಿಧಾನದ ಇಲ್ಲವೇ ವಸ್ತುವಿನಲ್ಲಿ

ಇರತಕ್ಕ ಒಂದು ಧರ್ಮವನ್ನು ಗುರುತಿಸುತ್ತದೆ. ಅದರ ಅವ್ಯರ್ಥವಾದ ಗತಿಯು ಭದ್ರವಾದ, ಕಲ್ಯಾಣದ ಸುತ್ತಮುತ್ತಲೇ ಇರುತ್ತದೆ. ಹೆಜ್ಜೆಹೆಜ್ಜೆಗೂ ನಮ್ಮನ್ನು ಹಿಡಿದು ಎತ್ತುತ್ತಿರುವ ಒಬ್ಬ ಪ್ರಭುವನ್ನು, ಒಬ್ಬ ಸಖನನ್ನು ಇಲ್ಲವೇ ವಿಶ್ವಮಾತೆಯನ್ನು ಹೃದಯವು ಪಡೆದುಕೊಳ್ಳುತ್ತದೆ. ಈ ದಾರಿಯಲ್ಲಿ ಎದುರಿಸಬೇಕಾದಷ್ಟು ಬಾಧೆಗಳ, ಎದುರಿಸಬೇಕಾದಷ್ಟು ವಿಪತ್ತುಗಳು ಇನ್ನಾವ ದಾರಿಯಲ್ಲಿಯೂ ಇರುವದಿಲ್ಲ. ಆದರೆ ನಾವು ಯಾವಾಗ ಗುರಿಯನ್ನು ಸ್ಮರಿಸಿಕೊಳ್ಳುವೆವೋ, ಹಾಗೂ ಇದರ ಕೃತಿಗಳ ವಿಪುಲತೆಯನ್ನು ನೋಡುವೆವೋ, ಅಂದರೆ ಮನುಷ್ಯನು ಪ್ರಕೃತಿಯನ್ನು ಪರಿವರ್ತನಗೊಳಿಸಿ, ಅವನ ಸರ್ವಾಂಗಗಳನ್ನೂ ಅಕ್ಷುಣ್ಣವಾಗಿಸಿ, ಬೇರೊಂದು ಧರ್ಮ(ಸುವ್ಯವಸ್ಥೆಯಲ್ಲಿ)ದಲ್ಲಿ ಅದನ್ನು ಜಗತ್ತಿನ ಕರ್ಮದಲ್ಲಿ ಪ್ರತಿಷ್ಠಾಪಿಸಿಬಿಡುವ ಸಂಗತಿಯನ್ನು ವಿಚಾರಿಸುವೆವೋ, ಆಗ ತಿಳಿದುಬರುವ ಸಂಗತಿ ಏನೆಂದರೆ, – ಈ ದಾರಿಗೆ ಸಮಾನವೂ ಸಹಜವೂ ಆದ ಬೇರೆ ಯಾವ ದಾರಿಯೂ ಇರುವದಿಲ್ಲ ಎನ್ನುವ ವಿಷಯವಾಗಿದೆ. ಇದರಂತೆ ಸುನಿಶ್ಚಿತವಾದ ಬೇರೆ ಯಾವ ದಾರಿಯೂ ಇಲ್ಲ.

**ಪೂರ್ಣಯೋಗದ ಕಾರ್ಯಪದ್ಧತಿ**

ನಮ್ಮದೇ **ಪರಾಕೃತಿಯು** ಯಾವಾಗ ನಮ್ಮದೇ **ಅಪರಾಕೃತಿಯ** ಮೇಲೆ ಅಖಂಡವಾಗಿ ಕಾರ್ಯ ಮಾಡಲು ತೊಡಗುತ್ತದೆಯೋ, ನಮ್ಮ ಪ್ರಾಕೃತ ಸ್ವಭಾವದ ಸರ್ವಾಂಗಗಳಲ್ಲಿ ಯಾವಾಗ ಭಾಗವತ ಸ್ವಭಾವವು ಅವತರಣಗೊಳ್ಳಲು ಪ್ರಾರಂಭವಾಗುವದೋ, ಆಗ ಅದು ಯಾವ ರೂಪದಲ್ಲಿ, ಯಾವ ಪದ್ಧತಿಯಲ್ಲಿ ಕಾರ್ಯ ಮಾಡುವದೋ ಅದರಲ್ಲಿ ಮೂರು ಲಕ್ಷಣಗಳನ್ನು ನಾವು ಕಾಣುತ್ತೇವೆ.

**ಮೊದಲನೆಯದಾಗಿ** ಅದರಲ್ಲಿ ಯಥಾಹಿತವೂ ಆಕಾಟ್ಯವೂ ಆದ ಯಾವ ನಿಯಮವಾಗಲಿ ಪರಂಪರೆಯಾಗಲಿ ಇಲ್ಲ. ವಿಶೇಷವಾಗಿ ಯೋಗ ಪದ್ಧತಿಗಳಲ್ಲಿ ಗೊತ್ತುಮಾಡಿದ ಕಟ್ಟು ನಿಯಮಗಳು ಇರುತ್ತವೆ. ಸಾಧಕನು ಅವಯಗಳಿಂದ ತನ್ನನ್ನು ಬಂಧಿಸಿಕೊಂಡು ಒಂದಾದ ಮೇಲೆ ಒಂದರಂತೆ ಸ್ತರವನ್ನು ದಾಟುತ್ತ ಮುಂದುವರೆಯುತ್ತಾನೆ. ಆದರೆ **ಪೂರ್ಣಯೋಗದ ಸಾಧಕನು ಒಂದು ಮುಕ್ತವೂ ಯಥೇಚ್ಛವೂ ಆದ ಗತಿಯೊಳಗೆ ಸಾಗುತ್ತಾನೆ.** ಈ ಯೋಗದಲ್ಲಿ ಸಾಧನದ ಶಕ್ತಿಯು ವಿಕ್ಷಿಪ್ತ ಭಾವದಿಂದ ಕಾರ್ಯ ಮಾಡುತ್ತದೆ. ಯಾವುದೊಂದು ವಿಶೇಷ ವಿಧಾನದೊಳಗೆ ಅವನು ಸಂಪೂರ್ಣವಾಗಿ ಬಂಧಿತನಾಗಿರುವದಿಲ್ಲ. ಅದೂ

ಅಲ್ಲದೇ ಆ ಶಕ್ತಿಯು ಉತ್ತರೋತ್ತರವಾಗಿ ವೃದ್ಧಿಯಾಗುತ್ತಿರುತ್ತದೆ. ನಿಗೂಢವಾದ ಭಾವದಿಂದ ತನ್ನ ಉದ್ದೇಶವನ್ನು ಸಿದ್ಧಗೊಳಿಸುವತ್ತ ಸಾಗುತ್ತಿರುತ್ತದೆ. ಸಾಧಕನ ಪ್ರಕೃತಿಯನ್ನು ಅನುಸರಿಸಿ, ಆ ಪ್ರಕೃತಿಯಲ್ಲಿರುವ ಯಾವ ಎಲ್ಲ ಕರಣೋಪಕರಣಗಳು ಶುದ್ಧಿಯಲ್ಲಿಯೂ ಸಿದ್ಧಿಯಲ್ಲಿಯೂ ಸಹಾಯಕವಾಗಿರುವವೋ, ಮತ್ತು ಯಾವೆಲ್ಲವೂ ಬಾಧಕವಾಗಿರುವವೋ ಅವೆಲ್ಲಕ್ಕೆ ಅನುಸಾರವಾಗಿಯೇ ನಿಯಮಿತ ರೂಪದಿಂದ ಆ ಶಕ್ತಿಯು ಪರಿಚಾಲಿತವಾಗಿರುತ್ತದೆ. ಬೇರೆ ಯಾವುದೊಂದು ಯೋಗ ವಿಶೇಷದ ಸರ್ವ ಸಾಧಕರಿಗೆ ಒಂದೇ ದಾರಿಯಿಂದ, ಒಂದೇ ಪದ್ಧತಿಯಿಂದ, ಸರಳ ರೇಖೆಯಲ್ಲಿ (ನೇರಾನೇರವಾಗಿ) ಒಮ್ಮೆಲೆ ನಡೆಯಬೇಕಾಗಿರುತ್ತದೆ. ಪೂರ್ಣಯೋಗದ ಸಾಧಕನಿಗೆ ತನ್ನದೇ ಆದ ಸ್ವತಂತ್ರ ದಾರಿ ಇರುತ್ತದೆ. ಪ್ರತ್ಯೇಕ ಸಾಧಕನು ತನ್ನ ಸ್ವಭಾವದ ಅವಶ್ಯಕತೆಗೆ ತಕ್ಕಂತೆ ತನ್ನ ಸಾಧನದ ಪದ್ಧತಿಯನ್ನು ನಿರ್ಮಿಸುತ್ತ ಮುಂದುವರೆಯುತ್ತಾನೆ. ಆದರೆ ಇದರ ಅರ್ಥವು ಸರ್ವ ಸಾಧಕರ ಒಳಗೆ ಸರ್ವಸಾಧಾರಣವಾದ ಒಂದು ಧರ್ಮವೆಂಬ ಯಾವ ವಸ್ತುವೂ ಇಲ್ಲವೆಂತಲ್ಲ. ಕಠೋರವಾಗಿರುವ ಸಂಕೀರ್ಣವಾಗಿರುವ ಯಾವ ಪಡಿಯಚ್ಚಿನಲ್ಲಿಯೂ ಹಾಕದೆಯೂ ನಾವು ಪೂರ್ಣಯೋಗದ ಕಾರ್ಯದ ಪದ್ಧತಿಯನ್ನು ನಿಶ್ಚಿತಗೊಳಿಸಬಲ್ಲೆವು. ಪ್ರಕೃತಿಯ ಕಾರ್ಯಪದ್ಧತಿಯಲ್ಲಿ ಅದೆಂಥ ಮುಕ್ತವೂ ಸ್ವಚ್ಛಂದವೂ ಆದ ಗತಿಯು ವಿದ್ಯಮಾನವಿದೆ! ಅಲ್ಲಿ ಜಡಯಂತ್ರದ ಅಲಂಘ್ಯಾವಾದ ಗತಾನುಗತಿಕೆಯು ಇಲ್ಲ. ಪ್ರಕೃತಿಯ ಬಾಧ್ಯ–ಬಾಧಕತೆ ಇಲ್ಲ. ಆದರೆ ಇಲ್ಲಿ ಒಂದು ನಿಯಮವಿದೆ. ಒಂದು ಧರ್ಮವಿದೆ. ಅದು ಕೇವಲ ಉದಾರವೂ ಸೂಕ್ಷ್ಮವೂ ಆಗಿದೆ. ಸರ್ವಪ್ರಕಾರದ ಸ್ವತಂತ್ರತೆಯನ್ನು ಅದು ಹೊಂದಿದೆ. ಪ್ರಕೃತಿಯ ಈ ಮುಕ್ತ ಧರ್ಮವೇ ಪೂರ್ಣಯೋಗದ ಒಳಗೆ ಕಾರ್ಯ ಮಾಡುತ್ತದೆ.

ಎರಡನೇಯದು, ಪೂರ್ಣಯೋಗದ ಕಾರ್ಯಪದ್ಧತಿಯು **ಪೂರ್ಣವೂ ಅಖಂಡವೂ** ಆಗಿರುತ್ತದೆ. ಇದು ಸಾಧಕನ ಸಮಗ್ರ ಪ್ರಕೃತಿಯನ್ನು ತೆಗೆದುಕೊಂಡೇ ಸಾಗುತ್ತದೆ.

ಮೂರನೇಯದು – ಪೂರ್ಣಯೋಗದಲ್ಲಿ ನಮ್ಮ ಅಂತಃಸ್ಥಿತ ಭಾಗವತ ಶಕ್ತಿಯು ನಮ್ಮ ಸಮಗ್ರ ಜೀವನವನ್ನೇ ಉಷಾ–ಸ್ವರೂಪವಾಗಿಸಿ ವ್ಯವಹರಿಸುತ್ತದೆ. ನಮ್ಮ ಪ್ರತ್ಯೇಕ ಅಭಿಜ್ಞತೆ, ಬಾಹ್ಯ ಜಗತ್ತಿನೊಡನೆ ನಮ್ಮ ಪ್ರತ್ಯೇಕ ಸ್ಪರ್ಶ ಅದೆಷ್ಟು ನಗಣ್ಯವಾಗಿದ್ದರು – ಇಲ್ಲವೆ ಅದೆಷ್ಟು ಬಾಹ್ಯಾತ್ಮಕವಾಗಿದ್ದರೂ ಅದು ಇವೆಲ್ಲವುಗಳ

ಮೂಲಕವೂ ಕಾರ್ಯ ಮಾಡುತ್ತದೆ. ಅಂತರಿಕವಾದ ಪ್ರತ್ಯೇಕ ಅನುಭೂತಿ ಪ್ರತ್ಯೇಕ ಮರ್ಮಭೇದಿ ಯಾತನೆ, ಸಾಧನಾ ಪಥದ ಪ್ರತಿಯೊಂದು ತಪ್ಪು ಹೆಜ್ಜೆಯೂ ನಮಗೆ ಸಹಾಯಕವಾಗಿಯೇ ವರ್ತಿಸುತ್ತವೆ. ಸಿದ್ಧಿಯ ಕಡೆಗೆ ನಮ್ಮನ್ನು ನಿಶ್ಚಿತ ರೂಪದಲ್ಲಿಯೂ ಕರೆದುಕೊಂಡು ಹೋಗುತ್ತವೆ.

ವಿಶ್ವ ಜೀವನವೇ ಪ್ರಕೃತಿಯ ಯೋಗ. ಪ್ರಕೃತಿಯು ತನ್ನೊಳಗೆ ನಿಗೂಢವಾದ ಪರಮೇಶ್ವರನ್ನು ಪ್ರಕಟಗೊಳಿಸುವ ಪ್ರಯತ್ನ ನಡೆಸಿದೆ. ವಿಶ್ವ ಪ್ರಕೃತಿಯ ಈ ಆತ್ಮವಿಸ್ಮೃತವಾದ ಪ್ರಯತ್ನವು ಯಾವಾಗ ಮನುಷ್ಯನ ಒಳಗೆ ಸಚೇತನವೂ ಆತ್ಮಜ್ಞಾನದಿಂದ ಪೂರ್ಣವೂ ಆಗಿಬಿಡುವದೋ, ತನ್ನ ಉದ್ದೇಶವನ್ನು ಯಥಾರ್ಥವಾಗಿ ಪರಿಪೂರ್ಣಗೊಳಿಸುವ ಸಾಮರ್ಥ್ಯವು ಯಾವಾಗ ಅದರಲ್ಲಿ ಉತ್ಪನ್ನವಾಗುತ್ತದೆಯೋ, ಆಗಲೇ ನಾವು ಪ್ರಾಕೃತಿಕ ಸ್ತರಗಳಿಂದ ಮೇಲೇರಿ ಆಧ್ಯಾತ್ಮಿಕ ಸ್ತರವನ್ನು ತಲುಪುತ್ತೇವೆ. ಆಗಲೇ ನಮ್ಮೊಳಗಿನ ಪ್ರಾಕೃತಿಕ ಶಕ್ತಿಯ ಸ್ಥಾನದಲ್ಲಿ ಯೋಗಶಕ್ತಿಯು ಆವಿರ್ಭೂತವಾಗುತ್ತದೆ. ಹೀಗಾಗಿ ಪೂರ್ಣಯೋಗದ ಸಾಧನಾ ಪದ್ಧತಿಯು ಪೂರ್ಣವೂ ಅಖಂಡವೂ ಆಗಿರುವಂತೆ ಅದರ ಫಲವಾದರೂ ಪೂರ್ಣವೂ ಅಖಂಡವೇ ಆಗಿರುತ್ತದೆ.

*

## ಶ್ರೀ ಅರವಿಂದರ

# 'ವೇದ ರಹಸ್ಯ'

**– ಅನುವಾದ: ಪುಟ್ಟು ಕುಲಕರ್ಣಿ**

**4**

ಇಲ್ಲಿ ನಿರ್ಮಾಣಗೊಂಡಿರುವ **"ಈ ಕಂದಕವನ್ನು"** ಸ್ವಯಂಕೃತವಾಗಿ ಸೃಷ್ಟಿಗೊಳಿಸಿಕೊಂಡಿದ್ದೇವೆ. ಅಲ್ಲದೇ ಅದು ಪ್ರಾಚೀನ ಕಾಲದ ಈ ಪವಿತ್ರ ಗ್ರಂಥ(ಲಿಖಿತ)ಗಳಲ್ಲಿ ನಿಜವಾಗಿಯೂ ಇರಲೇ ಇಲ್ಲ! ಇಲ್ಲಿ ನಾನು ಮಂಡಿಸುತ್ತಿರುವ ಊಹೆಯೆಂದರೆ, ಋಗ್ವೇದವೇ ಪ್ರಾಮುಖ್ಯವಾಗಿ ಪರಿಗಣಿಸಲ್ಪಡಬೇಕಾದ (ಗೌರವಿಸಲ್ಪಡಬೇಕಾದ) ಸಂಗತಿಯಾಗಿದೆ; ಅದು ಸೃಷ್ಟಿಗೊಂಡ ದಿನದಿಂದಲೂ ಇಂದಿನವರೆಗೂ ಮಾನವಕುಲಕ್ಕೆ ಲಭ್ಯವಾಗಿದ್ದುಕೊಂಡೇ ಬಂದಿದೆ. ಅದೂ ಐತಿಹಾಸಿಕವಾಗಿರುವ **ಎಲ್ಯುಷಿಯಸ್ ಮತ್ತು ಆರ್ಫಿಕ್ ರಹಸ್ಯವಾದಗಳು** ವಿಫಲಗೊಂಡು ಅವಶೇಷಗಳಾಗಿರುವ ಸಂಧರ್ಭದಲ್ಲಿ, ಇಲ್ಲಿ ಆಧ್ಯಾತ್ಮಿಕ ಮತ್ತು ಮನೋವೈಜ್ಞಾನಿಕ ಜ್ಞಾನವು ಆ ಜನಾಂಗದಲ್ಲಿ ಅಲವಟ್ಟುಕೊಂಡೇ ಇದ್ದ ವ್ಯವಸ್ಥೆಯಲ್ಲಿ ಇತ್ತು. ಅದು ಏಕೆ ಆ ರೀತಿಯಲ್ಲಿ ಹುದುಗಿಸಿ ಇಡಲ್ಪಟ್ಟಿತ್ತು ಮತ್ತು ಅದು ಹೇಗೆ ಈ ಕಾಲದವರಿಗೆ ಲುಪ್ತವಾಯಿತು ಎನ್ನುವದನ್ನು "ಈಗ" ನಿರ್ಧರಿಸುವದು ಕಷ್ಟಸಾಧ್ಯ. ಇದೊಂದು ಸರ್ವಸಮ್ಮತ ಸಿದ್ಧಾಂತವಾಗಿದ್ದರೂ, ಜೊತೆಗೆ ಆತ್ಮಜ್ಞಾನದ ಕುರಿತು ಸರ್ವಸಂಗತಿಗಳನ್ನು ಒಳಗೊಂಡಿದ್ದರೂ ಸಹಿತ ಏಕೆ ಹೀಗಾಯಿತು ಎನ್ನುವದನ್ನು ಈಗ ವಿವರಿಸುವದು ಅಸಾಧ್ಯ.

ಈ ಜ್ಞಾನವನ್ನು ಸಂಪೂರ್ಣವಾಗಿ **"ಲೌಕಿಕ ಆಕಾರಗಳಲ್ಲಿ"** ಮತ್ತು ಸಂಕೇತಗಳಲ್ಲಿ ಅಳವಡಿಸಿ, ಅದಕ್ಕೊಂದು ಕವಚವನ್ನು ನಿರ್ಮಿಸಿ, ಅವುಗಳನ್ನು **"ರಹಸ್ಯಮಯ"**ವಾಗಿರಿಸಿದ ಕಾರಣವೆಂದರೆ, ಅವು **'ಅಪವಿತ್ರ'**ಗೊಳ್ಳಬಾರದು ಎನ್ನುವದೇ ಆಗಿತ್ತು. ಆ ಉದ್ದೇಶದಿಂದಲೇ ಸೂತ್ರೀಕೃತಗೊಂಡಿತ್ತು. ಆದರಲ್ಲೂ ಅವು ಪರಿಶುದ್ಧತೆಯಲ್ಲಿಯೇ ಪುನಃ ಪ್ರಕಟಗೊಳಿಸುವಂತೆಯೇ ರೂಪಿತಗೊಂಡಿದ್ದವು. ಇಲ್ಲಿ ನಿರೂಪಿತಗೊಂಡಿರುವ ರಹಸ್ಯಮಯತೆಯ ಪ್ರಮುಖ ತತ್ತ್ವವೆಂದರೆ, **ಆತ್ಮಜ್ಞಾನದ ಹಾಗೂ ಪಾವಿತ್ರ್ಯತೆಯ** ಕುರಿತಾದ ಸತ್ಯ ಮತ್ತು ಜ್ಞಾನವಾಗಿತ್ತು. ಇದು **ದೇವತೆಗಳ ಮೂಲಸ್ವರೂಪದ (ಋತದ) ಜ್ಞಾನ**ವಾಗಿತ್ತು. ಇಂತಹ ನಿಗೂಢಮಯ ಘನರಹಸ್ಯದ ಜ್ಞಾನವು ಸಾಮಾನ್ಯ ಮನುಕುಲದ ಮನೋವಲಯಕ್ಕೆ

ಬಹುತೇಕವಾಗಿ ಅಪಾಯಕಾರಿ ಆಗಿರುವ ಸಂದರ್ಭಗಳೇ ಹೆಚ್ಚಿರುತ್ತವೆ ಎಂದು ಪರಿಗಣಿಸಲ್ಪಟ್ಟಿರಬೇಕು. ಅದರಲ್ಲೂ ಇದನ್ನು ವಿಕೃತಿಗೊಳಿಸಿಕೊಂಡೇ ಅನುಷ್ಠಾನಗೊಳಿಸಬಹುದಾದ ಸಂದರ್ಭಗಳು ಇದ್ದು ಅವುಗಳನ್ನೂ ನಿಯಂತ್ರಿಸುವ ಕ್ರಿಯೆಯಾಗಿತ್ತು. ಅದನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಆ ಆತ್ಮಶಕ್ತಿಯನ್ನೂ ಅಪವಿತ್ರಗೊಳಿಸಿ, ಅಸಭ್ಯವಾಗಿರುವ ಕ್ರಿಯೆಗಳಿಂದ ನೈತಿಕ ಗುಣವನ್ನೂ ಅಧಃಪತನಗೊಳಿಸುವದನ್ನು ತಡೆಯುವ ಸಲುವಾಗಿ ರೂಪಿತವಾಗಿತ್ತು. ಈ ಹಿನ್ನೆಲೆಯಲ್ಲಿ – ಸುರಕ್ಷಿತವಾದ ವ್ಯವಸ್ಥೆಯನ್ನು ಸಂಯೋಜಿಸುವಲ್ಲಿ – ಅವರು **"ಬಾಹ್ಯ ಪೂಜಾ ವಿಧಾನ"**ಕ್ಕೆ ಹೆಚ್ಚಿನ ಒಲವನ್ನು ತೋರಿಸಿದರು. ಇದೊಂದು ಪರಿಣಾಮಕಾರಿಯಾದ ಕ್ರಮವೇನೋ ಆಗಿತ್ತು, ಆದರೆ, ಅಪರಿಪೂರ್ಣತೆಯಿಂದ ಕೂಡಿತ್ತು. ಅಪವಿತ್ರಗೊಳಿಸುವದನ್ನು ತಡೆಯಲು, ಒಂದು ಆಂತರಿಕ–ಶಿಸ್ತನ್ನು ಅನುಷ್ಠಾನಿಸಲು ಮತ್ತು ಅವರ ಭಾಷೆಗಳಲ್ಲಿಯೇ ಸಂಕೇತಗಳನ್ನು–ಆಕೃತಿಗಳನ್ನು–ಮೂರ್ತಿಗಳನ್ನು ಸೃಷ್ಟಿಸಿ, ಅಂತಹ ಸೃಷ್ಟಿಗಳೂ ಸಹಿತ ಮೂಲತತ್ತ್ವದಂತೆಯೇ ಆಧ್ಯಾತ್ಮಿಕ ಸ್ವರೂಪವನ್ನೇ ಆಧರಿಸಿಕೊಂಡಿರುವಂತೆಯೇ ಮತ್ತು ಅದು ಸರ್ವಗ್ರಾಹ್ಯವಾಗಿರುವಂತೆ ಮತ್ತು ಸಾಮಾನ್ಯ–ಆರಾಧಕರಿಗೂ(ಭಕ್ತರಿಗೂ) ಒಂದು ಸುಭದ್ರವಾದ ತಳಹದಿಯಲ್ಲಿ ರೂಪಿತಗೊಂಡಿತ್ತು.

ಇದೇ ಸಿದ್ಧಾಂತದ ವಿಧಾನದಲ್ಲಿಯೇ ವೇದಮಂತ್ರಗಳೂ ಸಹಿತ ಸೃಷ್ಟಿಗೊಂಡಿವೆ; ಸಂರಚನೆಗೊಂಡಿವೆ. ಅವುಗಳ ಸೂತ್ರಗಳು ಹಾಗೂ ಅನುಷ್ಠಾನ ವಿಧಾನಗಳು ಎಲ್ಲವೂ ಮೇಲ್ನೋಟಕ್ಕೇ ಬಾಹ್ಯ ಆಚರಣಾ ವಿಧಿ–ವಿಧಾನಗಳಲ್ಲಿಯೇ ರೂಪುಗೊಂಡಂತೆ ಕಂಡುಬಂದರೂ, ಅದು **ವಿಶ್ವದೇವತಾವಾದದ ಆರಾಧನಾ ಪದ್ಧತಿಗೆ** ಸೂಕ್ತವಾಗಿ ರೂಪುಗೊಂಡಿರುವ ಪಥವಾಗಿತ್ತು. ಇದು ಸರ್ವೇಸಾಮಾನ್ಯವಾಗಿ ಒಪ್ಪಿತವಾಗಿದ್ದ ಪಥವೂ ಆಗಿತ್ತು. ಹೀಗಾಗಿ ಇದು ಪವಿತ್ರಮಯ ಶಬ್ದಗಳಿಂದಲೇ ಸಂರಚನೆಗೊಂಡಿತ್ತು. ಜೊತೆಗೆ, ಆಧ್ಯಾತ್ಮಿಕ ಅನುಭವವನ್ನು ಸಾಕಾರಗೊಳಿಸುವ ಸಂಕೇತಗಳು(ಪ್ರತಿಮೆಗಳಲ್ಲಿ) ಇದ್ದವು. ಇದರ ಜೊತೆಜೊತೆಗೆ ಆ ಹಂತದ **ಪ್ರಜ್ಞಾ ಸ್ವಭಾವದಲ್ಲಿ** ಹಾಗೂ ಸ್ವಯಂಸಿದ್ಧವಾಗಿ ರೂಪುಗೊಂಡಿರುವ ಸ್ವಯಂ–ಸಂಸ್ಕೃತಿಯ(ಪ್ರಕೃತಿ–ಸಹಜತೆಯ)ಲ್ಲಿ ಅದರ ಮನೋವೈಜ್ಞಾನಿಕ ಶಿಸ್ತಿನಲ್ಲಿಯೂ ರೂಪುಗೊಂಡಿದ್ದವು. ಇವೆಲ್ಲವೂ "ಆ ಕಾಲದ" ಮಾನವ ಕುಲವು ತಲುಪಿದ್ದ ಅತ್ಯುನ್ನತವಾದ ಸಾಧನಾ ಪಥವೂ ಆಗಿತ್ತು.

ಸಾಯಣಾಚಾರ್ಯರು ಮಾನ್ಯ ಮಾಡಿರುವ ಈ ಧಾರ್ಮಿಕ ಪದ್ಧತಿಗಳು(ವಿಧಿ–ವಿಧಾನಗಳು) ಬಹುತೇಕವಾಗಿ ಈ **"ಬಾಹ್ಯ ವ್ಯವಸ್ಥೆಯ"**ಲ್ಲಿಯೇ

ನಿರೂಪಿತಗೊಂಡಿದ್ದ ವಿಷಯಗಳನ್ನು ಕುರಿತೇ ಇರುವಂತೆ ಕಾಣುತ್ತವೆ. ಯುರೋಪ ವಲಯದ ಜಿಜ್ಞಾಸುಗಳು ಕಂಡಿರಬಹುದಾದ **ಪ್ರಕೃತಿಯಾರಾಧನಾ ಸ್ವರೂಪದ ಅನುಭವ**ಗಳು, **ಪರಿಕಲ್ಪನೆ**ಗಳಂತೆಯೇ ತೋರುತ್ತವೆ. ಆದರೆ ಇವರ ಅಭಿಪ್ರಾಯಗಳಲ್ಲಿಯೂ ಸಹಿತ ಇಲ್ಲಿರುವದು **"ಸತ್ಯ"** ಮತ್ತು ಇದು **"ವೇದದ ರಹಸ್ಯ"**ವೇ ಆಗಿದೆ ಎನ್ನುವ ಅಭಿಪ್ರಾಯದಲ್ಲಿ ಒಮ್ಮತವಿದೆ. ಹೀಗಾಗಿಯೇ ಇವು ಇಂದಿಗೂ ಒಪ್ಪಿತವಾಗಿವೆ – ಅದು **"ನಿಣ್ಯಾ ವಚಾಂಶೀ"**ಯಂತೆ. ಏಕೆಂದರೆ ಇದು ಪರಿಶುದ್ಧ ಆತ್ಮದಿಂದಲೇ ಹೊರಹೊಮ್ಮಿ, ಜ್ಞಾನಪೂರ್ಣವಾಗಿಯೇ ಅಭಿವ್ಯಕ್ತಿಗೊಂಡಿದೆ. ಈ ರೀತಿಯಾಗಿ ಅಷ್ಟೊಂದು ಸುಸ್ಪಷ್ಟತೆಯಿಲ್ಲದಂತಿರು, ಆದರೆ ಅತ್ಯಂತ ಪ್ರಮುಖವಾಗಿರುವ ಇವುಗಳನ್ನು **"ವೇದದ ಶಬ್ದ–ಸಂರಚನಾ"** ವಿಧಾನದಲ್ಲಿ ಪುನರ್–ರೂಪಣೆಗೊಳಿಸಿ ಅನುಷ್ಠಾನಿಸಬೇಕಾಗಿದೆ. ವೇದದ ಪ್ರತಿಮಾತತ್ತ್ವಗಳ ಬಗೆಗೆ ಮತ್ತು ವೇದದಲ್ಲಿ ಉಲ್ಲೇಖಿಸಲ್ಪಟ್ಟಿರುವ ದೇವತೆಗಳ ಮನೋವೈಜ್ಞಾನಿಕ ಸ್ವರೂಪದ ಕಾರ್ಯಗಳ ಕುರಿತು ಪುನರ್–ರೂಪಣೆ ಕಷ್ಟಕರವಾಗಿದ್ದರೂ, ಅತ್ಯಾವಶ್ಯವಾಗಿ ಕೈಗೊಳ್ಳಲೇಬೇಕಾದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಇಲ್ಲಿನ ಅಧ್ಯಯನಗಳು ಮತ್ತು ಅನುಸ್ಪಂದನಗಳು ರೂಪಿತಗೊಂಡಿರುತ್ತವೆ. ಈ ಪಥದಲ್ಲಿನ ಪಯಣಕ್ಕೆ ಒಂದು **ಸಿದ್ಧತಾ ಹಂತದ ಪ್ರಥಮ ಹೆಜ್ಜೆ** ಇದಾಗಿದೆ.

ಒಂದು ವೇಳೆ ಈ ಊಹೆಯು ಸೂಕ್ತವಾಗಿದೆಯೆಂದು ಮಾನ್ಯತೆ ಪಡೆಯುವಲ್ಲಿ, ಆಗ ಇಲ್ಲಿ ಮೂರು ಮುಖ್ಯವಾದ ಸಫಲತೆಗಳು ಇಲ್ಲಿರುವದನ್ನು ಕಾಣಬಹುದು. ಇದು ಉಪನಿಷತ್ತುಗಳ ವಿಷಯವನ್ನು ಕುರಿತು, ಅದರಲ್ಲೂ ಈ ವರೆಗೂ ಅಜ್ಞಾತವಾಗಿಯೇ ಉಳಿದಿರುವ ಉಪನಿಷತ್ತುಗಳ ವಿಷಯವನ್ನು ಸುಸ್ಪಷ್ಟತೆಯಲ್ಲಿ ರೂಪಿಸುತ್ತದೆ. ಜೊತೆಗೆ ಪುರಾಣಗಳ ರಚನಾಕ್ರಮಾಂಕದಲ್ಲಿ ಇಲ್ಲಿಯವರೆಗೂ ತಪ್ಪಾಗಿ ಅರ್ಥೈಸಿಕೊಂಡಿರುವ ಸಂಗತಿಗಳನ್ನೂ ವಿಶ್ಲೇಷಿಸುವ ಮೂಲಕ, ವಿವರಣಾತ್ಮಕವಾಗಿಯೇ ನಿರೂಪಿತಗೊಳ್ಳುವ ಫಲಿತಾಂಶವನ್ನು, ತರ್ಕಸಮ್ಮತವಾದ ಸ್ವರೂಪದಲ್ಲಿಯೇ ಸಮರ್ಥನೆಯೊಂದಿಗೆ ಒದಗಿಸುತ್ತದೆ. ಈ ಮೂಲಕ ಭಾರತದ ಪ್ರಾಚೀನ ಪರಂಪರೆಯ ಕುರಿತು ಸಮಗ್ರ ಚಿತ್ರಣವನ್ನು ಒದಗಿಸುತ್ತದೆ. ಒಂದು ಸಮಚಿತ್ತದ ಅನುಸಂಧಾನದಲ್ಲಿ ಈ ಸತ್ಯವನ್ನು ಕಾಣಬಹುದಾಗಿದೆ. ವೇದಾಂತ, ಪುರಾಣ, ತಂತ್ರ, ತತ್ತ್ವಜ್ಞಾನದ ವಿವಿಧ ಪಂಥಗಳು(ದಾರ್ಶನಿಕ ಪಂಥಗಳು), ಹೀಗೆ ಎಲ್ಲವೂ ತಮ್ಮ ತಮ್ಮ ಮೂಲ ನೆಲೆಗೇ ಸಾಗಿ, ಅವೆಲ್ಲವೂ 'ವೇದ ಮೂಲದಿಂದಲೇ' ಉಗಮಗೊಂಡಿರುವದನ್ನು

ಕಾಣಬಹುದಾಗಿದೆ. ಇವೆಲ್ಲವುಗಳ **'ಮೂಲಬಿಂದು(ಬೀಜವು)'ವು** ಇಲ್ಲಿಯೇ ಇರುವದನ್ನು ಕಾಣಬಹುದಾಗಿದೆ. ಅಥವಾ ಇವೆಲ್ಲವುಗಳ ಆದಿಮ ಸ್ವರೂಪದ ಜೊತೆಗೆ ಭಾರತದ ಆಧುನಿಕ ಚಿಂತನಾ ವ್ಯವಸ್ಥೆಗಳೂ ಸಹಿತ ಇದೇ ಆದಿಮ ಸ್ವರೂಪದ ಸಾಕಾರಗಳನ್ನೇ ಆಧರಿಸಿವೆ ಎನ್ನುವದು ಗೋಚರಿಸುತ್ತದೆ. ಈ ಮೂಲಕ **'ಪ್ರಕೃತಿ ಸಹಜವಾದ'** ಒಂದು ಪ್ರಾರಂಭಧ ಬಿಂದುವನ್ನು ರೂಪಣೆಗೊಳಿಸಿಕೊಳ್ಳುವ ಮೂಲಕ, ಇದೊಂದು ಸುಭದ್ರವಾದ ರೀತಿಯಲ್ಲಿ, ಭಾರತೀಯ ಧಾರ್ಮಿಕ ವಿಷಯದಲ್ಲಿ ತುಲನಾತ್ಮಕವಾಗಿರುವ ಅಧ್ಯಯನವೊಂದನ್ನು ಕೈಕೊಳ್ಳಲು ಸಾಧ್ಯವಾಗುತ್ತದೆ. ಅನುಮಾನಾಸ್ಪದವಾಗಿರುವ, ಆಧಾರಗಳೇ ಇಲ್ಲದ ಕೇವಲ ಅನುಮಾನಗಳ ಮಧ್ಯೆ ಗುರಿ ಇಲ್ಲದೇ ಅಲೆದಾಡುವ ಬದಲು, ಅಥವಾ ಅನುಷ್ಠಾನಗೊಳಿಸಲು ಸಾಧ್ಯವೇ ಇಲ್ಲದ ಸಂಭಾಷಣೆಗಳಲ್ಲಿ ವಿಷಯ ವಿನಿಮಯ ಮಾಡಿಕೊಳ್ಳುವ ಬದಲು, ವಿವರಿಸಲು ಸಾಧ್ಯವಾಗದ ಇಂತಹ ಸಂಕ್ರಮಣಗಳ ಸ್ಥಿತಿಯಲ್ಲಿ ಸಿಲುಕಿಕೊಂಡು ತೊಳಲುವದಕ್ಕಿಂತ, ಇವುಗಳ ಮಧ್ಯದಲ್ಲಿಯೇ ಒಂದು ಪ್ರಕೃತಿದತ್ತವಾಗಿರುವ ಪರಿಹಾರದ ಸೂತ್ರವೊಂದು ಲಭ್ಯವಿದೆ ಎಂದು ಅರ್ಥೈಸಿಕೊಂಡು ಸಾಗಬೇಕಿದೆ. ಇದರ ಮೂಲಕ ಸಾಗುವದರಿಂದ, ಅಲ್ಲಿಯೇ ನಮ್ಮ ಪ್ರಗತಿಶೀಲ ವಿಕಾಸವನ್ನೂ ಪಡೆದುಕೊಳ್ಳಲು ಸಾಧ್ಯವಿದೆ. ಇದು ತರ್ಕಬದ್ಧವಾಗಿಯೂ ತೃಪ್ತಿದಾಯಕ ಅಂಶವೇ ಆಗಿದೆ. ಇದಕ್ಕೆ ಸಾಂದರ್ಭಿಕವಾಗಿ (ಅನುಷಂಗಿಕವಾಗಿ) ಪ್ರಾಚೀನ ಪಂಥಗಳಲ್ಲಿ ರೂಪಿತಗೊಂಡಿರುವ ಅಸ್ಪಷ್ಟ ಅಂಶಗಳ ಕುರಿತು, ಕೆಲವು ಅಧ್ಯಯನಗಳನ್ನು ಕೈಕೊಂಡು, ಜೊತೆಗೆ ಇತರ ಪ್ರಾಚೀನ ರಾಷ್ಟ್ರಗಳಲ್ಲಿ ರೂಪುಗೊಂಡಿರುವ ಇಂತಹ 'ರಹಸ್ಯ'ಗಳ ಕುರಿತು ವಿವರಗಳನ್ನು ಕಾಣಲು ಸಾಧ್ಯವಾಗುತ್ತದೆ.

ಅಂತಿಮವಾಗಿ, ಇಂತಹ ಸುಸ್ಪಷ್ಟವಾಗಿರುವ ವಿವರಣೆಗಳು ರೂಪುಗೊಳ್ಳುವದರಿಂದ, ವೇದಗಳಲ್ಲಿ ರೂಪುಗೊಂಡಿರುವ ವಿಫಲತೆಗಳು ಕ್ಷಣಾರ್ಧದಲ್ಲಿಯೇ ದೂರವಾಗುತ್ತವೆ. ಆಗ ಅವು ಮೂಲಸ್ವರೂಪದಲ್ಲಿ ಹೇಗೆ ಸೃಷ್ಟಿಗೊಂಡಿದ್ದವೋ ಅದೇ ಸ್ವರೂಪಗಳಲ್ಲಿಯೇ ಮತ್ತೆ ಗೋಚರಿಸುತ್ತವೆ. ಅವುಗಳಲ್ಲಿ ಅಂತರ್ಗತವಾಗಿರುವ ಅರ್ಥಪೂರ್ಣತೆಯೇ ಅವುಗಳ ಅಂತರ್ಜ್ಞಾನವೂ ಆಗಿದೆ. ಅವುಗಳನ್ನು ಸೂತ್ರಬದ್ಧಗೊಳಿಸಲು ವಿವರಣೆಗಳನ್ನು ಒದಗಿಸುತ್ತಿದೆ. ಇದೇ ಇದರ ರಹಸ್ಯವೂ ಆಗಿದೆ. ಯಾವಾಗ ನಾವು **'ಈ ಸೂತ್ರ'**ವನ್ನು ಅರ್ಥೈಸಿಕೊಳ್ಳುತ್ತೇವೆಯೋ, ಆಗ ಪ್ರತಿ ಋಕ್ ಸಹಿತ ತರ್ಕಸಮ್ಮತವಾಗಿ ಮತ್ತು ಪರಿಪೂರ್ಣವಾಗಿಯೇ **"ಜೀವಂತ ಸಂರಚನೆಯಾಗಿ"**

ಅಭಿವ್ಯಕ್ತಗೊಂಡಿರುವದನ್ನು ಅನುಸಂಧಾನಿಸಬಹುದಾಗಿದೆ. ಅದು ನಮ್ಮ ಸದ್ಯದ ಆಧುನಿಕ ಪದ್ಧತಿಗೆ ಸಂಪೂರ್ಣವಾಗಿ "ಅನ್ಯ"ವೆಂದು ಕಂಡುಬಂದರೂ ಸಹಿತ, (ಹಾಗೆ ಅರ್ಥೈಸಿಕೊಳ್ಳಲಾಗುತ್ತಿದರೂ ಸಹಿತ) ಇದು ತನ್ನದೇ ಅಸ್ಮಿತಾ ಸ್ವರೂಪದಲ್ಲಿಯೇ ಆಗಮಿಸುತ್ತದೆ. ಕೇವಲ ನ್ಯಾಯಯುತವಾದ ಮತ್ತು ಅತಿಶಯೋಕ್ತಿಯಿಲ್ಲದ, ಸಂಕ್ಷಿಪ್ತವಾದರೂ ಅರ್ಥಪೂರ್ಣವಾಗಿರುವ ಹೇಳಿಕೆಗಳನ್ನು ರೂಪಿಸುವದರಿಂದ, ಇಲ್ಲಿಯವರೆಗೂ ಅದಕ್ಕೆ ಆವರಿಸಿಕೊಂಡಿರುವ ಅಸಂಗತವಾದ ವಿಷಯಗಳು ದೂರವಾಗುತ್ತವೆ. ತದನಂತರದಲ್ಲಿ ನ್ಯಾಯಸಮ್ಮತವಾಗಿ ಸಂಕ್ಷಿಪ್ತವಾಗಿ ಕಾಣುತ್ತವೆ. ಅರ್ಥಪೂರ್ಣತೆಯ ಸಂವೇದನೆಗಳಲ್ಲಿ ದಾರಿದ್ರ್ಯ ಭಾವ ತುಂಬಿಕೊಂಡಿರುವದಕ್ಕಿಂತ ಅಧಿಕಾಧಿಕ ಪ್ರಮಾಣದಲ್ಲಿ ಗರ್ಭಸ್ಥಗೊಂಡ ಸ್ವರೂಪದಲ್ಲಿ ಗೋಚರಿಸುತ್ತವೆ. ಬರ್ಬರ ಜನಾಂಗದ ಅಚ್ಚರಿದಾಯಕ ಅವಶೇಷಗಳು ಈ ವೇದಗಳು ಎಂದು ವೇದಗಳನ್ನು ಸೀಮಿತಗೊಳಿಸುತ್ತಿರುವದನ್ನು ಸಂಪೂರ್ಣವಾಗಿ ನಿರ್ಬಂಧಿಸುತ್ತದೆ. ಅಲ್ಲದೇ ಇಡೀ ಜಗತ್ತಿನಲ್ಲಿಯೇ ಪ್ರಾಚೀನ ಅವಧಿಯಲ್ಲಿಯೇ ಸುಸಂಬದ್ಧವಾಗಿರುವ ರೀತಿಯಲ್ಲಿ ಗ್ರಂಥಸ್ಥಗೊಂಡಿರುವ ಅತ್ಯಂತ ಪ್ರಮುಖ ಘಟನೆಗಳಲ್ಲಿ ಇದು ಯಾವಾಗಲೂ ಪ್ರಪ್ರಥಮ ಶ್ರೇಣಿಯಲ್ಲಿಯೇ ಅಧಿಕೃತಗೊಳ್ಳುತ್ತದೆ.

(ಸಶೇಷ)

---

**ಟಿಪ್ಪಣಿ:**

**ಕಂದಕ:** ಧಾರ್ಮಿಕ ನೀತಿಗಳ ಹೆಸರಿನಲ್ಲಿ ರಾಜಾಡಳಿತವನ್ನು ಸಂಪೂರ್ಣವಾಗಿ ತಮ್ಮ ನಿಯಂತ್ರಣದಲ್ಲಿಯೇ ಉಳಿಸಿಕೊಳ್ಳಬಹುದು ಎನ್ನುವ ವಾತಾವರಣ ನಿರ್ಮಾಣವಾದದ್ದು ಮಧ್ಯಯುಗದ ಅವಧಿಯಲ್ಲಿ. ಯಾವಾಗ ಈ ಪ್ರಕೃತಿ ಸಹಜವಾದ ವೈವಿಧ್ಯತೆಯನ್ನು ಹತ್ತಿಕ್ಕಿ, ಕೇವಲ ಒಂದೇ ವಿಚಾರಧಾರೆಯ ಬದುಕನ್ನೇ ರೂಪಿಸಲು ಯತ್ನಿಸಲಾಯಿತೋ, ಆಗ ಮೊದಲು ಮಾಡಿದ ಕೆಲಸವೆಂದರೆ – ಪ್ರಕೃತಿ ಸಹಜವಾಗಿಯೇ ಅನುಷ್ಠಾನಗೊಂಡಿದ್ದ ಚಿಂತನಗಳ/ ಆಧ್ಯಾತ್ಮಿಕ/ಧಾರ್ಮಿಕ ವ್ಯವಸ್ಥೆಗಳ ಬೇರು ಕತ್ತರಿಸುವ ಕಾರ್ಯಗಳೂ ಸಹಿತ ರಾಜಾಶ್ರಯದಲ್ಲಿಯೇ ರೂಪಿತಗೊಳ್ಳುವಂತೆ ವ್ಯವಸ್ಥೆಗಳು ರೂಪಿಸಲ್ಪಟ್ಟವು. ಇದು ಕೇವಲ ಭಾರತ ದೇಶಕ್ಕೆ ಮಾತ್ರವಲ್ಲ. ಇಡೀ ಜಗತ್ತಿಗೇ ಇದರ ಪ್ರಭಾವ ಹರಡಿತ್ತು. ಅದರಲ್ಲೂ 15ನೇ ಶತಮಾನದ ಸಮಯಕ್ಕೆ ಇದು ವಿಶ್ವವ್ಯಾಪಿಯಾಗಿ, ಮತ್ತೊಂದು ಸಂಸ್ಕೃತಿಯ ಲವಶೇಷವೂ ಇರದಂತೆ ಒತ್ತಾಯಪೂರ್ವಕವಾದ

ನಿಯಮಾವಳಿಗಳನ್ನೂ ಹೇರಲಾಯಿತು. ಈ ರೀತಿಯ ಸಂಕುಚಿತಗೊಳಿಸಿದ ಸೂತ್ರವನ್ನೇ ಶಿಕ್ಷಣವೆಂದು ಪರಿಗಣಿಸಿ ಅದನ್ನೇ ಪೀಳಿಗೆಗೆ ತಿಳಿಸುತ್ತ/ಹೇರುತ್ತ ಬಂದ ಘಟನೆಯಿಂದ ಈ “ಕಂದಕ”ವು ಮತ್ತೂ ವಿಶಾಲವಾಗುತ್ತಲೇ ಬಂದಿತು.

**ಲೌಕಿಕ ಆಕಾರಗಳು:** ನಿರಾಕಾರದ ಆರಾಧನೆ ಸರ್ವಕಾಲಕ್ಕೂ ಸರ್ವರಿಗೂ ಸಾಧ್ಯವಾಗಬೇಕು ಎನ್ನುವದು ವೈಶ್ವಿಕ ಅಭೀಪ್ಸೆ. ಆದರೆ ವಿಕಾಸದ ಪಥದಲ್ಲಿ, ಈ ಹಂಥದ ಚಿಂತನಕ್ಕೆ ಅವಶ್ಯವಿರುವ ಮನೋಸಾಮರ್ಥ್ಯ ಅಥವಾ ಚೈತನ್ಯವು ಲಭ್ಯವಾಗುವದು ಅಪರೂಪ. ಹೀಗಾಗಿ ಪದಾರ್ಥ ಜ್ಞಾನದ ಮೂಲಕವೇ ಅಂತರಂಗದ ಪಯಣಕ್ಕೆ ಪಥವನ್ನು ನಿರ್ಮಿಸಲು ಪ್ರಯತ್ನಿಸಲಾದ ಪ್ರಪ್ರಥಮ ಘಟನೆಗಳಲ್ಲಿ, ಈ ರೀತಿ ಭೌಗೋಳಿಕ ವಾತಾವರಣಕ್ಕೆ ಅನುಗುಣವಾಗಿ “ಆಕಾರ”ಗಳನ್ನು ಸೃಷ್ಟಿಸಿ, ಅವುಗಳಲ್ಲಿಯೇ ವಿಶ್ವಸತ್ಯದ ಅಂಶಗಳನ್ನು ಅನುಭವಿಸಬಹುದಾದ ರೀತಿಯಲ್ಲಿ ಅವುಗಳಿಗೆ ಒಂದು “ಸ್ವರೂಪ”ವನ್ನು ರೂಪಿಸಲಾಯಿತು. ಆದರೆ ಇದು ಬೌದ್ಧಿಕ ವಿಕಸನದ ಪ್ರಥಮ ಮೆಟ್ಟಿಲು ಎಂದೇ ಪರಿಗಣಿಸಿ ಅನಷ್ಠಾನಿಸಲಾಗಿತ್ತು. ಎಷ್ಟೊಂದು ವೈವಿಧ್ಯಮಯದ ಆಕಾರಗಳ ಹಿಂದೆ, ಪ್ರಕೃತಿಯ ವೈವಿಧ್ಯತೆ ಮತ್ತು ಆಯಾ ಭೌಗೋಳಿಕ ವಾತಾವರಣದ ಬದುಕಿನ–ಜೀವನದ ವಿಧಿ–ವಿಧಾನಗಳೂ ರೂಪಿತಗೊಂಡವು.

**ವೇದದ ಶಬ್ದ ಸಂರಚನಾ ವಿಧಾನ:** ಪೂರ್ವ ದೇಶಗಳಲ್ಲಿ ಸರ್ವೇಸಾಮಾನ್ಯವಾಗಿರುವ ಅಂಶವೆಂದರೆ ‘ಇಡೀ ಜಗತ್ತು ಪಂಚಭೂತಗಳಿಂದ ನಿರ್ಮಾಣಗೊಂಡಿದೆ’ ಎನ್ನುವ ತತ್ತ್ವವನ್ನು ಸಂಪೂರ್ಣ ಆತ್ಮಪೂರ್ವಕವಾಗಿಯೇ ಒಪ್ಪಿಕೊಂಡು, ಅನುಷ್ಠಾನಗೊಳಿಸಕೊಂಡಿವೆ. ಅದರಲ್ಲೂ ಆಕಾಶತತ್ತ್ವದ ಮೂಲಕವೇ “ಶಬ್ದ–ನಾದ–ಧ್ವನಿ” ಎನ್ನುವದನ್ನು ಸಂವಹನ ಮಾಡಿಕೊಂಡೇ ತಮ್ಮ ಚಿಂತನಗಳನ್ನು ಅಭಿವ್ಯಕ್ತಿಗೊಳಿಸಿವೆ. ಆಕಾಶದಿಂದಲೇ ಉದ್ಭವವಾಗುವ “ಧ್ವನಿಯನ್ನು”/“ಅಕ್ಷರವನ್ನು” ದೃಷ್ಟಾರ ಹಂತದಲ್ಲಿ ನೋಡಿ, ಅದನ್ನು ತನ್ನ “ಶಬ್ದಗಳಲ್ಲಿ” ಅಭಿವ್ಯಕ್ತಗೊಳಿಸಿದ್ದನ್ನು ಕಾಣುತ್ತೇವೆ. ಅಲ್ಲಿ ಬ್ರಹ್ಮಾಂಡ–ವಿಶ್ವ–ಜಗತ್ತು– ಜೀವ–ಜೀವನ ಹಾಗೂ ವಿಕಾಸದ ಸ್ವರೂಪಕ್ಕೆ ನಿಯತಿಯ ಅನುಗುಣವಾಗಿ ನಡೆದಿರುವ ಸ್ಪಂದನಶೀಲ ಸಂರಚನೆಗಳು ಒಂದೇ ಶ್ರುತಿಯಲ್ಲಿ ಇದ್ದರೆ ಅದು ಮಂತ್ರಸ್ವರೂಪದಲ್ಲಿಯೇ ಇರುತ್ತದೆ, ಹಾಗೂ ವಿಶ್ವಸತ್ಯವನ್ನೇ ಪ್ರಕಟಪಡಿಸುತ್ತ ಋತದ ಇಚ್ಛೆಯನ್ನು ತೋರಿಸುತ್ತದೆ. ಈ ರೀತಿಯಲ್ಲಿಯೇ ಇದ್ದ “ಭಾಷಾ ವ್ಯವಸ್ಥೆ” ಮತ್ತೆ ಅನುಷ್ಠಾನಕ್ಕೆ ಬರಬೇಕಾಗಿದೆ.

## ಶ್ರೀ ಅರವಿಂದರ

# "ಋಗ್ವೇದದ ಪ್ರಥಮ ಋಕ್" – ಒಂದು ಆಧುನಿಕ ವಿಶ್ಲೇಷಣೆ

**– ಅನುವಾದ: ಪುಟ್ಟು ಕುಲಕರ್ಣಿ**

**5**

**ಋತ್ವಿಜಮ್**

ವೇದದ ಯಾಜ್ಞಿಕ ಕ್ರಿಯೆಗಳನ್ನು ಅನುಷ್ಠಾನಿಸುವಾಗ ಈ ಪದದ(ಋತ್ವಿಜಮ್) ಬಳಕೆ ಇದೆ. ತದನಂತರದಲ್ಲಿ "ಋತ್ವಿಕ್"ಎಂದು ಪರಿವರ್ತನಗೊಂಡಿತು. ಋತ್ವಿಜ/ಋತ್ವಿಕ್ ಎಂದರೆ ಸಮರ್ಪಣಾ ವಿಧಾನದಲ್ಲಿ ಯಜ್ಞವನ್ನು ಮುಂದುವರೆಸುತ್ತಿರುವ ವ್ಯಕ್ತಿ (ಯಾಜಕ, ಅಧ್ವರ್ಯು, ಹೋತೃ) ಆಗಿದ್ದಾನೆ. ಹೀಗಾಗಿ ಈ ಋತ್ವಿಜಮ್ – ಋತ್+ಇಜ್ ಎಂದು ವಿಗ್ರಹಿಸಿ, ಕಾಲಾನುಸಾರಿಯಾಗಿ, ಸಮರ್ಪಣೆಗೈಯುವವನು ಎಂದರ್ಥಗೊಳಿಸಲ್ಪಟ್ಟಿದೆ.

ಋತ್ವಿಜ್ ಎನ್ನುವ ಶಬ್ದವೇ ಅತ್ಯಂತ ಪ್ರಾಚೀನ ಶಬ್ದವಾಗಿದೆ. ಪ್ರಾಚೀನ ಸಂಸ್ಕೃತದಲ್ಲಿ – ಅದರಲ್ಲೂ ಸಂಧಿ–ವಿಗ್ರಹಗಳ ಬಗೆಗೆ ಆಧುನಿಕ ಸೂತ್ರಗಳು ಇನ್ನೂ ನಿರ್ಮಾಣಗೊಂಡಿರದ ಅವಧಿಯಲ್ಲಿ ಸಂಯೋಜಿಸಲ್ಪಟ್ಟ ಶಬ್ದವಾಗಿದೆ. ಹೀಗಾಗಿ, ಈ ಸಂಯೋಜನೆಯಲ್ಲಿ ಋತ್ ಎಂದರೆ (ಋತ=ಸತ್ಯ) ಮತ್ತು ವಿಜ್‌ಗೆ ದೈವೋನ್ಮಾದದ ಅರ್ಥವನ್ನು ತುಂಬಲಾಯಿತು. ಅಂದರೆ ಋತ (ಸತ್ಯದ ಸ್ವರೂಪದಿಂದ ಅನುಭೂತಿಗೊಂಡವನು) ಎಂದರ್ಥ ಸ್ಥಾಯಿಯಾಯಿತು.

ಋತ್ ಇದು 'ಋ' ಮೂಲಧಾತುವಿನಿಂದ ರೂಪಿತಗೊಂಡ ಭಾವವಾಚಕ ನಾಮಪದವಾಗಿದೆ. ಇದರ ಅರ್ಥವು – ತೋಲನ, ಡೋಲಾಯಮಾನ, ಕಂಪಿಸು, ಅಸ್ತ್ರ(ಬಾಣದಂತೆ ನೇರವಾಗಿ ಚಲಿಸುವ), ನೇರ ಚಲನೆಯ ಎನ್ನುವ ಅರ್ಥಗಳಿವೆ. ಇನ್ನು ಋತ್‌ನ derivative ಅರ್ಥವೆಂದರೆ – ತಲುಪು, ಹೊಂದು, ಆವರಿಸು, ಆಕ್ರಮಿಸು ಅಥವಾ ದಾಳಿಯಿಡು, ಘಾತಿಗೊಳಿಸು, ತೊಂದರೆಗೊಳಪಡಿಸು, ಗಾಯಗೊಳಿಸು, ಉದ್ಗಮ, ಉದಿಸು ಅಥವಾ ಉತ್–ಕ್ಷಿಪ್ತ (ಗೊಳ್ಳು) ಎನ್ನುವ ಅರ್ಥಗಳಿವೆ. ಮತ್ತೆ ಇದರ ಜೊತೆಗೆ, ಹೊಳೆಯುವ, ಸತ್ಯವನ್ನು ಸಾಕ್ಷಾತ್ಕರಿಸುವ ಎನ್ನುವ ಅರ್ಥಗಳಿವೆ.

ನೇರವಾಗಿ ಚಲಿಸುತ್ತಿರುವ ಎನ್ನುವ ಅರ್ಥವ್ಯಾಪ್ತಿಯಲ್ಲಿ, ಅದೂ ಕ್ರಿಯಾಪದದ (secondary verb) ಹಂತದಲ್ಲಿ ಋಚ್ ವಿಶೇಷಣ ರೂಪವು ಋಜು ಎಂದಾಗುತ್ತದೆ. ಋಜು ಎಂದರೆ ನೇರ–ಸರಳ ಎಂದರ್ಥವಿದೆ. ಲ್ಯಾಟಿನ್ ಭಾಷೆಯಲ್ಲಿಯೂ ಸಹಿತ ರೇಗೋ–ರೇಜೋ(Rego), ರೆಕ್ಟಸ್ ಎನ್ನುವ ಶಬ್ದಗಳ ಅರ್ಥವೂ ಇದೇ ಆಗಿದೆ. ಋತ ಎಂದರೆ ನೇರ, ಸೂಕ್ತ, ನೈಜ ಸತ್ಯವೆಂದರ್ಥವಿದೆ. ಋತಮ್ ಎಂದರೆ ಸತ್ಯ, ಸೂಕ್ತ, ಸರಿಯಾದ, ಅನುಷ್ಠಾನಿಸಲ್ಪಟ್ಟ ವಿಶ್ವ ನಿಯಮ ಅಥವಾ ರಿವಾಜು ಎಂದಿದೆ. ಇನ್ನು ಸತ್ಯಮ್ ಎನ್ನುವದನ್ನು ಪರಬ್ರಹ್ಮನಿಗೆ (Superme Brahman) ಅನ್ವಯಿಸಿ, ನಿರ್ದಿಷ್ಟಪಡಿಸಿದ ಆಜ್ಞೆ–ಅಧ್ಯಾದೇಶ, ನಿಗದಿತ ಅವಧಿ ಎಂದಾಗಿದೆ ಅಥವಾ ಋತುಮಾನ ಎಂದೂ ಅರ್ಥವ್ಯಾಪ್ತಿ ಇದೆ. ಇದೇ ಆಧಾರದಲ್ಲಿ ಋಷಿ ಎಂದರೆ ಚಿಂತಕ, ಸತ್ಯವನ್ನು ಕಂಡವನು, ದೃಷ್ಟಾರ ಎಂದಿದೆ. ಲ್ಯಾಟಿನ್ ಭಾಷೆಯಲ್ಲಿಯೂ ಸಹಿತ Reor (ರಿಯೋರ್) ಎಂದರೆ "ನಾನು ಚಿಂತನ ನಡೆಸುತ್ತೇನೆ" ಎಂದಿದೆ. ಜೊತೆಗೆ, ಅನುಪಾತ, ರೀತಿ, ಆದೇಶ, ಕಾರಣ/ಯುಕ್ತತ್ವ ಎಂದೂ ಅರ್ಥವ್ಯಾಪ್ತಿ ಇದೆ. ಈಗ ಲುಪ್ತವಾಗಿರುವ (Obsolete) ಶಬ್ದ ಋತ್ ಎಂದರೆ ಅಧಿಕೃತತ್ವ, ಸಂತ್ಯ, ನಿಯಮ/ನಿಯತಿ, ಶಾಸನ, ಆಳ್ವಿಕೆ ಮತ್ತು ಚಿಂತನದ ವ್ಯಾಪ್ತಿಯಲ್ಲಿ ಸತ್ಯಮ್ ಎನ್ನುವ ಬಳಕೆಯಲ್ಲಿ ಇತ್ತು.

ವಿಜ್ ನಾಮಪದವೂ ಹೌದು; ಜೊತೆಗೆ ವಿಶೇಷಣವೂ ಹೌದು. ಇದು ವಿಚ್ ಕ್ರಿಯಾ ಮೂಲದಿಂದ ಬಂದಿದ್ದು, ವಿಚ್ ಎಂದರೆ – ಕಂಪಿಸು, ಬಾಧನೆಗೊಳಪಡಿಸು, ಉತ್ತೇಜಿಸುವ, ಚಂಚಲತೆಯ, ಉನ್ಮತ್ತವಾಗುವ, ತೋಷಗೊಳ್ಳುವ, ಹರ್ಷೋನ್ಮಾದದಲ್ಲಿ ತಲ್ಲೀನಗೊಳ್ಳುವ, ಸೌಖ್ಯ ಅಥವಾ ಉನ್ಮಾದಪೂರಿತ ಶಕ್ತಿಯ ಎನ್ನುವ ವಿವಿದಾರ್ಥಗಳಿವೆ. ಲ್ಯಾಟಿನ್ ಭಾಷೆಯಲ್ಲಿಯೂ ಸಹಿತ ಇದೇ ತೆರನಾದ ಅರ್ಥವ್ಯಾಪ್ತಿ ಹೊಂದಿದ vigeo (ವೀಜಿಯೋ) ಮತ್ತು vigor (ವಿಜೋರ್) ಇದೆ. ಈ ಶಬ್ದವೇ ಇಂಗ್ಲೀಷಿಗೆ ಆಮದಾಗಿ – ರೂಪಾಂತರಗೊಂಡು vigour – ಓಜಸ್ಸು, ತೇಜಸ್ಸು ಎನ್ನುವ ಅರ್ಥದಲ್ಲಿ ಈಗಲೂ ಚಾಲ್ತಿಯಲ್ಲಿದೆ. ಒಟ್ಟಿನಲ್ಲಿ, ಋತ್ವಿಜ್ ಎನ್ನುವದು ತೋಷದ ತುರೀಯಾವಸ್ಥೆಯಲ್ಲಿ ಸತ್ಯದೊಡನೆ ಪರಿಪೂರ್ಣವಾಗಿ ಏಕೀಭವಿಸುವ ಅಥವಾ ಸತ್ಯಮ್ ಎಂದರ್ಥವಿದೆ.

ಅಗ್ನಿಯು ತಪಸ್ಸಿನ ದೇವತೆ ಅಥವಾ ಶಕ್ತಿಯ ದೇವತೆ ಎನ್ನುವದನ್ನು ಜೊತೆಗೆ ಬೌದ್ಧಿಕ ಸ್ತರದಲ್ಲಿ ಆಸಕ್ತಿಯಿರುವ ಕ್ರಿಯೆಯಲ್ಲಿ ಇರುವ ತಪಸ್ಸು ಮತ್ತು ಶಕ್ತಿಯ ಹಿನ್ನೆಲೆಯಲ್ಲಿ ಎನ್ನುವದನ್ನು ಈಗಾಗಲೇ ಗಮನಿಸಲಾಗಿದೆ. ಈ ಅಗ್ನಿಯು ಉಚ್ಚತಮ ದೇವತೆಗಳಲ್ಲಿಯೇ ಪ್ರಮುಖನಾಗಿದ್ದು, ತನಗಿಂತ ಕೆಳಗಿನ ಸ್ತರದಲ್ಲಿರುವ ಇಂದ್ರನ ಸೇವೆಯಲ್ಲಿ ಕಾರ್ಯಪ್ರವೃತ್ತನಾಗುತ್ತಾನೆ. ಇವನು ನೇರವಾಗಿ ಚಿತ್‌ನಿಂದಲೇ ಚಲಿಸುತ್ತಾನೆ. ಇವನು ಕ್ರಿಯಾಪ್ರವೃತ್ತನಾಗಿರುವಾಗ ಮಹಾ ತಪಸ್ಸು ಅಥವಾ ಚಿಚ್ಛಕ್ತಿ(ಚಿತ್–ಶಕ್ತಿ) ಎಂದು ಗುರುತಿಸಲಾಗುತ್ತಿದೆ. ಈ ಹಂತವು ಸದ್–ಬ್ರಹ್ಮನ ಸ್ಥಿತಿಯಲ್ಲಿ ಅಥವಾ ವಿಷ್ಣು(ಯಜ್ಞಕ್ಕೆ)ವಿಗೆ ಅತ್ಯಾವಶ್ಯವಿರುವ (ಸಾರಭೂತವಾಗಿರುವ) ಬೌದ್ಧಿಕತೆಯ ಶಕ್ತಿಯಾಗಿದೆ. ಈ ಶಕ್ತಿಯು ಕೋಶದಿಂದ ಅಥವಾ ಸದಾತ್ಮನ ಅನುಭೂತಿಯ ಕಂಪನದಿಂದ, ಜೊತೆಗೆ ಅನುಭೂತಿಯ ಕಂಪನ ಅಥವಾ ವಿಜ್(ವೇಗ)ದಿಂದ ಸೃಷ್ಟಿಗೆ ನಾಂದಿಯಾಗುತ್ತದೆ. ಹೀಗಾಗಿಯೇ ತೀವ್ರವಾಗಿ ಚಲಿಸುವ, ಹೊರಹೊಮ್ಮುವ, ಉದ್ಭವಗೊಳ್ಳುವ ವೇಗವು, ಬಲವು, ಉಷ್ಣ, ತಪಸ್ಸು, ಅಥವಾ ಅಗ್ನಿ ಇವೆಲ್ಲವೂ ಅಸ್ತಿತ್ವಕ್ಕೆ ಆಧಾರಭೂತ ಸ್ತರಗಳಾಗಿವೆ. ಅದಕ್ಕಾಗಿಯೇ ತಪಸ್ಸು ಚಿಚ್ಛಕ್ತಿಯ ಮೂಲಕ ಜನಿಸುತ್ತದೆ; ಉದಿಸುತ್ತದೆ. ಈ ಚಿಚ್ಛಕ್ತಿಯ ಶಕ್ತಿಯನ್ನು ಶಕ್ತಿ, ದೇವಿ, ಕಾಳಿ, ಪ್ರಕೃತಿ ಎಂದು ಕರೆಯುತ್ತಾರೆ. ಈ ಎಲ್ಲವೂ ಸತ್–ನ ಅನುಭಾತಾತ್ಮಕವಾದ ಚಲನಗಳೇ ಆಗಿವೆ. ಅದಕ್ಕೆ ಇದನ್ನು "ಮಹಾ ಸತ್ಯಮ್' – ತನ್ನಿಂದ ತಾನೇ ಉದಿತಗೊಂಡ – ಕರೆಯಲಾಗಿದೆ.

ಹೀಗಾಗಿಯೇ ಅಗ್ನಿಗೆ ಋತ್ವಿಜಮ್ ಎಂದು ಕರೆಯಲಾಗಿದೆ. ಸತ್ಯಮ್–ದೊಡನೆ ಸದಾ ತೋಷೋನ್ನತಿಯ ಹರ್ಷೋನ್ಮಾದದ ತುರೀಯಾವಸ್ಥೆಯಲ್ಲಿ ಕಂಪಿಸುತ್ತಿರುವ ಶಕ್ತಿಯಾಗಿದ್ದಾನೆ. ಹೀಗಾಗಿಯೇ ಅಗ್ನಿಯನ್ನು ಜಾತವೇದ ಎಂದು ಗುರುತಿಸಲಾಯಿತು. ಇವನ ಮೂಲಕವೇ ಜ್ಞಾನದ ತುರೀಯಾವಸ್ಥೆಯು ಲಭ್ಯವಾಗುವದರಿಂದ – ಅದರಲ್ಲೂ ಅವನು ಇದೆ ಜ್ಞಾನವನ್ನೇ ಸದಾ ಹೊಂದಿರುವದರಿಂದ – ಅದನ್ನೇ ವೇದವು "ಸತ್ಯಮ್" ಎಂದು ಅಂಗೀಕರಿಸಿದೆ; ಅನುಷ್ಠಾನಿಸಿದೆ.

ತಪಸ್ಸು ಎನ್ನುವದು ಚಿತ್ತದ ಏಕಾಗ್ರತೆಗೆ ಹಾಗೂ ಜಾಗೃತಿಗೆ (ಇದನ್ನೇ ಸಂಯಮ ಎಂದು ಪತಂಜಲಿ ಹೇಳುತ್ತಾರೆ) ಅತ್ಯಾವಶ್ಯವಾಗಿರುವ ಆಧಾರವಾಗಿದೆ.

ಜಾಗೃತಿಯ ಈ ಸಂಯಮ ಅಥವಾ ಏಕಾಗ್ರತೆಯ ಮೂಲಕ ಅದು ಉದ್ದೇಶಾಧಾರಿತವಾಗಿದ್ದರೆ "ರಾಜಯೋಗ"ವಾಗುತ್ತದೆ; ಅದು ಅಂತರ್ಗತವಾಗಿದ್ದರೆ – ತನ್ನಲ್ಲೇ ತನ್ನನ್ನು ದರ್ಶಿಸುವ ಹಂತದಲ್ಲಿದ್ದರೆ "ಜ್ಞಾನಯೋಗ" ಅಥವಾ "ಆಧ್ಯಾತ್ಮಯೋಗ"ವಾಗುತ್ತದೆ. ಇವುಗಳ ಮೂಲಕ ಇದು ಸತ್ಯವಾಗುತ್ತದೆ. ಹೀಗಾಗಿ ವೇದವು ಪ್ರಕೃತಿಜನ್ಯವಾಗಿ–ನೈಸರ್ಗಿಕವಾಗಿ ಯೋಗಿಯ ಕಾಂತಿಯಾಗಿ ಕಂಗೊಳಿಸುತ್ತದೆ. ಸಂಯಮವಿಲ್ಲದೇ ಯೋಗದ ಸಾಧನೆ ಸಾಧ್ಯವೆ ಇಲ್ಲ. ಯಾವುದೇ ರೀತಿಯ ಕರ್ಮಗಳೂ ಸಹಿತ ಫಲಸಿದ್ಧಿಯಾಗಲಾರವು, ಪರಿಣಾಮಕಾರಿಯಾಗಿ ಕರ್ಮಗಳು ಅನುಷ್ಠಾನಗೊಳ್ಳುವದಿಲ್ಲ. ಪ್ರಕಟಗೊಳ್ಳುವದೂ ಇಲ್ಲ. ಬ್ರಹ್ಮನು, ಸೃಷ್ಟಿಯ ಕುರಿತು ತನ್ನ ಮನಸ್ಸನ್ನು ತೊಡಗಿಸಿಕೊಂಡಾಗಲೇ, ಅದು ತಪಸ್ಸು–ತಪಸ್ಸು ಎಂದೆ ಉದ್ಘೋಷಿಸುತ್ತಿತ್ತು; ಕರೆ ಕೊಟ್ಟಿತ್ತು. ಈ ಕರೆಯ ನಾದವನ್ನು ಆಲಿಸಿದ ಕಾರಣಾರ್ಣವದ (ಮಹಾಕಾರಣ ಅಥವಾ ಸದ್ಬ್ರಹ್ಮದ) ಅಲೆಗಳಲ್ಲಿ ಪಡಿಮೂಡಿತ್ತು. ಹೀಗಾಗಿ ಅಗ್ನಿಯ ಅನಂತವಾದ ಮಹತ್ವವು ಯೋಗಿಗೆ "ಋತ್ವಿಜ್"ನಂತೆಯೆ ಸ್ಫುಟಗೊಳ್ಳುವಂತಾಯಿತು. ಅವನನ್ನು ಏಕೆ ಪುರೋಹಿತಂ ಯಜ್ಞಸ್ಯ ಎನ್ನುತ್ತಾರೆ ಎನ್ನುವ ವಿಷಯವೂ ಸಹಿತ ಇದರಿಂದ ಸ್ಪಷ್ಟಗೊಳ್ಳುವಂತಾಯಿತು. ಅದಕ್ಕಾಗಿಯೇ, ಸತ್ಯದ ಎದುರು ನಿಂತಿರುವ (ಸಮಕ್ಷಮದಲ್ಲಿ ನಿಂತಿರುವ) ತಪಸ್ಸು ಇದಾಗಿದೆ. ಸತ್ ಅನ್ನು ಪಡೆಯುವ ಮುನ್ನ ನಾವು ಈ ಹಂತವನ್ನು ಪಡೆಯುತ್ತೇವೆ; ಕಾಣುತ್ತೇವೆ.

ಇಲ್ಲಿ ಚಿಚ್ಛಕ್ತಿಯು ನಮ್ಮನ್ನು ಸತ್ ಎಡೆಗೆ ಕರೆದುಕೊಂಡು ಹೋಗುತ್ತದೆ. ಈ ಸತ್ ಅನ್ನೇ ದೇವಿ. ಶಕ್ತಿ ಅಥವಾ ಕಾಳಿ ಎಂದು ಕರೆಯಲ್ಪಡಲಾಗಿದೆ. ಇವಳೇ ನಮಗೆ ಬ್ರಹ್ಮ(ತ್ವ)ನನ್ನು, ವಸುದೇವನನ್ನು ಮತ್ತು ಅಗ್ನಿಯನ್ನು ಮತ್ತು ಶಕ್ತಿದೇವತೆಯ ವಿಶೇಷ ಪ್ರತಿನಿಧಿಯಾದ ಮನೋಪಾತಳಿಯ ತಪಸ್ಸನ್ನು ದರ್ಶನ ಮಾಡಿಸುವ ಮೂಲಕ ಮಾರ್ಗದರ್ಶಿಯಾಗುತ್ತಾಳೆ. ಹೀಗಾಗಿ ಈ ಹಂತವು, (ಚಿತ್ ಮತ್ತು ಸತ್) ನಮ್ಮ ಮತ್ತು ಯಜ್ಞದ ಮಧ್ಯದಲ್ಲಿ ಸಂಪರ್ಕಕ್ಕಾಗಿ, ವಿಶೇಷ ಅಂತರ್ನಿಯೋಜಕನಾಗಿ, ಗುರುತಿಸಲಾಗುತ್ತಿದೆ. ಈಗಾಗಲೇ ಅನುಷ್ಠಾನದಲ್ಲಿರುವಂತೆ – ವಿಷ್ಣು, ವಾಸುದೇವ ಮತ್ತು ಬ್ರಹ್ಮನಾಗಿ ಪರಾರ್ಧದಲ್ಲಿ ಅಥವಾ ಬೌದ್ಧಿಕ ಸ್ತರದ ಸಚ್ಚಿದಾನಂದದ ಹಂತವನ್ನು ಪ್ರತಿಯೊಬ್ಬನೂ ತಲುಪುತ್ತಾನೆ.

ಈ ಎಲ್ಲ ಹಿನ್ನೆಲೆಯಲ್ಲಿ ಅಗ್ನಿಯು ಋಷಿಗಳಿಗೆ ಮಹತ್ತರ ದೇವತೆಯಾಗಿದ್ದಾನೆ. ಬೃಹದ್ದೇವತೆಯಾಗಿದ್ದಾನೆ. ಅದೇ ಸಮಯಕ್ಕೆ ಕೇವಲ ಸಮರ್ಪಣಾ ವಿಧಾನಗಳಿಂದ ಆರಾಧಿಸುವ ಮತ್ತು ನೈಯಾಮಿಕವಾಗಿ (ಕ್ರಿಯಾ–ಸಂಸ್ಕಾರ ಪದ್ಧತಿಯಂತೆ) ಆರಾಧಿಸುವವರಿಗೆ ಕೇವಲ ಇವನು "ಬೆಂಕಿಯ ದೇವತೆ"ಯಾಗಿದ್ದಾನೆ. ಅವರ ಎಲ್ಲ ಪದ್ಧತಿಗಳಲ್ಲಿ ಅಪರಿಹಾರ್ಯದ ಹಂತದಲ್ಲಿ ಆರಾಧಿಸಲ್ಪಡುತ್ತಾನೆ. ಆದರೆ ಒಬ್ಬ ಯೋಗಿಗೆ ಮಾತ್ರ, ಅಗ್ನಿಯು ಸರ್ವ ಪ್ರಮುಖವಾಗಿರುವ ಹಂತವಾಗಿದ್ದು, ಸೂರ್ಯನಷ್ಟೇ ಮಹತ್ವದ, ಮಹತ್ತರನಾದ, ಜ್ಯೋತಿಕಾಂತಿಯ ಒಡೆಯನಷ್ಟೆ, ಮತ್ತೆ ಸೋಮನಷ್ಟೇ ಹಾಗೂ ಅಮೃತತ್ವ ದೇವತೆಯಂತೆಯೇ ಪ್ರಮುಖನಾಗಿದ್ದಾನೆ. ಹೀಗಾಗಿ ವೇದವು, ಈ ರೀತಿಯಾಗಿ ಕಾಂತಿಮಯ ತೇಜದಿಂದ ಹೊಳೆಯುವ ಮತ್ತು ಸಾಧಕರಿಗೆ ಸಹಕರಿಸಲು – ಅದರಲ್ಲೂ – ಜ್ಞಾನದ – ಶುದ್ಧ ಜ್ಞಾನದ ಪಥಗಳಲ್ಲಿ ಸದಾ ಮಾರ್ಗದರ್ಶಿಯಾಗಿದ್ದಾನೆ.

**ಹೋತಾರಮ್:**

ವೇದದಲ್ಲಿ ಮತ್ತೊಂದು ಪ್ರಾಮುಖ್ಯವಾದ ಶಬ್ದವೆಂದರೆ "ಹೋತಾರಮ್". ಇಲ್ಲಿಯವರೆಗೂ ಬಂದಿರುವ ವೇದದ ಎಲ್ಲ ಭಾಷ್ಯಗಳಲ್ಲಿ (ಟಿಪ್ಪಣಿಗಳಲ್ಲಿ–ಅರ್ಥಗಳಲ್ಲಿ) ಪ್ರತಿಪಾದಿಸಲ್ಪಟ್ಟಿರುವಂತೆ "ಹೋತಾ" ಎಂದರೆ ಪುರೋಹಿತ ಅಧ್ವರ್ಯು ಎಂದೇ ಇದೆ. ಇವನು ತರ್ಪಣದ (Libation) ಮೂಲಕ ಹವಿಸ್ಸನ್ನು ಅರ್ಪಿಸುವ ಮೂಲಕ ಆರಾಧಿಸುತ್ತಾನೆ. ಇಲ್ಲಿರುವ "ಹ" ಅಕ್ಷರವು "ಹು" ಮೂಲದಿಂದ ವ್ಯುತ್ಪತ್ತಿಗೊಂಡಿದೆ. "ಹು" ಎಂದರೆ – ಧಾರೆ ಎರೆ, ತರ್ಪಣ ಕೊಡು ಎನ್ನುವ ಅರ್ಥವಿದೆ. ಈ ರೀತಿಯಾಗಿ ನಿರ್ದಿಷ್ಟ ಪಡಿಸಿದ ಅರ್ಥವೊಂದು ರೂಪುಗೊಂಡು, ಸಾವಿರಾರು ವರ್ಷಗಳ ಕಾಲದ ಆಚರಣಾ ಪದ್ಧತಿಯಲ್ಲಿ ಅನುಷ್ಠಾನಗೊಳ್ಳುತ್ತ, ವೇದದ ಪ್ರಮುಖ ಶಬ್ದಗಳ ಅರ್ಥವ್ಯುತ್ಪತ್ತಿಯೊಂದಿಗೆ ಪ್ರಧಾನಾರ್ಥದ ರೀತಿಯಲ್ಲಿಯೇ ಮುಂದುವರೆಸಲ್ಪಟ್ಟಿತು. ಇದಕ್ಕೆ ಬೇರೆಯದೇ ಆದ ಅರ್ಥವೊಂದಿದೆ ಎನ್ನುವದನ್ನು ಯೋಚಿಸಲೂ ಸಾಧ್ಯವಿಲ್ಲದ ಹಾಗೆ ಇದೇ ಅಭಿಪ್ರಾಯವನ್ನೇ (ಒತ್ತಾಯದಿಂದಲೂ) ಮುಂದುವರೆಸಲ್ಪಟ್ಟಿತು.

ಆದರೆ ವೇದದ ಮೂಲ ಅರ್ಥದಲ್ಲಿ ಹೋತಾ ಎಂದರೆ ಪುರೋಹಿತ ಅಲ್ಲವೇ ಅಲ್ಲ. ಇಲ್ಲಿರುವ "ಹು" ಧಾತುವೂ ಸಹಿತ ತರ್ಪಣಕ್ಕಾಗಿ ರೂಪಿಸಲ್ಪಟ್ಟ

ಶಬ್ದವಾಗಿರುವುದಿಲ್ಲ. ಈಗಾಗಲೇ ರೂಪಕಾರ್ಥದಲ್ಲಿ(Metaphorical) ಅಥವಾ ಲಕ್ಷಣಾರ್ಥದಲ್ಲಿ ಇರುವ ಅಗ್ನಿಯನ್ನು "ಪುರೋಹಿತ"ನೆಂದು ಕರೆದು, ತರ್ಪಣ ಕ್ರಿಯೆಯ ಮೂಲಕ ಸಮರ್ಪಿಸುತ್ತಿರುವ ಪುರೋಹಿತನೆನ್ನುವ ಅರ್ಥವ್ಯಾಪ್ತಿಯು, ಸಂಸ್ಕೃತದ ಪರಿಪೂರ್ಣತಾ ಭಾವಕ್ಕೆ ಒಪ್ಪಿತವಾಗುವದಿಲ್ಲ. ಹೀಗಾಗಿ ಹವಿಸ್ಸನ್ನು ಧಾರೆಯೆರೆಯುತ್ತಿರುವ ವ್ಯಕ್ತಿಯೆನ್ನುವ ಅರ್ಥದಲ್ಲಿಯೂ ಕಾಣುವಂತಿಲ್ಲ. ಇವನು ಏನನ್ನೂ ಧಾರೆಯೆರೆಯುತ್ತಿಲ್ಲ. ಏನನ್ನೂ ಸಮರ್ಪಿಸುತ್ತಿಲ್ಲ. ಹೀಗಾಗಿ, "ಹೋತಾ" ಎನ್ನುವುದಕ್ಕೆ ಬೇರೆಯದೇ ಆದ ಮಹತ್ವವನ್ನು ಹೊಂದಿರುವುದರಿಂದ ಮತ್ತು ಈ ವಿಷಯದ ವ್ಯಾಪ್ತಿಯ ಆಚೆಗೆ ಹೋಗದ ಹಾಗೆ – ಸಾಮಾನ್ಯ ಅನುಭವದಿಂದ – ಜ್ಞಾನದಿಂದ ನೋಡಿದರೂ ಸಹಿತ ಇಲ್ಲಿ ಹೋತಾ ಎಂದರೆ "ಅಗ್ನಿಯೇ ಆಗಿದ್ದಾನೆ" ಎಂದು ಸಿದ್ಧವಾಗುತ್ತದೆ.

"ಹು" ಕ್ರಿಯಾ ಧಾತುವು "ಹಾ" ಮತ್ತು "ಹಿ"ದಂತೆಯೇ "ಹ್" ವ್ಯಂಜನದಿಂದಲೇ ಆಧಾರಿತವಾಗಿದ್ದು, ಈ "ಹ್" ವ್ಯಂಜನದ ಲಕ್ಷಣಗಳೆಂದರೆ (ಗುಣಗಳೆಂದರೆ) – ಅತಿಕ್ರಮಣ, ಪ್ರಚಂಡ–ಕ್ರಿಯೆಯ, ತೀಕ್ಷ್ಣತೆ(ತೀವ್ರತೆ), ದೀರ್ಘಶ್ವಾಸೋಚ್ಛ್ವಾಸದ ಮತ್ತು ಸವಾಲೆಸೆಯುವ – ಆಹ್ವಾನವೀಯುವ ಎಂದೆಲ್ಲಾ ಅರ್ಥವ್ಯಾಪ್ತಿ ಇದೆ. ಅದೇ ರೀತಿ ಬಳಕೆಯಲ್ಲಿಯೂ ಇದೆ. ಜೊತೆಗೆ "ಹು" ಕ್ರಿಯಾಪದವು ಸಹಿತ ಮೂಲತಃ "ಹ", "ಹಾ" ಮತ್ತು "ಹಿ"ದಂತೆಯೇ ಇದ್ದು, ಇದರ ಅರ್ಥವು ಎಸೆ, ಕೆಳಗೆಸೆ, ದಾಳಿಯಿಡು, ಪತನಗೊಳಿಸು ಎಂದಿದೆ. ಇನ್ನು "ಉ" ಸ್ವರವು ಇದರೊಡನೆ ವ್ಯಾಪಕಾರ್ಥದಲ್ಲಿ (Pervasiness) ಅರ್ಥವನ್ನು ಹೊಂದಿ ಸಂಯೋಜನೆಗೊಂಡು, ಸಹಜವಾಗಿಯೇ ಯುದ್ಧ, ಹೋರಾಟದ ಕಲ್ಪನೆಯನ್ನು ರೂಪಿಸುತ್ತ ಬಂದಿದೆ. ಆದ್ದರಿಂದ ಇಲ್ಲಿ ನಾವು ನಿಷ್ಕರ್ಷೆಗೊಳಿಸಬೇಕಾದ ಸಂಗತಿ ಎಂದರೆ, ಈ ಕ್ರಿಯಾಪದವು ಮೂಲತಃ "ದಾಳಿಯಿಡು", "ಹೋರಾಡು", ಎಂದೇ ರೂಪುಗೊಂಡು "ಆಹವಃ", ಯುದ್ಧ(ಸಂಗ್ರಾಮ) ಎಂದಾಗಿದೆ. "ಹ್ವೇ" ರೂಪದಲ್ಲಿ ಇದು "ಕರೆ ಕೊಡು", "ಪಂಥಾಹ್ವಾನವಿಡು", ಬೊಬ್ಬೆ ಇಡು, ಆಹ್ವಾನ ಕೊಡು(Summons) ಎಂದಿದೆ. ಇದರ ಮೂಲ ರೂಪವು "ಹವೇ" ಎಂದಿದೆ. "ಹವೇ" ಎಂದರೆ ಬೀಸಾಡು (ಎಸೆ), ಮೇಲಕ್ಕೆಸೆ, ಹಾನಿಗೊಳಿಸು, ಎಸೆಯುವದಕ್ಕೆ, ಧಾರೆ ಎರೆ, ಸಮರ್ಪಿಸು ಎನ್ನುವ ಅರ್ಥಗಳಿವೆ. ಇಲ್ಲಿ ಕೊನೆಯ ಶಬ್ದವಾದ "ಹವೇ" ಅರ್ಥದಿಂದ ಉದ್ಭವಿಸಿದ ವ್ಯವಸ್ಥೆಯೇ, ಇಂದಿನ ಆಧುನಿಕ ಅರ್ಥವೂ ರೂಪುಗೊಂಡಿದೆ.

ಈ ಯುದ್ಧದ ವ್ಯವಸ್ಥೆಯ ಅರ್ಥವ್ಯಾಪ್ತಿಯಿಂದ ಸ್ಥಾನಾಂತರ ಪ್ರಮಾಣದಿಂದ ಸಮರ್ಪಣಾ ಅರ್ಥಕ್ಕೆ ಸಮಾನಾಂತರವಾದ ವ್ಯವಸ್ಥೆಗೆ ರೂಪುಗೊಂಡ ಗ್ರೀಕ್ ಶಬ್ದವೂ ಸಹಿತ "ಮಾಚೆ" (mache) ಮಾಖೆ(?), ಯುದ್ಧವೆನ್ನುವ ಅರ್ಥದಲ್ಲಿಯೇ ಇದ್ದು ಅದಕ್ಕೆ ಸಂಸ್ಕೃತದಲ್ಲಿ "ಮಖಃ" ಶಬ್ದದ ಪರ್ಯಾಯದಂತೆ ಇದೆ. "ಮಖಃ" ಎಂದರೆ ಸಮರ್ಪಣ ಅಥವಾ ತ್ಯಾಗ ಎನ್ನುವ ಅರ್ಥವಿದೆ.

ಇಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಸಂಗತಿ ಎಂದರೆ – ಯೋಗವೆನ್ನುವದು ಪ್ರಾಚೀನ ಕಾಲಕ್ಕೆ ಅಥವಾ ವೇದದ ಕಾಲಕ್ಕೆ, ಆಗಿನ ಆರ್ಯರೆಂದು ವರ್ಗೀಕರಿಸಲ್ಪಟ್ಟಿರುವ ಸಮುದಾಯಕ್ಕೆ ಇದ್ದ ಅರ್ಥವೆಂದರೆ "ದೇವತೆಗಳ ಮತ್ತು ದೈತ್ಯರ ಮಧ್ಯೆ ಜರುಗಿದ್ದ ಯುದ್ಧ"ವಾಗಿದೆ. ಆಗ ದೇವತೆಗಳೂ ಸಹಿತ ಮಾನವನ ಸಲುವಾಗಿ ವೀರಾಧಿವೀರರಂತೆ ಹೋರಾಟ ಮಾಡಿ, ಅದರಲ್ಲೂ ದೈತ್ಯರ ವಿರುದ್ಧ ಯುದ್ಧ ಮಾಡಬೇಕಾದ ಸಂದರ್ಭವಿತ್ತು. ಆ ಮೂಲಕ ಜಯಶಾಲಿಯಾಗಿ, ಮಾನವರನ್ನೂ ಸಹಿತ ಶಕ್ತಿಯುತರನ್ನಾಗಿಸುವ ಜೊತೆಗೆ ಜಯಶಾಲಿಗಳನ್ನಾಗಿಸುವ ಜೊತೆಗೆ ಯೋಗದ ಪರಿಣಾಮವಾಗಿ ಕ್ರಿಯಾನುಷ್ಠಾನದಲ್ಲಿಯೂ ಸಾಮರ್ಥ್ಯಶಾಲಿಗಳನ್ನಾಗಿಸಿದ ವಿಷಯವಾಗಿದೆ. ದೈತ್ಯರನ್ನು ಅಥವಾ ದಸ್ಯುಗಳನ್ನು ಯೋಗ ಅಥವಾ ಯಜ್ಞದ ಶತ್ರುಗಳೇ ಎನ್ನುವ ವಾತಾವರಣ ಆಗ ಇತ್ತು.

ಈ ರೀತಿಯಾಗಿ ಇದರ (ಮರು)ಅಧ್ಯಯನದ ಮೂಲಕವೇ ವಿಷಯವನ್ನು ಸ್ಪಷ್ಟಗೊಳಿಸಿಕೊಳ್ಳಬೇಕಾಗಿದೆ. ಜೀವನದ ಬಗೆಗಿನ ಈ ತೆರನಾದ ದೃಷ್ಟಿಕೋನಗಳು ಮತ್ತು ಯೋಗದ ಬಗೆಗಿನ ದೃಷ್ಟಿಕೋನಗಳು ಇಂದಿನ ಜೀವನದ ಏಕೈಕ ಉನ್ನಯನ(Sublimation–ಉದಾತ್ತೀಕರಣ)ವಾಗಬೇಕಿದೆ. ಅದರಲ್ಲೂ ಭಾರತೀಯ (ಹಿಂದುತ್ವದ) ವ್ಯಾಪ್ತಿಯಲ್ಲಿ ರೂಪಿತಗೊಂಡಿರುವ ವೇದ, ಪುರಾಣ, ತಂತ್ರ ಮತ್ತು ಇತರೆ ಆಚರಣಾ ಪದ್ಧತಿಗಳಲೆಲ್ಲವೂ ನಿರೂಪಿತಗೊಂಡಿರುವಂತೆ, ದೇವ–ಅಸುರರ ಮಧ್ಯದ ಹೋರಾಟಗಳು ಮತ್ತು ಅವುಗಳ ಮೂಲಕವೇ ಸಂರಚನೆಗೊಂಡ ಸಾಂಸ್ಕೃತಿಕ ಆಯಾಮಗಳ ವಿಶ್ಲೇಷಣೆಯ ಅವಧಿಯಲ್ಲಿ, ಇಂತಹ ಅಧ್ಯಯನಗಳು ಒಂದು ಹೊಸ ದೃಷ್ಟಿಕೋನದ ಮೂಲಕ ಸೃಜನಾತ್ಮಕವಾದ ವ್ಯವಸ್ಥೆಯನ್ನು ರೂಪಿಸುವದು.

ಒಟ್ಟಿನಲ್ಲಿ, ಅಗ್ನಿಯು ಪರಮೋಚ್ಚ ವೀರಾಧಿವೀರನಾಗಿದ್ದು, ಇವನಿಂದ ದೈತ್ಯರೆಲ್ಲರ ನಿಗ್ರಹವಾಗುತ್ತದೆ. ಏಕೆಂದರೆ ಅಗ್ನಿಯು ಅಹೇತುಕ ತಪಸ್ಸಿನ

ಸ್ವರೂಪದಲ್ಲಿ ಇರುವನು. ಅದಕ್ಕೆ, ಪ್ರತಿಯಾಗಿ ಯಜಮಾನನ ಸೂಕ್ತ ಸಹಕಾರದೊಂದಿಗೆ, ಅತ್ಯಂತ ನಿಖರವಾಗಿ ಬಳಸಲ್ಪಟ್ಟರೆ, ಯೋಗಿಯೊಬ್ಬನಿಂದ ಅಗ್ನಿಯು ಅನುಷ್ಠಾನಗೊಳಿಸಲ್ಪಟ್ಟರೆ, ಆಗ ಯಾವುದೇ ದುಷ್ಟ ಶಕ್ತಿಯೂ ಉಳಿಯುವದಿಲ್ಲ. ಏಕೆಂದರೆ ಅಹೇತುಕ ಶಕ್ತಿಯು ಮಾತ್ರ ಎಲ್ಲ ಬಾಧೆಗಳನ್ನು ನಾಶಪಡಿಸುತ್ತದೆ. ಇದು ಸಾಮರ್ಥ್ಯಶಾಲಿ, ಪರಿಣಾಮಕಾರೀ ಮತ್ತು ಹೋರಾಟದ ಬಲದಲ್ಲಿ "ಸಿದ್ಧಿ"ಯನ್ನು ಪಡೆದುಕೊಳ್ಳುವ ಸಲುವಾಗಿ ಪರಿಪಕ್ವವಾದ ಕ್ರಿಯೆಗಳನ್ನು ಮಾಡುತ್ತದೆ. ಅದಕ್ಕಿಂತ ಮಿಗಿಲಾಗಿ, ಇದು ಪ್ರಕೃತಿಯಲ್ಲಿ ಮತ್ತು ನಮ್ಮ ಸುತ್ತಲೂ ವಿಶ್ವಪ್ರಾಣದ (ಸರ್ವಶಕ್ತ) ನಿಯಂತ್ರಣ ಹೊಂದಿರುತ್ತದೆ. ಅಶುದ್ಧತೆಯಿದ್ದಾಗಲೂ ಸಹಿತ ತಪಸ್ಸು, ಶತ್ರುಗಳ (ತಮಸ್ಸಿನ) ವಿರುದ್ಧ ಹೋರಾಟ ಮಾಡುತ್ತದೆ. ಅಗ್ನಿಯ ಕ್ರಿಯೆಗಳು ಈ ತಮಸ್ಸನ್ನು ಹೊಡೆದೋಡಿಸಿ ವೀರ್ಯತ್ವವನ್ನೂ, ಜ್ಞಾನವನ್ನೂ ಆನಂದವನ್ನೂ ಮತ್ತು ಮುಕ್ತಿಯನ್ನು ದೊರಕಿಸುತ್ತದೆ.

ಹೀಗಾಗಿ "ಹೋತಾರಮ್" ಎಂದರೆ ಯುದ್ಧದಲ್ಲಿ ಹೋರಾಡುವ ವೀರಾಧಿವೀರ, ದೈತ್ಯರ ಸಂಹಾರಿಯಾದ "ಅಗ್ನಿಯೇ(ಜಾತವೇದ)" ಆಗಿದ್ದಾನೆ. ಹವಿಸ್ ಮತ್ತು "ಹವ್" ಎಂದರೆ ಯುದ್ಧ ಅಥವಾ ಯುದ್ಧದಂತಹ ಕಾರ್ಯಗಳಲ್ಲಿ ಬಲ/ಶಕ್ತಿ ಎಂದಾಗಿರುತ್ತದೆ. ಏಕೆಂದರೆ ಮೊದಲೆ ಗಮನಿಸಿದಂತೆ "ಹು" ಎನ್ನುವದೇ ಹೋರಾಡು ಎನ್ನುವ ಕ್ರಿಯಾಮೂಲವಾಗಿದೆ.

**"ರತ್ನಧಾತಮಮ್"**

ರತ್ನಧಾ ಎನ್ನುವದರ superlative ಅರ್ಥವೇ ರತ್ನಧಾತುವಮ್ ಆಗಿದೆ. ಇದರ ಅರ್ಥವು "ತೋಷವನ್ನು ನೀಡುವ(ಒದಗಿಸುವ), ಪ್ರಕಾಶಮಾನವಾಗಿ ಬೆಳಗುವ(ಕಾಣುವ) ಎನ್ನುವ ಅರ್ಥವಿದೆ. "ರತ್" ಎನ್ನುವ ಕ್ರಿಯಾಮೂಲದ Derivative ರೂಪವೇ "ರೆ" ಕ್ರಿಯಾಪದವಾಗಿದೆ. "ರ" ಮತ್ತು "ರಿ" ಕ್ರಿಯಾಪದಗಳು "ರ್" ಎನ್ನುವ ಆಧಾರಭೂತ ಶಬ್ದದಿಂದ ಸೃಷ್ಟಿಗೊಂಡಿವೆ. ಅವಿರತವಾದ ವಿಲೋಲತೆ ಮತ್ತು ಆಂದೋಲನವೇ ಇದರ ಮಹತ್ವವಾಗಿದೆ. "ರ" ಎಂದರೆ ಡೋಲಾಯಮಾನ, ಕಂಪಿಸು, ನಡುಗು, ಬಾಹ್ಯದಲ್ಲಿ ಲೋಲಾಟದಲ್ಲಿರು ಎಂದರ್ಥದಲ್ಲಿದೆ. ಇದರಲ್ಲಿ ಸಂಯೋಗಗೊಳ್ಳುವ "ಅ" ಸ್ವರವು ಮೂಲಭೂತವಾಗಿರುವ ನಿರ್ವಿಶೇಷತೆಯನ್ನು, ಸರ್ವವ್ಯಾಪಿತ್ವವನ್ನು ಹೊಂದಿದೆ. "ಇ" ಸ್ವರವು ಬಯಸುತ್ತಿರುವ ಸೀಮಿತತನವನ್ನು

ವಿರೋಧಿಸುವುದಾಗಿದೆ. "ಇ" ಸ್ವರವು ಯಾವಾಗಲೂ ನಿರ್ದಿಷ್ಟಪಡಿಸಿದ ಗುರಿಯ ಮತ್ತು ಸೀಮಿತತೆಯ ಅರ್ಥದಲ್ಲಿ ಮಾತ್ರ ಇರುತ್ತದೆ. ಈ ಆಧಾರದಲ್ಲಿ ಜನಿತಗೊಂಡ ಅರ್ಥಗಳ ಉದಾಹರಣೆಗಳನ್ನು ಗಮನಿಸಿದರೆ, – ರತಮ್, ರತ್ನ, ರತಿಃ, ರಮ್(ರಮಿಸು), ರನ್ಸ್, ರಜತಮ್ (ಬೆಳ್ಳಿ), ರಜಃ, ರಜನೀ, ರಾತ್ರೀ ಶಬ್ದಗಳೆಲ್ಲಾ ರೂಪುಗೊಂಡಿವೆ. ಇದರ ಮೂಲಾರ್ಥದಲ್ಲಿ ಸಂತೋಷಪಡಿಸು, ಪ್ರೀತಿಸು, ಆರಾಧಿಸು, ಎನ್ನುವ ವಿವಿಧಾರ್ಥಗಳಿವೆ. ರಾಮಾ, ರಾಮಃ, ರಾಧ್, ರಜ್, ರಜಃ, ರಜೋ ಗುಣಗಳೆಲ್ಲವೂ ಇದನ್ನು ಆಧರಿಸಿಯೇ ರೂಪುಗೊಂಡಿವೆ.

ಪ್ರಾಚೀನ ಸಂಸ್ಕೃತದಲ್ಲಿ "ರತ್" ಕ್ರಿಯಾಪದವು ಎರಡು ಅರ್ಥಗಳಲ್ಲಿ ಬಳಕೆಯಲ್ಲಿ ಇತ್ತು. ತೋಷ, ಆನಂದ, ಉಲ್ಲಾಸ, ಕ್ರೀಡೆ, ಪ್ರಕಾಶಮಾನ ವಸ್ತು, ಸ್ತ್ರೀ ಎಂದು ಒಂದು ಅರ್ಥದಲ್ಲಿ ಬಳಕೆಯಲ್ಲಿ ಇದ್ದರೆ, ಮತ್ತೊಂದು ಅರ್ಥದಲ್ಲಿ – ಶೋಭಾಯಮಾನ, ಪ್ರಕಾಶ, ದ್ಯುತಿ(ದೀಪ್ತಿ), ತೇಜಸ್ಸು, ದೀಪ್ತಿವಂತ, ರತ್ನ ಎನ್ನುವ ಅರ್ಥದಲ್ಲಿ – ಆಧುನಿಕ ಕಾಲದಲ್ಲೂ – ಬಳಸಲ್ಪಟ್ಟಿದೆ. ಮೆಲ್ನೋಟಕ್ಕೇ ಕಾಣುವಂತೆ, ಈ ತೇಜತ್ವ(ತೇಜಸ್ಸು) ಮತ್ತು ದೀಪ್ತಿವಂತ ಶಬ್ದಗಳು ಅಗ್ನಿಗೆ ಅತ್ಯಂತ ಸೂಕ್ತವಾದ ಶಬ್ದಗಳಾಗಿವೆ. ಇದೇ ತೆರನಾಗಿ, ಯುದ್ಧರಂಗದಲ್ಲಿ ಹೋರಾಡಿ ವಿಜಯಶಾಲಿಯಾದವನಿಗೂ ಸಹಿತ, ತಮವನ್ನು ಕಳೆದು ಮನಸ್ಸನ್ನು ಬೆಳಗಿಸಿದ ಕ್ರಿಯೆಗೂ ಇದು ಸೂಕ್ತ ಶಬ್ದವಾಗಿದೆ.

ಆದರೆ ಋಕ್ಕಿನ ಅಂತರಾರ್ಥ ಮಾತ್ರ ಪ್ರಕಾಶದ ಒಡೆಯ ಅಗ್ನಿ ಅಲ್ಲವೇ ಅಲ್ಲ ಎಂದಿದೆ. ಅದು ಸಂಕೇತಿಸುತ್ತಿರುವುದು ನೇರವಾಗಿ "ಸೂರ್ಯ"ನನ್ನು ಎನ್ನುವುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಸೂರ್ಯನು ಸರ್ವಶಕ್ತ/ ಬಲಗಳ ಒಡೆಯನಾಗಿದ್ದಾನೆ. ತಪಸ್ಸಿನ ಒಡೆಯನು ಹೌದು. ಏಕೆಂದರೆ, ನಮಗೆ ದೊರೆಯುತ್ತಿರುವ ತೋಷ, ಪ್ರಕಾಶಮಾನವಾದ ಆನಂದ ಎಲ್ಲವೂ ಸೂರ್ಯನ ಮೂಲಕವೇ ಲಭ್ಯವಾಗುತ್ತಿದೆ. ಪರಾರ್ಧದ ಮೂರು ಹಂತಗಳಾದ – ಸತ್–ಚಿತ್ ಮತ್ತು ಆನಂದ ಇವು ಸೂರ್ಯನ ಕೊಡುಗೆಗಳೇ ಆಗಿವೆ. ಸತ್‌ನಲ್ಲಿ ಚಿತ್ ಸ್ಥಾಯಿಯಾಗಿದ್ದು ಅದು ಸತ್‌ನಿಂದಲೇ ಹೊರಹೊಮ್ಮುತ್ತದೆ. ಇದು ಆವಿರ್ಭವಿಸುತ್ತಿದ್ದಂತೆಯೇ ಇದು ಚಿಚ್ಛಕ್ತಿಯ ಬಲವನ್ನು(ಶಕ್ತಿಯನ್ನು) ಉದಿತಗೊಳಿಸುತ್ತದೆ. ಈ ಉದಿತಗೊಂಡ ಚಿಚ್ಛಕ್ತಿಯ ಶಕ್ತಿಯೇ ವಿಶ್ವದಾದ್ಯಂತ ಲೀಲೆಗಳಲ್ಲಿ ತೊಡಗಿಕೊಂಡಿದೆ. ಇದು ಲೀಲಾಮಯ(ರತ್ನಮಯ)ವಾಗಿದೆ.ಇದು

ಚಿತ್ ನಲ್ಲಿ ಆನಂದವಾಗಿದ್ದು (ಚಿದಾನಂದವಾಗಿದ್ದು) ಅಲ್ಲಿಂದಲೇ ಉದಿತಗೊಳ್ಳುತ್ತದೆ. ಹೀಗಾಗಿ ಎಲ್ಲ ರೀತಿಯ ತಪಸ್ಸು ಆನಂದವನ್ನು ಉತ್ಪತ್ತಿಗೊಳಿಸುತ್ತದೆ. ಪರಿಶುದ್ಧಾತ್ಮಕವಾದ ಸಹೇತುಕ ತಪಸ್ಸು ಅಷ್ಟೇ ಪರಿಶುದ್ಧವಾದ ಸಹೇತುಕ ಆನಂದವನ್ನು ಉತ್ಪತ್ತಿಗೊಳಿಸುತ್ತದೆ. ಇದು ವಿಶ್ವದಾದ್ಯಂತವೂ ವ್ಯಾಪಿಸಿದ್ದು, ಸ್ವಯಂ ಸೃಷ್ಟಿಯಾಗಿ ಅಸ್ತಿತ್ವದಲ್ಲಿದ್ದು, ಅದರ ವಿಶಿಷ್ಟ ಗುಣದಿಂದಾಗಿ ಯಾವುದೇ ರೀತಿಯ ದುಃಖ–ಕ್ಲೇಶಗಳಿಂದ ಬಾಧಿತಗೊಳ್ಳುವದಿಲ್ಲ. ಇದು ಅತ್ಯಂತ ಖಚಿತವಾದ, ವ್ಯಾಪ್ತಿಯುಳ್ಳ ಮತ್ತು ಅಷ್ಟೇ ಗಾಢತೆಯನ್ನೂ ಹೊಂದಿದೆ. ಆದ್ದರಿಂದ, ಅಗ್ನಿಯು ಸರ್ವೋತ್ಕೃಷ್ಟ ತೋಷವನ್ನು ಕೊಡುವ, ಪ್ರಕಾಶವನ್ನು ದೊರಕಿಸಿ ಕೊಡುವ ಒಬ್ಬ ಮಹತ್ತರವಾದ ಶಕ್ತಿಯಾಗಿದ್ದಾನೆ. ಏಕೆಂದರೆ **"ಧಾ"** ಶಬ್ದದ ಅರ್ಥವು ಸೃಷ್ಟಿಗೊಳಿಸು, ಹೊಂದಿಸು, ದಯಪಾಲಿಸು, ವ್ಯವಸ್ಥೆಗೊಳಿಸು ಎಂದೇ ರೂಪಿಸಲ್ಪಟ್ಟಿದೆ. ಇಲ್ಲಿ, ಪ್ರಾಚೀನ ಭಾಷಾ ವ್ಯವಸ್ಥೆಯ ಸಮುದಾಯದಿಂದ(ಆರ್ಯರಿಂದ) ಈ ಶಬ್ದವು ಸತ್ವಯುಕ್ತ ವಿಶೇಷವಾಗಿ, ಪ್ರತಿನಿಧಿಯಾಗಿ, ಕೆಲವೊಮ್ಮೊಮ್ಮೆ ವಿಶೇಷಣವಾಗಿ ಉಪಯೋಗಿಸಲ್ಪಟ್ಟಿತ್ತು.

– ಮಂಗಲಂ –

**ಆಧಾರ ಗ್ರಂಥಗಳು:**

1) The Life Divine/Hymns on the Mystic- Fire/Savitri - (Sri Aurabindo)

## ಶ್ರೀ ಅರವಿಂದರ ಕವನ

## 'ಆತ್ಮದ ಅನಂತತೆ'

ಕಾಲಕೂ ಮುನ್ನ ನಾನಿದ್ದ ಗತಿಗೆ ನಾನೀಗ ಬಂದುದಿಂತು.
ಗೂಢ–ಸ್ಪರ್ಶ ತಾ ಶಾಂತಗೊಳಿಸಿದನುಭಾವ–ಚಿಂತನವನಿಂತು;
ಸರ್ವಸ್ವವೆಲ್ಲ ಸಂಚಲನಗೊಳಲು ಪ್ರತಿನಿಧಿಯ ಚಿತ್ತ ತಾನು
ನಿಶ್ಶೂನ್ಯ ಮತ್ತೆ ಶಬ್ದಮುಗ್ಧತೆಯ ಮಹಿಮೆಯಲಿ ಲೀನವಿನ್ನು

ಕಾಲಕಾತೀತ ಕರಗಳಲಿ ನನ್ನ ಜೀವನವು ಶಾಂತ ಘನದಿ;
ಅನಿಮೇಷ ದೃಷ್ಟಿಯಲಿ ಲೋಕ ಸರ್ವ ತಲ್ಲೀನದೊಳಗೆ ನಿಂದು.
ಅದರ ಗವಸುಗಳ ಆವರಣದೊಳಗೆ ದಿಗಂಬರವೆನ್ನ ಪ್ರಾಣ;
ಏಕಾಕಿ ನಾನು ನನ್ನದೇ ಜೀವದೊಡನೀಗ ಅವಕಾಶ ತಾಣ

ಅನಂತಾನಂತದಾ ಕೇಂದ್ರವಿದುವು ಈ ನನ್ನ ಹೃದಯಪದ್ಮ,
ನನ್ನ ದೇಹವಿದು ಬಿಂದು ತಾನೀಗ ವ್ಯಾಪ್ತಗೊಳ್ಳಲೆನೆ ಆತ್ಮ
ಸರ್ವಜೀವಿಗಳ ಬೃಹತ್–ಆಖಾತ ನನ್ನಡಿಯಲಿಂತು ಹೊಮ್ಮಿ,
ಅಜ್ಞಾನ ಘನದ ಮಹಾಕಾಯದಲಿ ತಾ ದರ್ಶಗೊಂಡು ಒಮ್ಮೆ.

ಕಾಲದಾ–ಸ್ಪಂದ ತಾನಿರದ ವ್ಯಾಪ್ತ ನಿಸ್ಸೀಮ, ಪರಮಶುದ್ಧ
ವಿಸ್ತಾರಗೊಂಡೆ ಶಾಶ್ವತದಲೀಗ ಸರ್ವತ್ರ ನಾನು ಬದ್ಧ

**ಅನು: ಪುಟ್ಟು ಕುಲಕರ್ಣಿ**
**ಶ್ರೀ ಅರವಿಂದರ "ಆಯ್ದ ಕವನಗಳು"**

## ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

# "ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"

11

ಈ ರೀತಿಯಿಂದ ಸಾಧನೆಯಿಡುವದೂ ಸಾಮಾನ್ಯ ಕೆಲಸವೇನಲ್ಲ. ಸಾಮಾನ್ಯ ಮನುಷ್ಯನಿಗೆ ಗಡಚಾದ ಮಾರ್ಗವನ್ನು ಆಕ್ರಮಿಸುವದು ಜಡವಾಗುವದು. ಯಾಕೆಂದರೆ ದಿನಾಳು ಬರುವ ಎದೆಗುಂದುವ ಪ್ರಸಂಗಗಳಲ್ಲಿ ಧೈರ್ಯ ಹೇಳಲಿಕ್ಕೆ, ತಪ್ಪಿದಲ್ಲಿ ಪ್ರತ್ಯಕ್ಷ ಕೃಪೆಯಿಂದ ತೋರಿಸಲಿಕ್ಕೆ, ತನ್ನ ವರ್ಚಸಿನಿಂದ (ಪ್ರಸಾದದಿಂದ) ಕಾರ್ಯಕ್ಕೆ ಉತ್ತೇಜಿಸಲಿಕ್ಕೆ, ಆತನಿಗೆ ಯಾವನೊಬ್ಬ ಗುರುವಿನ ಅವಶ್ಯಕತೆ ಬೇಕಾಗುತ್ತದೆ. ಇದು ಸ್ವಾಭಾವಿಕಕವೇ ಆಗಿದೆ. ಇಂಥ ಗುರುವು ಸಿಗುವದು ಕಷ್ಟವು. ಆದರೂ ಹುಡುಕಿಕೊಂಡು ಕಾರ್ಯ ಸಾಧಿಸತಕ್ಕದ್ದು. ಆದರೆ ಈ ಎಲ್ಲ ಪ್ರಸಂಗಗಳಲ್ಲಿ ಯಾವಾಗಲೂ ನೆನಪಿನಲ್ಲಿ ಇಡುವ ಸಂಗತಿ ಯಾವುದೆಂದರೆ, ಶಾಸ್ತ್ರ ಅಥವಾ ಗುರುಗಳ ಮೇಲೆ ತಕ್ಕಷ್ಟಕ್ಕಿಂತ ಹೆಚ್ಚು ಅವಲಂಬಿಸಿ ಕೂಡ್ರಬಾರದು. ಶಾಸ್ತ್ರ ಇಲ್ಲವೇ ಗುರುಗಳನ್ನು ಸಾಧಕನು ಸಾಧನ ರೂಪದಲ್ಲಿ ಉಪಯೋಗಿಸತಕ್ಕದ್ದು. ಅವುಗಳಿಗೆ ಗುಲಾಮನಾಗಿ ಅಂಟಿಕೊಂಡು ಕುಳಿತರೆ ಧ್ಯೇಯವು ಒಂದು ಕಡೆಗೆ ಉಳಿಯುವದು; ಸಾಧಕನು ಮತ್ತೊಂದು ಕಡೆಗೆ ಉಳಿಯುವನು. ಆದುದರಿಂದ, ತನ್ನ ಉದ್ದೇಶವು ಆತ್ಮಸಾಧನವೆಂಬುದನ್ನು ಎಂದಿಗೂ ಮರೆಯಲಾಗದು. ಶಾಸ್ತ್ರ, ಉತ್ಸಾಹ, ಮತ್ತು ಗುರುಗಳ ವಿಷಯಕ್ಕೆ ಸ್ವಲ್ಪ ವಿಚಾರಿಸಿದ ಬಳಿಕ "ಕಾಲ"ದ ಬಗ್ಗೆಯೂ ಒಂದು ಸಂಗತಿಯನ್ನು ಧ್ಯಾನದಲ್ಲಿಡುವದು ಅವಶ್ಯವಿದೆ. ಕಾಲವು ಸಾಧಕನ ತೀವ್ರತೆಯನ್ನು ಅವಲಂಬಿಸಿಕೊಂಡಿದೆ. ಕಾಲವೆಂಬ ರಂಗಭೂಮಿಯ ಮೇಲೆ ಪರಿಸ್ಥಿತಿಯು ನಾಟಕ ಮಾಡುತ್ತಿರುತ್ತದೆ. ಸಾಧಕನು ಶಾಸ್ತ್ರೋಕ್ತ ರೀತಿಯಿಂದ ಸಾಧನೆಯಲ್ಲಿ ತೊಡಗಿದ್ದರೆ, ಕ್ರಮವಾದ ಮೆಟ್ಟಲುಗಳಿಂದ ಉನ್ನತಿಯಾಗುತ್ತ ಹೋಗುವದು. ಇಲ್ಲದಿದ್ದರೆ ಜನ್ಮ-ಮರಣಗಳ ಕಣಿವೆಯಲ್ಲಿ ಸಹ ಹಾದು ಹೋಗಿ, ಸತತವಾಗಿ ಕಾರ್ಯವನ್ನು ಮಾಡಬೇಕಾಗಿರುತ್ತದೆ.

ಯೋಗದ ಸಾಧ್ಯವು ಇನ್ನೊಂದು ರೀತಿಯಿಂದ ಹೇಳುವದಿದ್ದರೆ, ದಿವ್ಯದೃಷ್ಟಿಯನ್ನು ತಂದುಕೊಳ್ಳುವದಿರುತ್ತದೆ. ಅಹಂಕಾರ, ಮತ್ತು ವಿಷಯವಾಸನೆಗಳಂಥ ಹೀನ ಭಾಗಗಳನ್ನು ತೆಗೆದು ಹಾಕುವದಾಗಿರುತ್ತದೆ. ತನ್ನನ್ನು ಪರಮೇಶನ ಅಡಿದಾವರೆಗಳಲ್ಲಿ ಸಮರ್ಪಿಸಿಕೊಂಡು ಸ್ವಾತಂತ್ರವನ್ನು

ಪಡೆಯುದಿರುತ್ತದೆ. ಎಲ್ಲರಲ್ಲಿಯೂ ಪರಮೇಶ್ವರನನ್ನೂ, ಪರಮೇಶ್ವರನಲ್ಲಿ ಎಲ್ಲರನ್ನೂ ಕಾಣುವದಿರುತ್ತದೆ.

**"ಜೀವನವೇ ಯೋಗ ಕ್ಷೇತ್ರ"** (ಆರ್ಯ ಸಂಪುಟ; ಪುಟ 493) ಎನ್ನುವದು ಮಹರ್ಷಿ ಅರವಿಂದರ ಮತವಿದೆ. ಈಗ ವಿಶ್ವದ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣನಾದ ಆ ಸರ್ವೇಶ್ವರನ ಇಚ್ಛೆಯ ವಿರುದ್ಧವಾಗಿ ಒಂದು ಹುಲ್ಲು ಕಡ್ಡಿಯೂ ಸಹ ಅಲುಗಾಡುವಂತಿಲ್ಲ. ಆಯಾ ಕಾಲಕ್ಕೆ ಬೇಕಾದುದನ್ನು ಆತನೇ ಉಂಟು ಮಾಡುವನೆಂದು ಇವರು ಸಾರಿ ಹೇಳುತ್ತಾರೆ. ಮನುಷ್ಯರನ್ನು ಸೃಷ್ಟಿಸಿದವನೂ ದೇವರು: ಆತನು ವಿದ್ಯೆಯನ್ನೂ, ಶರೀರವನ್ನೂ, ಅದ್ಭುತ ಪರಾಕ್ರಮಶಾಲಿಯಾದ ಇಚ್ಛಾಶಕ್ತಿಯನ್ನೂ ಕೊಟ್ಟಿದ್ದಾನೆ. ಇವುಗಳನ್ನು ದಯಪಾಲಿಸಿರುವದರಲ್ಲಿ ಆತನ ಅಂತಸ್ಥ ಹೇತುವೇಣಿರಬಹುದು? ಇಡೀ ಆಯುಷ್ಯವನ್ನು ಈ ಕ್ಷುದ್ರ ಸಂಸಾರವನ್ನು ಅಹಂಕಾರ ಮಮಕಾರಗಳಿಗೆ ಒಳಗಾಗಿ ಮಾಡುವದಕ್ಕೆ ಕೊಟ್ಟಿರಬಹುದೇ? ಹಾಗಾದರೆ ಜಗದೀಶನ ಇಚ್ಛೆಯ ವಿರುದ್ಧವಾಗಿ ಆತನು ದಯಪಾಲಿಸಿದ ಅಮೌಲ್ಯ ಶಕ್ತಿಗಳನ್ನು ಮಾಡಿಕೊಂಡು ಹೊಟ್ಟೆ ಹೊರೆಯುದರಲ್ಲಿ ಉಪಯೋಗಿಸಿಕೊಳ್ಳುವ ಮೂಢರಿಗೆ ಏನು ಹೇಳಬೇಕು? ಶ್ರೀ ಅರವಿಂದ ಯೋಗಿಗಳು ಸೌ. ಮೃಣಾಲಿನೀ ದೇವಿಯವರಿಗೆ ಬರೆದ ಒಂದು ಪತ್ರದಲ್ಲಿ ಹೇಳಿರುವದೇನೆಂದರೆ, "ನನಗೆ ದೇವರು ದಯಪಾಲಿಸಿದ ಬುದ್ಧಿಯನ್ನೂ, ಪ್ರತಿಭೆಯನ್ನೂ, ಸಂಪತ್ತನ್ನೂ ನನ್ನ ಸ್ವಂತಕ್ಕಾಗಿಯೇ ಉಪಯೋಗಿಸಿಕೊಳ್ಳಲಿಕ್ಕೆ ಎಳ್ಳಷ್ಟೂ ಅಧಿಕಾರವಿಲ್ಲ. ಯಾವ ದಯಾಘನನು ಇವುಗಳನ್ನು ಪ್ರೇಮದಿಂದಲೇ ನನಗೆ ಕೊಟ್ಟಿರುವನೋ, ಆತನ ಪರವಾಗಿಯೇ ಅವುಗಳ ಉಪಯೋಗವನ್ನು ಮಾಡುವದು ನನ್ನ ಕರ್ತವ್ಯವಾಗಿದೆ!. ಬಡಬಗ್ಗರು ಉಪವಾಸದಿಂದ ಒರಲುತ್ತಿರಲು ಚೈನಿಗಾಗಿ ಸಂಪತ್ತು ಸಂಗ್ರಹಿಸಿದರೆ ನನ್ನ ಪಾಲಿಗೆ ಕಳ್ಳತನದ ದೋಷವು ಬಾರದೆ ಎಂದೂ ನಿಲ್ಲದು." ಆಹಹಾ! ಎಷ್ಟು ಉದಾತ್ತ ವಿಚಾರಗಳಿವು!. ಆಚಾರ ವಿಚಾರಗಳಲ್ಲಿ ಪವಿತ್ರತಮರಾಗಿರುವ ಇಂಥ ಮಹಾತ್ಮರಿಗೆ ದೇವರು ದರ್ಶನವನ್ನು ಕೊಡದಿದ್ದರೆ ಮತ್ತಾರಿಗೆ ಪ್ರಸನ್ನನಾಗಬೇಕು? ಯೋಗಿಯಾಗಲಪೇಕ್ಷಿಸುವವನು ಈ ರೀತಿಯಾಗಿ ಆತ್ಮಯಜ್ಞವನ್ನು ಮಾಡಿದರೆ ಆತನಿಗೆ ಆತ್ಮಸಿದ್ಧಿ ಆಗಲೇಬೇಕು.

ಮನುಷ್ಯನಿಗೆ ಇರುವ ಇಂದ್ರಿಯಗಳಿಂದ ಸತ್ಯಜ್ಞಾನವಾಗುವದೇ ಇಲ್ಲ. ಅದುದರಿಂದ ನಿರ್ವಿಕಾರಿಯಾಗಿ ಅಂತರ್ಜ್ಞಾನವನ್ನು ಜಾಗೃತಪಡಿಸಿಕೊಂಡು ತದ್ವಾರವಾಗಿ ಆಚರಿಸಬೇಕು. ತನ್ನನ್ನು ವಿಶ್ವಸಂರಕ್ಷಕನ ಪಾದದಲ್ಲಿ

ಸಮರ್ಪಿಸಿಕೊಳ್ಳಬೇಕು. ಆತನಲ್ಲಿ ಲೀನವಾಗಬೇಕು. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎನ್ನುವ ಭಗವದುಕ್ತಿಯಂತೆ ಆಚರಿಸಬೇಕು. ಈ ಅವಸ್ಥೆಯಲ್ಲಿ ಮನುಷ್ಯನಿಗೆ ಆತನ ಸ್ವಂತದ ಇಚ್ಛೆ ಪ್ರವೃತ್ತಿಗಳೇನೂ ಉಳಿದಿರುವದಿಲ್ಲ. ಪರಮೇಶ್ವರನ ಇಚ್ಛೆಗಳೇ ಆತನ ಇಚ್ಛೇಯಾಗಿರುತ್ತವೆ: ಪರಮೇಶ್ವರನ ಕಾರ್ಯವೇ ಆತನ ಕಾರ್ಯವೂ ಆಗಿರುತ್ತದೆ. ಈ ಅವಸ್ಥೆಯೊಳಗಿನ ಪುರುಷನಿಗೆ ಯಾವ ಪ್ರಕಾರದ ಕರ್ತವ್ಯವು ಪ್ರಾಪ್ತವಾದರೂ ಅದು ಪರಮೇಶನದೇ ಆಗಿರುವದರಿಂದ, ಅದರಲ್ಲಿ ಆನಂದವನ್ನು ಅನುಭವಿಸಲಿಕ್ಕೆ ಸಿಗುತ್ತದೆ. ಈ ಸ್ಥಿತಿಯೆಂದರೆ ಆನಂದವೇ ಆನಂದವಾಗಿದೆ; ಸದಾನಂದವಾಗಿದೆ; ಸಚ್ಚಿದಾನಂದವಾಗಿದೆ. ಇದೇ ಬ್ರಾಹ್ಮೀ ಸ್ಥಿತಿಯೂ ಹೌದು; ಇದೇ ಸ್ಥಿತಿ ಪ್ರಜ್ಞಾವಸ್ಥೆಯು.ಈ ಅವಸ್ಥೆಯನ್ನು ಸಂಪಾದಿಸಿಯೇ ಕರ್ಮವನ್ನು ಮಾಡಬೇಕೆಂದು ಗೀತೆಯೂ ಹೇಳುತ್ತದೆಂದು ಮಹರ್ಷಿಗಳು ತಮ್ಮ **"ಗೀತಾ ಪ್ರಬಂಧಗಳು"** ಎನ್ನುವ ನಿಬಂಧಮಾಲೆಯಲ್ಲಿ ಪ್ರತಿಪಾದಿಸಿದ್ದಾರೆ. ವೇದದ ಅರ್ಥವನ್ನು ಮಾಡಿಕೊಳ್ಳಲಿಕ್ಕೆ ಇಲ್ಲಿಯವರೆಗೂ ಮೂರು ಸಾರೆ ಪ್ರಯತ್ನಗಳಾದವು. ಇವುಗಳಲ್ಲಿ **ಉಪನಿಷತ್ತುಗಳು ಮೊದಲನೇಯದು**;ಅದು ಸರಿಯಾಗಿಯೇ ಇತ್ತು. ಆದರೆ ಮುಂದಿನ ಎರಡು ಪ್ರಯತ್ನಗಳಲ್ಲಿ ತಪ್ಪು ಕ್ರಮಗಳು ನುಸುಳಿದ್ದರಿಂದ, ಆ ರೀತಿಯಲ್ಲಿ ಅರ್ಥೈಸಿಕೊಳ್ಳಲು ಹೊರಟವರಿಗೆ ಸರಿಯಾಗಿ ಅರ್ಥವಾಗಲಿಲ್ಲ. ಸಾಯಣಾಚಾರ್ಯರು ಮತ್ತು ಅವರ ಅನುರೋಧದಿಂದ ಅರ್ಥಮಾಡಿಕೊಳ್ಳಲಿಕ್ಕೆ ಹವಣಿಸಿದ ಪಾಶ್ಚಿಮಾತ್ಯ ಪಂಡಿತರೂ ವೇದಗಳ ಮರ್ಮವನ್ನೇ ತಿಳಿಯಲಿಲ್ಲವೆಂದು ಮಹರ್ಷಿಗಳು ಸ್ಪಷ್ಟವಾಗಿ ತಿಳಿಸುತ್ತಾರೆ. ವೇದಗಳಲ್ಲಿ ಏನಾದರೂ ಹುಚ್ಚು ಕಲ್ಪನೆಗಳು ತುಂಬಿರುವವೆಂದೂ, ಯಜ್ಞಯಾಗಾದಿ ಕರ್ಮಗಳನ್ನು ಕುರಿತು ಋಚೆಗಳು ಉಂಟೆಂದೂ ಅನೇಕರು ತಪ್ಪು ಗ್ರಹಿಕೆ ಮಾಡಿಕೊಂಡಿದ್ದಾರೆ. ವ್ಯಂಗ್ಯಾರ್ಥದಲ್ಲಿ ಬರೆದ ಈ ಪವಿತ್ರ ಗ್ರಂಥಗಳನ್ನು ಯಾರೂ ಸರಿಯಾಗಿ ತಿಳಕೊಳ್ಳಲಿಲ್ಲ. ಇದರಲ್ಲಿ ಅಗ್ನಿ, ವಾಯು ರೂಪಕಗಳಿಂದ ತತ್ತ್ವಜ್ಞಾನದ ಚರ್ಚೆಯೇ ಹೇಗೆ ಮಾಡಲ್ಪಟ್ಟಿದೆ ಎನ್ನುವದನ್ನು ಉದಾಹರಣ ಸಹಿತವಾಗಿ "ಆರ್ಯ" ಮಾಸಿಕ ಪುಸ್ತಕದಲ್ಲಿ ಗಂಭೀರ ರೀತಿಯಿಂದ ಚರ್ಚಿಸಿದ್ದಾರೆ.

ಮಹರ್ಷಿಗಳು ಸನಾತನ ಧರ್ಮದ ಅಭಿಮಾನಿಗಳಾಗಿದ್ದಾರೆ. ಹಾಗೂ ಈ ಸನಾತನ ಧರ್ಮವನ್ನು ಜಗತ್ತಿಗೆ ಕೊಡುವದೇ ಹಿಂದುಸ್ತಾನದ ಈಶನಿಯಮಿತ ಕಾರ್ಯವಿರುತ್ತದೆಂದೂ ಅವರು ತಮ್ಮ ದಿವ್ಯ ದೃಷ್ಟಿಯಿಂದ ಕಂಡು ಹಿಡಿದಿದ್ದಾರೆ. ಬ್ಯಾಭಿಲೋನಿಯಾ, ಖಾಲ್ಡಿಯಾ, ಗ್ರೀಸಗಳಂಥ ಹಲವು ರಾಷ್ಟ್ರಗಳು–ಸಂಸ್ಕೃತಿಗಳು

ಹೇಳ ಹೆಸರಿಲ್ಲದಂತೆ ಆಗಿ ಹೋದವು. ಆದರೆ ಅತಿ ಪುರಾತನ ಕಾಲದಿಂದ ಭರತಖಂಡವೇ ತಲೆ ಎತ್ತಿಕೊಂಡು ಅನೇಕ ರಾಷ್ಟ್ರಗಳ ಉದಯಾಸ್ತಮಾನಗಳನ್ನು ನೋಡುತ್ತ ಇನ್ನೂ ನಿಂತಿರುವ ಉದ್ದೇಶವೇನಿರಬಹುದು? ಜಗತ್ತಿಗೆ ಧರ್ಮವನ್ನು ಕೊಡುವ ಏಶಿಯಾ ಖಂಡದ – ಅಲ್ಲ ಭರತ ಖಂಡದ ಪಾಲಿಗೆ ಬಂದ ಕರ್ತವ್ಯವಿರುತ್ತದೆ. ಯಾಕೆಂದರೆ, ಹಿಂದಕ್ಕೆ ಈ ಕಾರ್ಯವನ್ನು ಎರಡು ಸಾರೆ ಭರತ ಖಂಡವೇ ಜರುಗಿಸಿದೆ. ಕ್ರಿಸ್ತೀ ಧರ್ಮದ ಉತ್ಪತ್ತಿಗೆ ಕಾರಣವಾದ ಬೌದ್ಧ ಧರ್ಮವನ್ನೂ, ಅದಕ್ಕೂ ಮುಂಚೆ ಒಮ್ಮೆ ವೈದಿಕ ಧರ್ಮವನ್ನೂ ಹಿಂದುಸ್ಥಾನವೂ ಜಗತ್ತಿಗೆ ಕೊಟ್ಟಿತೆಂದು ಇತಿಹಾಸವು ಹೇಳುತ್ತಿದೆ. ಇದಕ್ಕೆ ಪ್ರತಿಯಾಗಿ ಭೌತಿಕ ಐಶ್ವರ್ಯದ ಪಾಶ್ಚಿಮಾತ್ಯರ ದಾಳಿಗಳು ಹಿಂದುಸ್ತಾನದ ಮೇಲೆ ಬಂದವು. ಸಿಕಂದರನ ದಾಳಿಯು ಈ ಮಾತಿಗೆ ಸಾಕ್ಷಿಯಾಗಿದೆ. ಅದರಂತೆ ಯುರೋಪಿಯನ್ನರು ತಮ್ಮ ಸಂಸ್ಕೃತಿಯನ್ನು ನಮ್ಮ ಮೇಲೆ ಹೇರಲಿಕ್ಕೇ ಬಂದಿದ್ದಾರೆ. ಜಗತ್ತಿಗೆ ಸನಾತನ ಧರ್ಮದ ಉಪದೇಶವನ್ನು ಇಡೀ ಮಾನವ ಕುಲವು ಸುಖವಾಗಿರುವಂತೆ ಮಾಡುವದೇ ಭಾರತೀಯರ ಕರ್ತವ್ಯವಾಗಿದೆ. ಕನ್ಯಾಗತದಲ್ಲಿ ಭಾಗೀರಥಿಯು ಕೃಷ್ಣೆಗೆ ಬರುವಳಂತೆ. ಈಗ ಪೂರ್ವ ಪಶ್ಚಿಮ ಸಂಸ್ಕೃತಿಗಳೆಂಬ ಭಾಗೀರಥಿ–ಕೃಷ್ಣೆಯಗಳ ಸಂಯೋಗದ ಯೋಗವು ಬಂದಿದೆ. ದಿವ್ಯ ಧರ್ಮಗಳು ಈ ಮಾತಿಗೆ ಸಾಕ್ಷಿಯಾಗಿವೆ. ಈ ಧರ್ಮದ ನಿಜವಾದ ಅನುಯಾಯಿಗಳು ನೂರಿನ್ನೂರಾದರೂ ಸಿಕ್ಕಬಹುದೇನೋ ಎನ್ನುವ ಸಂಶಯವಿದೆ. ಹಿಂದುಸ್ಥಾನದಲ್ಲಿ ಸಂದಿಗೊಂದಿಗಳಲ್ಲಿ ಹಬ್ಬಿ, ಹೆಚ್ಚಾಗಿ ಇತರ ಜಗತ್ತನ್ನೂ ವ್ಯಾಪಿಸಿದ ಬೌದ್ಧ ಧರ್ಮವು ಇಂದಿಗೆ ಹಿಂದುಸ್ಥಾನದಲ್ಲಿಯೇ ನಾಮಶೇಷವಾಗಿದೆ. ಆದರೆ ಸನಾತನ ಧರ್ಮವು ಮಾತ್ರ ಎಷ್ಟೊಂದು ಧಕ್ಕೆಗಳನ್ನು ತಿಂದೂ ಇಂದಿಗೂ ಹಾಗೇ ಇದೆ. ಅದರ ಶುದ್ಧ ಸ್ವರೂಪದ ಒಂದು ತತ್ತ್ವವೂ ಬದಲಾಗಿಲ್ಲ. ಆದರೆ ಅನುಯಾಯಿಗಳು ಮಾತ್ರ ಅಸದ್ವರ್ತನದಿಂದ ಅದಕ್ಕೆ ತಾತ್ಪೂರ್ತಿಕವಾದ ಮಾಲಿನ್ಯವನ್ನು ತಂದರೆ ಅದಕ್ಕೆ ಯಾವ ಉಪಾಯವಿದೆ? ಬೌದ್ಧ, ಕ್ರಿಸ್ತೀ ಧರ್ಮಗಳಂತೆ ಬಹುಜನ ಸಮಾಜಕ್ಕೆ ಆಚರಿಸಲಿಕ್ಕೆ ಅವ್ಯವಹಾರ್ಯವಾದ ಧರ್ಮವು ಮಾತ್ರ ಇದಲ್ಲ. ಸನಾತನ ಧರ್ಮದ ಹೊಟ್ಟೆಯಲ್ಲಿ ಇಂದಿಗೆ ಅಸ್ತಿತ್ವದೊಳಗೆ ಇರುವ ಎಲ್ಲ ಪ್ರಕಾರದ ಧಾರ್ಮಿಕ ಗ್ರಂಥಗಳೂ ಸೇರುತ್ತವೆ. ಇದು ಇಷ್ಟೊಂದು ವಿಶಾಲವಾಗಿದೆ. ಬೌದ್ಧ, ಕ್ರಿಸ್ತ ಮುಂತಾದ ಧರ್ಮಗಳು ಆರ್ಯ–ಧರ್ಮದೊಳಗಿನ ಒಂದೊಂದು ಸಣ್ಣ–ಪುಟ್ಟ ತತ್ವದ ಮೇಲೆ ನಿಂತಿವೆ! ಮಾನವ ಜಾತಿಗೆ ಆಚರಿಸಲಿಕ್ಕೆ ಇದೊಂದೆ ತಕ್ಕದ್ದಾಗಿದೆ. ಅಂತೇ ಮಹರ್ಷಿ ಅರವಿಂದ

ಘೋಷರು ಈ ವೇದ–ನಿಕ್ಷಿಪ್ತ ಧನವನ್ನು ಧರ್ಮದ ಸಲುವಾಗಿ ಹಲಬುತ್ತಿರುವ ಜಗತ್ತಿಗೆ ಕೊಟ್ಟು, ಇಲ್ಲರನ್ನೂ ಸುಖಿಯಾಗಿ ಮಾಡಬೇಕೆಂದು ಅನ್ನುತ್ತಿರುವರು. ಮಹರ್ಷಿಗಳ ಸನಾತನ ಧರ್ಮದ ಕಲ್ಪನೆಯು ಇತ್ತಿತ್ತಲಾಗಿ ಲೋಕರೂಢಿಯಲ್ಲಿರುವ ಅಸಡ್ಡಾಳ ಕಲ್ಪನೆಗಳಿಗಿಂತ ತೀರ ಭಿನ್ನವಾದದ್ದೂ ಉದಾತ್ತವಾದದ್ದೂ ಇದೆಯೆಂದು ಬೇರೆ ಹೇಳಬೇಕಾಗಿಲ್ಲ. ಮಹರ್ಷಿಗಳು ಒಮ್ಮೆ, "ನಾನು ಹಿಂದುಸ್ತಾನದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಂಗತಿಗಳನ್ನೆಲ್ಲವ ಹೊಸ ವಿಸ್ತೃತ ಅಸ್ತಿವಾರದ ಮೇಲೆ ಕಟ್ಟತಕ್ಕವನಿದ್ದೇನೆ" ಎಂದು ತಿಳಿಸಿದ್ದಾರೆ.

ಜಗತ್ತಿಗೆ ಧರ್ಮವನ್ನು ಕೊಡುವ ಕೆಲಸವನ್ನು ಮಾಡಲಿಕ್ಕೆ ಹಿಂದುಸ್ತಾನಕ್ಕೆ ಸ್ವಾತಂತ್ರ್ಯವು ಬೇಕು. ಸ್ವತಂತ್ರ ಹಿಂದುಸ್ತಾನವು ಮಾತ್ರ ಈ ಕಾರ್ಯಕ್ಕೆ ಸಮರ್ಥವಾದೀತು. ಪರಾವಲಂಬಿಯೂ ಹೀನಮನಸ್ಕವೂ ಆದಂಥ ಹಿಂದುಸ್ತಾನವು ಎಂದಿಗೂ ಸಮರ್ಥವಾಗಲಾರದು. ಆದ್ದರಿಂದ ಭರತ ಖಂಡದ ಸ್ವಾತಂತ್ರ್ಯಾರ್ಥವಾಗಿ ಪ್ರಯತ್ನಿಸುವದು ಮೊದಲನೆ ಕೆಲಸವು. ದೇಶದಲ್ಲಿ ದೇಶಾಭಿಮಾನದ ದೊಡ್ಡ ತೆರೆಯುಂಟಾಗಿ, ಅದರಲ್ಲಿ ನಾನಾ ಜಾತಿಗಳೂ, ಪಂಥಗಳೂ ಏಕತ್ರವಾಗಿ ಕಾರ್ಯ ಮಾಡಲಿಕ್ಕೆ ಈಶ ಪ್ರೇರಣೆಯೇ ಮೂಲ ಕಾರಣವೆಂದು ಶ್ರೀ ಅರವಿಂದ ಯೋಗಿಗಳು ಹೇಳಿದ್ದಾರೆ. ಪರತಂತ್ರ ರಾಷ್ಟ್ರವು ಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳುವ ಮಾರ್ಗಗಳು ಮೂರು. **ಒಂದು ಸ್ವಾವಲಂಬನ;** ಎರರಡನೆಯದು **ಭಿಕ್ಷೆ ಬೇಡಿ ಪಡೆದುಕೊಳ್ಳುವದು** – ಅಂದರೆ, ಸಾಮ್ರಾಜ್ಯ ಸರಕಾರದ ಕೃಪೆಗಾಗಿ ಭಿಕ್ಷೆ ಬೇಡಿ, ಅವರ ಕೈಯಿಂದ ಸ್ವಲ್ಪ ಸ್ವಲ್ಪ ಪಡೆದುಕೊಳ್ಳುತ್ತಾ ಹೋಗುವದು; ಅಥವಾ ಮೂರನೇಯ ದಾರಿ ಎಂದರೆ **ಪರರಾಷ್ಟ್ರವನ್ನು ಸಹಾಯಕ್ಕೆ ಕರೆಯುವದು.**

ಸಾರ್ವಭೌಮವಾಗಿ ಆಳಲಿಕ್ಕೆಂದು ಹಲವು ತರದ ಕಷ್ಟ ಸೋಸಿ, ತಮ್ಮ ಅನೇಕ ಸೈನಿಕರ ರಕ್ತವನ್ನು ಖರ್ಚು ಮಾಡಿ ದೇಶವನ್ನು ಗೆದ್ದ ಸರಕಾರದವರು ಸುಮ್ಮಸುಮ್ಮನೇ ತಮ್ಮ ಕೈಯೊಳಗಿನ ಅಧಿಕಾರವನ್ನು ಬಿಟ್ಟುಕೊಡುತ್ತಾರೆಯೇ? ಜನರು ಸುಮ್ಮನೇ ಹೆಚ್ಚು ಗದ್ದಲ ಮಾಡಹತ್ತಿದರೆ, ಏನೋ ಸ್ವಲ್ಪ ಕೊಟ್ಟಂತೆ ಮಾಡಿ ಅವರನ್ನು ಸುಮ್ಮನೆ ಕೂಡ್ರಿಸುವದಕ್ಕೆ ಆ ವಿಜಯಿಗಳು ಪ್ರಯತ್ನಪಡುವದು ಸ್ವಾಭಾವಿಕವಾಗಿದೆ. ಆದರೆ ಇದರಲ್ಲಿ ಆಳುವ ಜನಾಂಗದ ಕೈಯಿಂದ ತಮಗೆ ಸ್ವಾತಂತ್ರ್ಯವು ಸಿಕ್ಕೀತೆಂದು ನಂಬಿಕೊಂಡು ಕುಳಿತವರ ಮೂರ್ಖತನವು ಮಾತ್ರ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ವಿಚಾರಿಸಿದರೆ ಹಿಂದುಸ್ತಾನದವರಿಗೆ ಯಾಚನೆಯು ನಿರುಪಯುಕ್ತವೆಂದು ನಿರ್ಣಿತವಾಯಿತು. ಇನ್ನು ಪರಚಕ್ರದ

ಸಹಾಯ ತಕ್ಕೊಳ್ಳುವ ಉಪಾಯದ ವಿಷಯಕ್ಕೆ ವಿಚಾರಿಸಿದರೆ ಅದೂ ಆತ್ಮಘಾತುಕ ಉಪಾಯವೆಂದು ಗೊತ್ತಾಗುತ್ತದೆ. ಯಾಕೆಂದರೆ ಪರರನ್ನು ಮನೆಯಲ್ಲಿ ತಂದು, ಈಗ ಇದ್ದವರನ್ನು ಹೊರಹಾಕುವದರಲ್ಲಿ ಆ ಹೊಸ ಗಂಡ(ಶೂರ)ನೇ ಗಂಟಲಕ್ಕೆ ಕುಳಿತರೆ, ಮಳೆಯ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದ ಹಾಗೆ ಆಗುತ್ತದೆ. ಉಳಿದವರಿಗಿಂತ ಈ ಬ್ರಿಟೀಶರೇ ನೆಟ್ಟಗಿದ್ದಾರೆ.

ಇನ್ನು ಉಳಿದದ್ದು ಎಂದರೆ, **ಸ್ವಾವಲಂಬನದ ಮಾರ್ಗ**. ಇದರಲ್ಲಿ **ಎರಡು ಪ್ರಕಾರಗಳಿವೆ. ಸಶಸ್ತ್ರವು ಮತ್ತು ನಿಶಸ್ತ್ರವು.** ಸಶಸ್ತ್ರ ಪ್ರತಿಕಾರವು ಆಧುನಿಕ ಹಿಂದುಸ್ತಾನಕ್ಕೆ ಉಪಯುಕ್ತವಲ್ಲ. ಆದುದರಿಂದ ಅಂತೂ ಉಳಿದಿರುವದೇನೆಂದರೆ ನಿಶಸ್ತ್ರ ಪ್ರತಿಕಾರವಾಗಿದೆ. 1906 ರಲ್ಲಿ ಕಲಕತ್ತೆಗೆ ರಾಷ್ಟ್ರೀಯ ಸಭೆಯಲ್ಲಿ ವೀರಪಕ್ಷದವರು ಸ್ವರಾಜ್ಯವನ್ನು ಸಂಪಾದಿಸುವ ಮಾರ್ಗವೆಂದು **ಮೂರು ಸಾಧನಗಳನ್ನು ಹೇಳಿದರು. ರಾಷ್ಟ್ರೀಯ ಶಿಕ್ಷಣ, ಸ್ವದೇಶಿ ಬಳಕೆ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರ**.

ಈ ಬಹಿಷ್ಕಾರದ ವಿವರಣೆಯನ್ನು ಮಾಡುವಾಗ ಶ್ರೀ ಅರವಿಂದ ಯೋಗಿಗಳು ಕರ್ಮಯೋಗಿನ್ ಪತ್ರಿಕೆಯ ಒಂದು ಸಂಚಿಕೆಯಲ್ಲಿ ಇವೆಲ್ಲವನ್ನೂ ಸರಸವಾಗಿ ವಿವರಿಸಿದ್ದಾರೆ. ಮತ್ತು ಬಹಿಷ್ಕಾರದ ವ್ಯಾಪ್ತಿಯನ್ನು ಶಾಲೆ, ಕೋರ್ಟು-ಕಛೇರಿಗಳವರೆಗೆ ಬೆಳೆಸಿ, ಈಗಿನ ಅಸಹಯೋಗದ(ಅಸಹಕಾರದ) ಕಲ್ಪನೆಯನ್ನೇ 12 ವರ್ಷಕ್ಕೂ ಮೊದಲೇ ಸಂಪೂರ್ಣವಾಗಿ ಪ್ರತಿಪಾದಿಸಿದ್ದಾರೆ. ಆತ್ಮ ಸಾಮರ್ಥ್ಯವನ್ನು ದೊರಕಿಸದಿದ್ದರೆ ಯಾವುದೂ ಸಾಧ್ಯವಾಗುವದಿಲ್ಲ. **"ನಾಯಮಾತ್ಮಾ ಬಲಹೀನೇನ ಲಭ್ಯಃ"**. ಸ್ವದೇಶಿ ವಸ್ತುಗಳನ್ನೇ ಉಪಯೋಗ ಮಾಡಿರಿ, ಸಾಮರ್ಥ್ಯ ಬೆಳೆಸಿಕೊಳ್ಳಿರಿ. ಮಾತು ಸ್ವದೇಶಿ, ಉಡಿಗೆ-ತೊಡುಗೆ ಸ್ವದೇಶಿ, ಹೀಗೆ ಪ್ರತಿಯೊಂದು ವಿಷಯದಲ್ಲಿ ಸ್ವದೇಶೀ ವ್ರತದ ಆಚರಣವು ಬೇಕೆಂದು ಶ್ರೀ ಅರವಿಂದ ಯೋಗಿಗಳು ಪ್ರತಿಪಾದಿಸಿದ್ದಾರೆ.

ಮಹಾತ್ಮಾ ಗಾಂಧೀಯವರು ಮಹರ್ಷಿಗಳ ಅರ್ಧ ಕಾರ್ಯವನ್ನು ಈಗ ಮಾಡಿಟ್ಟಿದ್ದಾರೆ. ನಾಳೆ ಶ್ರೀ ಅರವಿಂದ ಯೋಗಿಗಳು ತಮ್ಮ ಅದ್ಭುತ ಕಾರ್ಯವನ್ನು ಮಾಡಲಿಕ್ಕೆ ಬರತಕ್ಕವರಿದ್ದಾರೆ. ಮಹಾತ್ಮ ಕಾರ್ಯಗಳಿಗೆ ಉಪಯುಕ್ತರಾಗುವಂತೆ ಜಗಚ್ಚಾಲಕ ಭಗವಂತನ ಚರಣ ಕಮಲಗಳಲ್ಲಿ ಆಯುಷ್ಯವನ್ನು ಅರ್ಪಿಸಿ, ನಿಷ್ಕಾಮ ಬುದ್ಧಿಯಿಂದ ಕಾರ್ಯ ಮಾಡಲಿಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುವದೇ ಬಹುಜನ ಸಮಾಜದ ಕರ್ತವ್ಯವಾಗಿದೆ ಅಲ್ಲವೇ?

(ಸಶೇಷ)

# "ಶ್ರೀ ಅರವಿಂದರು–150"

ಸಾಧಕರ ಪರಿಚಯ – 2

## ಪೂರ್ಣಯೋಗದ ಮಹಾಪಥಿಕ ಮಧುರಚೆನ್ನರು

**– ಡಾ॥ ಎಸ್.ಕೆ. ಕೊಪ್ಪಾ, ಇಂಡಿ (ವಿಜಯಪುರ)**

**[ಶ್ರೀ ಅರವಿಂದರ 150 ನೇ ಜನ್ಮ ವರ್ಷದ ನಿಮಿತ್ತವಾಗಿ, ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಅನುಯಾಯಿಗಳಾಗಿ, ಕನ್ನಡ ಭಾಷೆಯಲ್ಲಿಯೂ ಸಹಿತ ಮಹತ್ವಪೂರ್ಣ ಪಥವನ್ನು ನಿರ್ಮಿಸಿದವರಲ್ಲಿ ಶ್ರೀ ಮಧುರಚೆನ್ನರು ಪ್ರಥಮ ಸ್ಥಾನದಲ್ಲಿ ಇರುವರು. ಅವರು ನಿರ್ಮಿಸಿದ ಪಥದಲ್ಲಿ ಈಗಲೂ ಸಾಧನೆಯನ್ನು ಮುಂದುವರೆಸಿಕೊಂಡು, ಅದಕ್ಕೊಂದು ಸಂಸ್ಥಾಸ್ವರೂಪವನ್ನೇ ರೂಪಿಸಲಾಗಿದೆ. ಸಾಧಕರ ಪರಿಚಯ ಸರಣಿಯಲ್ಲಿ ಶ್ರೀ ಎಂ.ಪಿ.ಪಂಡಿತರದು "ಜ್ಞಾನ ಮಾರ್ಗ"ವಾದರೆ ಶ್ರೀ ಮಧುರಚೆನ್ನರದು "ಭಕ್ತಿ ಮಾರ್ಗ". ಅದರಲ್ಲೂ ಶ್ರೀ ಅರವಿಂದರಿಂದ ರೂಪಿಸಲ್ಪಟ್ಟಿರುವ "ಪೂರ್ಣಯೋಗ"ವನ್ನು ಅನುಷ್ಠಾನಗೊಳಿಸಕೊಂಡು ಸಾಧನಾ ಪಥದಲ್ಲಿ ಸಾಗಿರುವ ಶ್ರೀ ಮಧುರಚೆನ್ನರ ಕುರಿತು ಈ ಲೇಖನವಿದೆ. ಇದೇ ರೀತಿಯಲ್ಲಿ 150 ನೇ ವರ್ಷದ ಅವಧಿಯಲ್ಲಿ, ಇನ್ನುಳಿದ ಸಾಧಕರ ಪರಿಚಯವನ್ನೂ ರೂಪಿಸಲು 'ಅಖಿಲ ಭಾರತ ಪತ್ರಿಕೆ" ಮುಂದುವರೆಸುತ್ತದೆ. (ಸಂ)]**

ನವೋದಯ ಕಾಲದ ಮಹತ್ವದ ಕನ್ನಡ ಕವಿಗಳಲ್ಲಿ **ಮಧುರಚೆನ್ನ**ರಿಗೆ ಒಂದು ವಿಶಿಷ್ಟ ಸ್ಥಾನವಿದೆ. **"ದೇವರ ಹುಡುಕಾಟ"** ಅವರ ಕಾವ್ಯ ಮತ್ತು **"ಆತ್ಮಚರಿತ್ರೆ"**ಯಲ್ಲಿ ಒಂದು ಅನನ್ಯ ಅಭಿವ್ಯಕ್ತಿಯನ್ನು ಪಡೆಯಿತು. ಮಧುರಚೆನ್ನರು ಬಾಳಿ ಬದುಕಿದ್ದು ಕೇವಲ 50 ವರ್ಷಗಳು ಮಾತ್ರ! ಈ ಅವಧಿಯಲ್ಲಿ ಅವರು **ಹಲಸಂಗಿ ಗೆಳೆಯರ ಗುಂಪ**ನ್ನು ಕಟ್ಟಿ ಬೆಳೆಸಿದರು. ತಮ್ಮ ಕೌಟುಂಬಿಕ ಕಷ್ಟ–ನಷ್ಟಗಳ ಮಧ್ಯದಲ್ಲಿಯೂ ಕಾವ್ಯ ರಚನೆ, ಸಂಶೋಧನೆ, ಜನಪದ ಸಾಹಿತ್ಯ ಸಂಗ್ರಹ, ಆತ್ಮ ಕಥನ, ಲಿಪಿಶಾಸ್ತ್ರ, ಜ್ಯೋತಿಷ್ಯ, ಅನುವಾದ ಮುಂತಾದ ವಿವಿಧ ಕ್ಷೇತ್ರಗಳಲ್ಲಿಯೂ ಕೆಲಸ ಮಾಡಿ ಕನ್ನಡ ಸಾಹಿತ್ಯ–ಸಂಸ್ಕೃತಿಗೆ ಒಂದು ಘನತೆಯನ್ನು ತಂದುಕೊಟ್ಟಿದ್ದಾರೆ.

ಪರಮಾತ್ಮನ ಶೋಧನೆಯನ್ನೇ ತಮ್ಮ ಜೀವನದ ಮುಖ್ಯ ಗುರಿಯನ್ನಾಗಿಸಿಕೊಂಡ ಮಧುರಚೆನ್ನರು ಹುಟ್ಟಿ ಬೆಳೆದುದು ಒಂದು ಕೊಂಪೆಯಂತಿದ್ದ ಹಳ್ಳಿಯಲ್ಲಿ. ಆದರೆ ಹಲಸಂಗಿಯ ನವಿಲು–ಕುಣಿತವನ್ನು, ಜುಳುಜುಳು ಹರಿಯುವ ಹಳ್ಳವನ್ನು, ನಿಸರ್ಗ ಸೌಂದರ್ಯವನ್ನು, ಲಾವಣಿಯ

ಲಾವಣ್ಯವನ್ನು ಕಂಡವರು, ಅದನ್ನು ಅಖಿಲ ಕರ್ನಾಟಕದ ದಶದಿಕ್ಕಿನಲ್ಲೂ ಪಸರಿಸಿದ ವಿಚಾರವಂತರು. ದ.ಬಾ.ಕುಲಕರ್ಣಿಯವರು ಹೇಳುವಂತೆ, "ಮಧುರಚೆನ್ನರಿರುವಷ್ಟು ಕಾಲ ಹಲಸಂಗಿಯು, ಕನ್ನಡ ವಿಚಾರವಂತರಿಗೆ ಒಂದು ಯಾತ್ರಾ ಸ್ಥಳವಾಗಿತ್ತು. ಮಧುರಚೆನ್ನರು ಹಸಂಗಿಯಲ್ಲಿ ರೂಪಿಸಿದ ಸಾಹಿತ್ಯಿಕ–ಸಾಂಸ್ಕೃತಿಕ ಮತ್ತು ಅನುಭಾವಿಕ ಎಚ್ಚರಗಳು ಅಸದೃಶವಾದುದು. ಅವರ ಸಮಕಾಲೀನ ಸಾಹಿತಿಗಳಾದ ಬೇಂದ್ರೆ, ಶಿವರಾಮ ಕಾರಂತ, ವಿ.ಕೃ.ಗೋಕಾಕ, ಎಸ್.ಎಸ್.ಮಾಳವಾಢ, ರಂ.ಶ್ರೀ.ಮುಗಳಿ ಮೊದಲಾದವರು ಹಲಸಂಗಿಯ ಕಾರ್ಯಕ್ರಮಗಳಿಗೆ ಬಂದುಹೋದುದು; ಹಲಸಂಗಿ ನೆಲದಲಿ ನಡೆದ ಬೇಂದ್ರೆ ಮತ್ತು ಮಧುರಚೆನ್ನರ 'ಸಖ್ಯಯೋಗ'ದ ಸಂಭ್ರಮಗಳು ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮರೆಯಲಾಗದ ನೆನಪುಗಳಾಗಿವೆ.

ಮಧುರಚೆನ್ನ ಎನ್ನುವದು ಅವರ ಕಾವ್ಯನಾಮ. ಅವರ ನಿಜವಾದ ಹೆಸರು ಮಲ್ಲಪ್ಪ ತಂದೆ ಸಿದ್ಧಲಿಂಗಪ್ಪ ಗಲಗಲಿ. ಅವರ ಮನೆತನದ ಹೆಸರು ಗಲಗಲಿಯಾಗಿದೆ. ಹೀಗಾಗಿ ಅವರು ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿ. ತಾಯಿ ಅಂಬವ್ವ. ಅವರು ಜನಿಸಿದ್ದು 31 ಜುಲೈ 1903. ಅವರ ಜನ್ಮಸ್ಥಳವು ಹಲಸಂಗಿ ಸಮೀಪದ ಹಿರೆಯೋಣಿ. ಇದು ಇವರ ತಾಯಿಯ ಸೋದರತ್ತೆಯ ಊರು. ಆದರೆ ಅವರು ಮುಂದೆ ಬೆಳೆದದ್ದು, ಬದುಕು ಸಾಗಿಸಿದ್ದು ಎಲ್ಲವೂ ಹಲಸಂಗಿಯಲ್ಲಿಯೇ. ಮಧುರಚೆನ್ನರು ತೀರ ಎಳೆಯ ವಯಸ್ಸಿನವರಿದ್ದಾಗಲೇ ತಂದೆಯನ್ನು ಕಳೆದುಕೊಂಡು, ತಾಯಿಯ ವಾತ್ಸಲ್ಯದಲ್ಲಿ ಬದುಕಿದರು. "ಬೆಳೆಯ ಸಿರಿ ಮೊಳಕೆಯಲ್ಲಿ ನೋಡು" ಎನ್ನುವಂತೆ, ಚಿಕ್ಕಂದಿನಿಂದಲೇ ಓದುವದರ ಕಡೆಗೆ ಹೆಚ್ಚಿನ ಆಸಕ್ತಿ, ಕಥೆ ಹೇಳುವದು–ಕೇಳುವದರಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದರು. ವಿದ್ಯಾರ್ಥಿ ಹಂತದಲ್ಲಿಯೇ ಅಚ್ಚುಕಟ್ಟಾಗಿ ಬರೆಯುವದನ್ನು ಪ್ರಾರಂಭಿಸಿದ್ದರು. ನಾಟಕದಲ್ಲಿಯೂ ಭಾಗವಹಿಸುತ್ತಿದ್ದರು. ಇವರ ವಿದ್ಯಾರ್ಥಿ ಜೀವನದ ಅಭ್ಯಾಸ ಕ್ರಮವನ್ನು ಕುರಿತು ಸಿಂಪಿ ಲಿಂಗಣ್ಣನವರು, – "ಪಠ್ಯ–ಪಠ್ಯೇತರ ಪುಸ್ತಕಗಳಿಂದ ವಿಷಯ ಸಂಗ್ರಹಿಸುವದು; ಸಂಶೋಧಕ ಬುದ್ಧಿಯಿಂದ ಪರಿಶೀಲಿಸುವದು: ತಮ್ಮದೇ ಆದ ರೀತಿಯಲ್ಲಿ ಸ್ವತಂತ್ರ ಟಿಪ್ಪಣಿಗಳನ್ನು ಸಿದ್ಧಪಡಿಸಿಕೊಳ್ಳುವದು;" – ಎಂದು ವಿವರಿಸಿದ್ದಾರೆ. ಈ ರೀತಿಯಲ್ಲಿ ಅಭ್ಯಾಸಕ್ರಮವಿರಿಸಿಕೊಂಡಿದ್ದ ಚೆನ್ನಮಲ್ಲಪ್ಪನವರು ಮುಲ್ಕಿ ಪರೀಕ್ಷೆಗೆ ಅಭ್ಯಾಸ ಮಾಡುವಾಗ ಪಠ್ಯ–ಪುಸ್ತಕಗಳನ್ನು ಅರೆದು ಕುಡಿದುಬಿಟ್ಟಿದ್ದರು. ಹತ್ತಿಪ್ಪತ್ತು

ವರ್ಷಗಳ ಪ್ರಶ್ನೆಗಳನ್ನೆಲ್ಲ ಕುಡಿಸಿ, ಅವುಗಳನ್ನೆಲ್ಲಾ ವಿಷಯಾತ್ಮಕವಾಗಿ ಬಿಡಿಸಿ ಇಟ್ಟಿದ್ದರು. ಅದೊಂದು ಹೆಬ್ಬೊತ್ತಿಗೆಯ ಸ್ವರೂಪವನ್ನೇ ತಾಳಿತ್ತು. ಮುಂಬರುವ ವಿದ್ಯಾರ್ಥಿಗಳಿಗೆ ಇದೊಂದು ಅಮೂಲ್ಯ ಆಕರ ಗ್ರಂಥವಾಗಿದೆ, ಹೀಗಾಗಿ ವಿದ್ಯಾರ್ಥಿಗಳು ಸಲುಗೆಯಿಂದ ಅದನ್ನು **"ಚೆನ್ನಮಲ್ಲನ ಟೊಣ್ಣೆ"** ಎಂದೇ ಕರೆಯುತ್ತಿದ್ದರು.

ಹೀಗೆ ಅಭ್ಯಾಸ ಕ್ರಮವನ್ನು ರೂಪಿಸಿಕೊಂಡಿದ್ದ ಮಧುರಚೆನ್ನರು 1921 ರಲ್ಲಿ – ಅಂದರೆ ಸರಿಯಾಗಿ ಒಂದು ನೂರು ವರ್ಷದ ಹಿಂದೆ – 'ಮುಲ್ಕೀ ಪರೀಕ್ಷೆ'ಗೆ ಹಾಜರಾಗಿ, ಮುಂಬಯಿ ಕರ್ನಾಟಕದ ಭಾಗಗಳಾಗಿದ್ದ ಆಗಿನ ಕರ್ನಾಟಕದ ವಿಜಾಪೂರ, ಬೆಳಗಾವಿ, ಧಾರವಾಡ, ಕಾರವಾರ ಜಿಲ್ಲೆಗಳಿಗೆ ಪ್ರಥಮ ಸ್ಥಾನಗಳಿಸಿ ಪಾಸಾದರು. ಇದು ಹಲಸಂಗಿ ಊರಿಗಷ್ಟೇ ಅಲ್ಲದೇ ಆ ಇಡೀ ಪ್ರದೇಶಕ್ಕೇ ಹೆಮ್ಮೆಯ ವಿಷಯವಾಯಿತು. ಜನತೆಯು ಹೃದಯದುಂಬಿ ಅವರನ್ನು ಪ್ರಶಂಸಿಸಿತು. ಆದರೆ ಅವರ ಶಿಕ್ಷಣವು ಈ ಮುಲ್ಕೀ ಪರೀಕ್ಷೆಗೇ ಮುಕ್ತಾಯಗೊಂಡಿತು. ಆದರೆ ಅಪಾರವಾದ ಜ್ಞಾನ ಸಂಪತ್ತನ್ನು ಸ್ವಪ್ರಯತ್ನದಿಂದ ದೊರಕಿಸಿಕೊಂಡರು. ಇಂಗ್ಲೀಷ ಕಲಿಯಬೇಕೆಂಬ ಅವರ ಹಂಬಲಕ್ಕೆ, ವಿಜಾಪೂರದ ರಾಷ್ಟ್ರೀಯ ವಿದ್ಯಾಲಯದ ಮುಖ್ಯಾಧ್ಯಾಪಕರಾಗಿದ್ದ ಕೊಲ್ಲೂರು ಹನುಮಂತರಾಯರು ನೆರವಾದರು. ಇಂಗ್ಲೀಷ ಭಾಷೆಯ ಜೊತೆಗೇ ಸಂಸ್ಕೃತ, ಹಳಗನ್ನಡವನ್ನೂ ಅಭ್ಯಾಸ ಮಾಡುತ್ತ, ಇನ್ನೂ ಓದಬೇಕು, ಇನ್ನೂ ಓದಬೇಕು, ಜ್ಞಾನದ ಹಸಿವು ಇಂಗಿಸಿಕೊಳ್ಳಬೇಕು ಎಂಬ ಗುಂಗಿನಲ್ಲಿ ಇರುವಾಗಲೇ, ತಾಯಿಯ ಕಕ್ಕುಲತೆಯು ಅಡ್ಡ ಬಂದಿತು. ಹೀಗಾಗಿ ತುಂಬ ಕಳವಳದಿಂದ ಊರಿಗೆ ಬಂದು 'ಸಂಸಾರ ಬಂಧನ'ದಲ್ಲಿ ಸಿಲುಕಿಕೊಂಡರು.

ಯಾವುದೇ ಸಂಪರ್ಕ–ಸಾಧನಗಳು ಇಲ್ಲದ ಹಲಸಂಗಿಯಂತಹ ಸಣ್ಣ ಹಳ್ಳಿಯಲ್ಲಿ ಇದ್ದುಕೊಂಡೇ ವೇದ, ಉಪನಿಷತ್ತು, ಭಾರತೀಯ–ಪಾಶ್ಚಿಮಾತ್ಯ ತತ್ತ್ವಜ್ಞಾನ, ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಅರವಿಂದರ ವಿಚಾರಧಾರೆಗಳೊಂದಿಗೆ ಕಲೆ, ಸಾಹಿತ್ಯವನ್ನೆಲ್ಲ ಅವರು ಚೆನ್ನಾಗಿ ತಿಳಿದುಕೊಂಡಿದ್ದರು. ಜೊತೆಗೆ ಇಪ್ಪತ್ತಕ್ಕೂ ಮಿಕ್ಕಿ ಹೆಚ್ಚು ಭಾಷೆಗಳನ್ನು ಸ್ವಪ್ರಯತ್ನದಿಂದ ಕಲಿತರು. ಪತ್ನಿ ಬಸಮ್ಮನೊಂದಿಗೆ ಸಂಸಾರ ಹುಡುದ ಮಧುರಚೆನ್ನರಿಗೆ ಪ್ರಾಪಂಚಿಕ ಜೀವನ ತ್ಯಾಜ್ಯವಾಗಿ ಕಾಣಲಿಲ್ಲ. ಲೌಕಿಕ ಮತ್ತು ಪಾರಮಾರ್ಥಿಕ ಎರಡರಲ್ಲೂ ಸಮನ್ವಯ ಸಾಧಿಸುವ ಶರಣ ಸಂಪ್ರದಾಯ ಅವರ

ಬೆನ್ನ ಹಿಂದಿತ್ತು. ಮನೆಯ ಆರ್ಥಿಕ ಪರಿಸ್ಥಿತಿ ಹದಗೆಡತೊಡಗಿತ್ತು. ಮನೆಯ ಜನರ ಮನಸ್ಥಿತಿಯೂ ಸರಿ ಉಳಿದಿರಲಿಲ್ಲ. ಬಾಲ್ಯದಿಂದಲೇ ಅಂಟಿಕೊಂಡು ಬಂದ ಅನಾರೋಗ್ಯವೂ ಅವರನ್ನು ಮತ್ತೊಂದೆಡೆ ಕಾಡುತ್ತಿತ್ತು. ಇಂತಹ ವಿಷಮ ಸ್ಥಿತಿಯಲ್ಲಿಯೇ ಅವರು ಆತ್ಮಾನುಸಂಧಾನವನ್ನು ನಡೆಸಿದರು. ಶಿವಯೋಗದೊಂದಿಗೆ ಪೂರ್ಣ ಯೋಗವನ್ನೂ ಸಾಧಿಸಿದರು. ಜೊತೆಗೆ ಎರಡು ಮಕ್ಕಳ ತಂದೆಯೂ ಆದರು.

ಮಧುರಚೆನ್ನರು ಯಾವುದೋ ಒಂದು ಸಂದರ್ಭ, ಸನ್ನಿವೇಶಕ್ಕೆ ಸಿಕ್ಕು ಅಂತರ್ಮುಖಿಯಾದವರಲ್ಲ; ಅವರು ಸ್ವಭಾವತಃ ಅಂತರ್ಮುಖಿಗಳು. ಪ್ರಪಂಚಿಯಾಗಿದ್ದರೂ ಅದರಲ್ಲಿ ಮುಳುಗದಂತೆ ಪಾರಮಾರ್ಥಿಕವನ್ನು ದೃಷ್ಟಿಸಿದವರು. ತೀರ ಎಳೆಯರಿರುವಾಗಲೇ ಆರಂಭವಾದ ಅವರ ಮುಗ್ಧಭಕ್ತಿ, ಸಾಧನೆ, ಹಂತಹಂತವಾಗಿ ಮೇಲೇರುತ್ತ, ನಡುನಡುವೆ ಹೊಯ್ದಾಡಿ ಹೊಯ್ದಾಡಿ, ಐಕ್ಯಸ್ಥಲದ ದಿವ್ಯಾನುಭವವನ್ನು ಪಡೆದುಕೊಂಡಿತು. ಶ್ರೀ ಅರವಿಂದರ ಪರಿಭಾಷೆಯಲ್ಲಿಯೇ ಹೇಳುವದಾದಲ್ಲಿ, ಅಭೀಪ್ಸೆಯಿಂದ ಮೊದಲಾಗಿ ಅತಿಮಾನಸದ ಅವತರಣದಲ್ಲಿ ತನ್ನ ನಿಲುವಿಕೆಯನ್ನು ಪಡೆದುಕೊಂಡಿತು. ಮಧುರಚೆನ್ನರ ಸಾಧನೆಯ ವೈಶಿಷ್ಟ್ಯವೆಂದರೆ ಶರಣರ ಷಟ್ಸ್ಥಲ ಸಿದ್ಧಾಂತ ಮತ್ತು ಶ್ರೀ ಅರವಿಂದರ ಪೂರ್ಣ ಯೋಗ ಸಿದ್ಧಾಂತಗಳ ಸಮನ್ವಯವಾಗಿದೆ.

ಮಧುರಚೆನ್ನರ ಅಂತರ್ಮುಖ ದೃಷ್ಟಿಯನ್ನು ಮೊದಲು ಅರಳಿಸಿದ್ದು ಅವರ ತಮದೆ ಓದುತ್ತಿದ್ದ "ಶಿವಲೀಲಾಮೃತ" ಗ್ರಂಥ. ಅದರಲ್ಲಿಯೇ ಮುಗ್ಧಭಕ್ತಿ, ಗುರೂಪದೇಶ, ಮಾನಸಪೂಜೆ, ಶಿವಸಾಕ್ಷಾತ್ಕಾರ ಇವು ಅರ ಮನಸ್ಸನ್ನು ಸೆರೆ ಹಿಡಿದವು. ಆಗ ಅವರಿಗೆ ಶಿವನನ್ನು ಕಾಣುವ ಉತ್ಕಟವಾದ ಹಂಬಲವುಂಟಾಯಿತು. ಅದಕ್ಕಾಗಿ ಗುರೂಪದೇಶ ಪಡೆಯಲು ಮುಂದಾದರು. ಆದರೆ ಮುಂದೆ ಅದರ ಕೃತಕತೆಯು ಒಂದು ನಾಟಕದಂತೆ ತೋರಿದಾಗ, ಮಾನಸ ಪೂಜೆಗೆ ತೊಡಗಿದರು. ಅವರಿಗಾಗ ಕೇವಲ ಹನ್ನೆರಡುವರ್ಷ ವಯಸ್ಸು. ಒಂದೆಡೆ ಅವರೇ ಬರೆದಿರುವಂತೆ– 'ಹನ್ನೆರಡು ತುಂಬಿಲ್ಲ ಕನ್ನಕ್ಕಿ ನಾನಂದು/ ನನ್ನ ನಲ್ಲನ ಕಥೆಗೆ ಮರಳುಗೊಂಡೆ" ಎಂದು ಹೇಳಿಕೊಂಡಿದ್ದಾರೆ. ಮುಂದೆ ಬಾಲ್ಯ ಕಳೆದು ಮುಗ್ಧತೆಯ ಸ್ಥಳದಲ್ಲಿ ವೈಚಾರಿಕತೆಯು ಬೆಳೆಯತೊಡಗಿತು. ಪುರಾಣ–ಸಂಪ್ರದಾಯಗಳು ಅವರಿಗೆ ಕಟ್ಟುಕಥೆಗಳಂತೆ ಕಂಡವು. ಮನಸ್ಸಿನ ಹೊಯ್ದಾಟ–ಹೋರಾಟಗಳು ಹೆಚ್ಚುತ್ತ ಹೋದವು. ನಿಜವಾದ ದೇವರನ್ನು ಸೂಕ್ಷ್ಮವಾಗಿ

ಶೋಧಿಸತೊಡಗಿದರು. ಆಗ ಅವರಿಗೆ ಹದಿನೇಳು ವರ್ಷ ವಯಸ್ಸು! ಜಡಶಕ್ತಿಗಳಾದ ಮಳೆ, ಗಾಳಿ, ಗುಡುಗು, ಸಿಡಿಲಿನ ಭಯದ ಕುರಿತ ಪುರಾಣದ ಕಥೆಗಳು, ದೇವರ ಮೂರ್ತಿಗಳು ಎಲ್ಲವೂ ಮಾನವ ಕಲ್ಪಿತ ಎಂಬುದನ್ನು ತಿಳಿದು ಮತ್ತಷ್ಟು ಜಿಗುಪ್ಸೆಗೊಂಡರು. ಅವರಲ್ಲಿ ನಾಸ್ತಿಕತೆ ಮತ್ತು ವೈರಭಾವ ಹೆಚ್ಚಿತು. ಆದರೆ ಈ ಅವಧಿಯಲ್ಲಿಯೇ 'ಸ್ವಾಮಿ ವಿವೇಕಾನಂದರ ಚರಿತ್ರೆ' ಅವರಿಗೆ ಸ್ವಲ್ಪ ಸಮಾಧಾನವನ್ನು ತಂದುಕೊಟ್ಟಿತು. "ಜಡಶಕ್ತಿಗೇ ದೇವರೆನ್ನುವರು" ಎನ್ನುವ ನಿರ್ಧಾರಕ್ಕೆ ಬಂದು ನಿಂತರು. ಇಷ್ಟಾಗಲಿಕ್ಕೆ ಅವರಿಗೆ ನಾಲ್ಕು ವರ್ಷಗಳ ಅವಧಿ ಹಿಡಿದಿತ್ತು. ಅವರಲ್ಲಿಯ ವೈರಭಾವವು ಕರಗಿ ಆರ್ತಭಾವವು ಮೂಡತೊಡಗಿತು. "ತಂದೆ ಕಣ್ಣು ತೆರೆ! ನಿನ್ನ ನೆಲೆ ಹತ್ತದೆ ಬದುಕಲಿಕ್ಕೆ ಸಾಧ್ಯವಿಲ್ಲ!" ಎಂದು ತಮ್ಮ ಕರುಳಕರೆಯನ್ನು ನಿವೇದಿಸಿದರು. ಈ ಅವಧಿಯಲ್ಲಿಯೇ ಅವರ ಅಂತರಂಗದ ತುಮುಲ, ತಳಮಳ ಕುದಿದು ಆತ್ಮಹತ್ಯೆಗೂ ಮುಂದಾಗಿದ್ದರು. ಆಗ ಅವರ ವಯಸ್ಸು ಇಪ್ಪತ್ತೊಂದು ಮಾತ್ರ!

ಇದೇ ಅವಧಿಯಲ್ಲಿಯೇ ಶ್ರೀ ಅರವಿಂದರ "ಪೂರ್ಣಯೋಗದ ವಿಚಾರಗಳನ್ನು ಮನನ ಮಾಡತೊಡಗಿದರು. ಈ ಸಮಯಕ್ಕಾಗಲೇ ಕರ್ನಾಟಕದಲ್ಲೂ ಆಲೂರು ವೆಂಕಟರಾಯರು, ಹರ್ಡೇಕರ ಮಂಜಪ್ಪನವರು, ರಂಗನಾಥ ದಿವಾಕರ, ಶಂ.ಬಾ.ಜೋಶಿ, ಕುವೆಂಪು, ಅಗರಮ್ ವೆಂಕಟರಾಯ, ಕುಮಾರ ಸ್ವಾಮಿಗಳು, ಬಾಳಿ ವಕೀಲರು ಹೀಗೆ ಮೊದಲಾದವರು ಶ್ರೀ ಅರವಿಂದರಿಂದ ಪ್ರಭಾವಿತರಾಗಿದ್ದರು. ಶಂ.ಬಾ.ಜೋಶಿವರು 1921 ರ ಸಮಯಕ್ಕೇ "ಶ್ರೀ ಅರವಿಂದರ ಚರಿತ್ರೆ"ಯನ್ನು ಕನ್ನಡದಲ್ಲಿ ಮೊದಲ ಬಾರಿಗೆ ಬರೆದು ಪ್ರಕಾಶನಗೊಳಿಸಿದ್ದರು. ಅದರಲ್ಲೂ ಕರ್ನಾಟಕದಿಂದ ಮೊಟ್ಟಮೊದಲು ಶ್ರೀ ಅರವಿಂದರನ್ನು ಕಂಡು ಧನ್ಯರಾದವರು ಬಾಳಿ ವಕೀಲರು, ಶ್ರೀ ಕುಮಾರ ಸ್ವಾಮಿಗಳು, ಪ್ರೊ.ಮಾಳವಾಡರ ಅತ್ತೆಯವರು ಪ್ರಮುಖರಾಗಿದ್ದಾರೆ. ಶ್ರೀ ಅರವಿಂದರು 'ಸಾಕ್ಷಾತ್ಕಾರೀ ಪುರುಷ'ರೆಂದೇ ಅರಿತುಕೊಂಡ ಮಧುರಚೆನ್ನರು ಅವರ ಗ್ರಂಥಗಳನ್ನು ಓದುವದರತ್ತ ಹೆಚ್ಚಿನ ಆಸಕ್ತಿಯನ್ನು ವಹಿಸಿದರು. ತಲ್ಲಣಗೊಂಡ ಮನಸ್ಸಿಗೆ ಅದರಿಂದ ನೆಮ್ಮದಿಯನ್ನು ತಂದುಕೊಂಡರು. ಅಷ್ಟಾದರೂ ಅವರ 'ದೇವರ ಹುಡುಕಾಟ' ಅದರ ಬಗೆಗಿನ ತೊಳಲಾಟ ನಿಲ್ಲಲಿಲ್ಲ.

(ಸಶೇಷ)

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

### ಜೆ.ಪಿ.ನಗರ 1ನೇ ಹಂತ, ಬೆಂಗಳೂರು

1) ದಿನಾಂಕ 26ನೇ ಅಕ್ಟೋಬರ್ ಮಂಗಳವಾರ ಶ್ರೀ ಅರವಿಂದ ಸಂಕೀರ್ಣದವತಿಯಿಂದ ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ ಡಾ॥ ದ.ರಾ. ಬೇಂದ್ರೆಯವರ 41ನೇ ಪುಣ್ಯಸ್ಮರಣೆ ಆಚರಿಸಲಾಯಿತು. ತತ್ಸಬಂಧ ಸಾಯಂಕಾಲ 4:00 ರಿಂದ 5:30ರ ವರೆಗೆ ಶ್ರೀ ಶ್ಯಾಮಸುಂದರ ಬಿದರಕುಂದಿರವರಿಂದ "ಬೇಂದ್ರೆಯವರಲ್ಲಿ ಅರಳಿದ ಅರವಿಂದ ಪುಷ್ಪ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು, ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಗೂ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಾಲೆಯ ಪ್ರಾಂಶುಪಾಲರು ಮತ್ತು ಶಿಕ್ಷಕರು ಹಾಜರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಅರವಿಂದೋ ಸೊಸೈಟಿ ರಾಜ್ಯಸಮಿತಿ ಕರ್ನಾಟಕ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ವಹಿಸಿದರು. ಜೂಮ್ ಹಾಗೂ ಯೂಟ್ಯೂಬ್ ಲಿಂಕ್ ಮುಖಾಂತರ ಸಹ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಭಾಗವಸಿದ್ದರು.

2) ದಿನಾಂಕ 30ನೇ ಅಕ್ಟೋಬರ್ 2021 ಶನಿವಾರ ಸಂಜೆ 5:00 ರಿಂದ 6:30 ಗಂಟೆಯ ವರೆಗೆ ಡಾ॥ ಅಲೋಕ್ ಪಾಂಡೇ, ಶ್ರೀ ಅರವಿಂದೋ ಸೊಸೈಟಿ, ಪಾಂಡಿಚೇರಿ ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "True Surrender" ಎಂಬ ವಿಷಯವಾಗಿ ಜೂಮ್ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀ ಮಾತಾರವಿಂದರ ಭಕ್ತರು ಭಾಗವಹಿಸಿದ್ದರು.

*

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |



ಪರಮಾತಿ ಪರಮ ಪಾವಿತ್ರ್ಯಪೂರ್ಣ ದಿವ್ಯಾಗ್ನಿ ಪರಿಧಿಗಳಲಿ
ರಿಕ್ತದವಕಾಶದೆಡೆಯಲ್ಲಿ ಈಗ ಅನುಭೂತಿ ಮೇಳಗಳಲಿ
ಗುಹ್ಯಾತಿಗುಹ್ಯ ವಿಧಿಯನುಷ್ಠಾನ ಸಾರೂಪ್ಯಗೊಳ್ಳುತಿರಲು
ವರ್ಣಮಯವಾಗಿ ಆವರಣಗೊಂಡ ಹಿಂಪರದೆ ತಾಣವಿರಲು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ2 ರೇಣು 8 ಪುಟ 227)**

**ಫೋಟೊ: ಇಮೇಜಿಂಗ್ ಸಾವಿತ್ರಿ**

**RNI No. 22511/1971**
No. of Pages **68 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಇದು ನಮ್ಮನೀಗ ಕಾಲರಾಹಿತ್ಯದಾ ನಿತ್ಯ–ತತ್ತ್ವ ಜೊತೆಗೆ
ಆ ಋತದ ಒಡನೆ ತಲ್ಲೀಯದಲ್ಲಿ ಸಂಯೋಗಗೊಳಿಸಿ ಹೀಗೆ
ಇದು ತರುತಲಿಹುದು ನಮ್ಮೆದೆಗೆ ಈಗ ಧ್ರುವಸ್ಥಿತಿಯ ಪರಮ–ಪದವ
ಇದು ದೇವ ಸದೃಶ ಸಾವಿರದ–ಸರಣಿ–ಚಿಂತನದ ಸ್ವಾನುಭವವ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 2 ಪುಟ 110)**

**ಫೋಟೊ: ಇಮೇಜಿಂಗ್ ಸಾವಿತ್ರಿ**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.